ಪನ್ಯಾಸ
ಥಮಾಲೆ

೨೩೪

ಪ್ರೇಮಚಂದರ ಸಣ್ಣ ಕತೆಗಳು

ಡಾ|| ಬಿ. ಎಫ್. ಹಸರಾಣಿ
ಎಂ.ಎ., ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾರ್ಚ, ೧೯೭೬

ರಜತಮಹೋತ್ಸವ ಪ್ರಕಟನೆ
ಉಪನ್ಯಾಸ ಗ್ರಂಥಮಾಲೆ
೨೩೪

ಪ್ರೇಮಚಂದರ ಸಣ್ಣಕತೆಗಳು

ಡಾ॥ ಬಿ. ಎಫ್. ಹಸರಾಣಿ
ಎಂ. ಎ., ಪಿಎಚ್. ಡಿ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಮಾರ್ಚ, ೧೯೭೬

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩

ಪ್ರಥಮ ಮುದ್ರಣ: ೫,೦೦೦ ಪ್ರತಿಗಳು
ಮಾರ್ಚ, ೧೯೭೬

ಬೆಲೆ: ೨೫ ಪೈಸೆ

ಮುದ್ರಕರು:
ಜಿ. ಎಂ. ಉಮಾಪತಿ ಶಾಸ್ತ್ರಿ, ಎಂ. ಎ.
ಸುಕುಮಾರ ಮುದ್ರಣಾಲಯ,
ಶಾರದಾಭವನ, ಕೋ-ಆಪ್. ಹೌಸಿಂಗ್ ಸೊಸೈಟಿ, ಬಾಗಲಕೋಟೆ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಅದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೨೩೩ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೨೫-೩-೧೯೭೬

ಆರ್. ಸಿ. ಹಿರೇಮಠ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ಅಂಗವಾಗಿ ರಾಯಚೂರ ಜಿಲ್ಲೆಯ ಯರಗೇರಿ ಗ್ರಾಮದಲ್ಲಿ ಜರುಗಿದ ೧೪ ನೇ ಉಪನ್ಯಾಸ ಶಿಬಿರದಲ್ಲಿ ಭಾಗವಹಿಸಿ ಖ್ಯಾತ ಹಿಂದೀ ಸಾಹಿತಿ ಪ್ರೇಮಚಂದರ ಸಣ್ಣಕತೆಗಳ ಮೇಲೆ ಮಾತನಾಡುವ ಸದವಕಾಶ ನನಗೆ ದೊರಕಿತ್ತು. ಆ ವ್ಯಾಖ್ಯಾನದ ವಿಸ್ತೃತರೂಪವೇ ಈ ಕಿರುಹೊತ್ತಿಗೆ. ಈ ವಿವೇಚನೆಯು ಅಪರಿಪೂರ್ಣವೆನ್ನಿಸಬಹುದಾದರೂ ಸಹ ಜಿಜ್ಞಾಸು ಪಾಠಕರಿಗೆ ಅಲ್ಪಮಟ್ಟಿಗಾದರೂ ಅವರ ಜ್ಞಾನತೃಷೆಯನ್ನು ನಿವಾರಿಸುವಲ್ಲಿ ಅದು ನೆರವಾದರೆ ನನ್ನೀ ಶ್ರಮ ಸಾರ್ಥಕವೆಂದು ಭಾವಿಸುವೆ.

ಉಪನ್ಯಾಸವನ್ನೀಯಲು ಅವಕಾಶ ಮಾಡಿಕೊಟ್ಟು ಅವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಸಂದರ್ಭವನ್ನುಂಟು ಮಾಡಿ ಪ್ರೋತ್ಸಾಹಿಸಿದ ಡೈರೆಕ್ಟರರಾದ ಮಾನ್ಯ ಶ್ರೀ ಚೆನ್ನವೀರ ಕಣವಿಯವರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ಉಪನ್ಯಾಸ ಶಿಬಿರದಲ್ಲಿ ಭಾಗವಹಿಸುವಂತೆ ನನಗೆ ಎಲ್ಲ ರೀತಿಯಿಂದಲೂ ಅನುಕೂಲ ಮಾಡಿಕೊಟ್ಟು ಸಹಕರಿಸಿದ ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಮ್. ಗುಡ್ಡೀನ ಅವರಿಗೂ ನನ್ನ ಕೃತಜ್ಞತೆಗಳು.

ಇದನ್ನು ಬರೆಯುವಾಗ ಓದಿ ಸೂಕ್ತ ಸಲಹೆಗಳನ್ನಿತ್ತ ನನ್ನ ವಿದ್ಯಾಗುರುಗಳಾದ ಪೂಜ್ಯ ಶ್ರೀ ಆರ್. ಕೆ. ಮುದಲಿಯಾರವರಿಗೆ ನಾನು ಉಪಕೃತನಾಗಿದ್ದೇನೆ. ಇದನ್ನು ಓದಿದ ನಂತರ ಹಲಕೆಲವು ಬದಲಾವಣೆಗಳನ್ನು ಮಾಡಲು ಸೂಚನೆಗಳನ್ನಿತ್ತ ಮಹನೀಯರಿಗೆ ವಂದನೆಗಳು. ಉಪನ್ಯಾಸಕ್ಕಾಗಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವ ಬಗ್ಗೆ ಮಾಹಿತಿಯನ್ನು ನೀಡಿ ನೆರವಾದ ಪ್ರಿನ್ಸಿಪಾಲ ಶ್ರೀ ವ್ಹಿ. ಎನ್. ಉಪ್ಪಿನವರಿಗೆ ನನ್ನ ನೆನಕೆಗಳು. ಇದನ್ನು ತಯಾರಿಸುವ ಪೂರ್ವದಲ್ಲಿ ನನ್ನ ಅಧ್ಯಯನಕ್ಕೆ ನೆರವಾದ ಅನೇಕ ಹಿಂದೀ ಕನ್ನಡ ಗ್ರಂಥಗಳ ಗ್ರಂಥಕರ್ತರಿಗೆ ಹಾಗೂ ಕೆಲವು ಪತ್ರಿಕೆಗಳಿಗೆ ಋಣಿಯಾಗಿದ್ದೇನೆ.

ಡಾ॥ ಬಿ. ಎಫ್. ಹಸರಾಣಿ

ವ್ಹಿ. ಎಂ. ಎಸ್. ಆರ್. ವಸ್ತ್ರದ
ಆರ್ಟ್ಸ ಮತ್ತು ಸಾಯನ್ಸ ಕಾಲೇಜ
ಹುನಗುಂದ
೧೬–೩–೧೯೭೬

ಪರಿವಿಡಿ

ಪ್ರೇಮಚಂದರ ಸಣ್ಣ ಕತೆಗಳು

ಪ್ರೇಮಚಂದರ ಸಣ್ಣಕತೆಗಳ ಕಥನ ಕಲೆ:

ಪ್ರೇಮಚಂದರ ಕಥನಕಲೆಯು ಹಿಂದೀ ಕಥಾಸಾಹಿತ್ಯದಲ್ಲಿ ಒಂದು ಹೊಸಕ್ರಾಂತಿಕಾರಿ ತಿರುವು. ಅವರ ಸಮಕಾಲೀನ ಸಣ್ಣ ಕತೆಗಾರರಿಗೆ ಸ್ಫೂರ್ತಿಯ ಸೆಲೆಯು. ಈ ಸಣ್ಣ ಕತೆಗಾರರು ಕೇವಲ ಕಲೆಯ ಸಮರ್ಥಕರಾಗದೆ ಅದನ್ನು ಜೀವನದ ಒರೆಗಲ್ಲ ಮೇಲೆ ಇಟ್ಟು ಪರೀಕ್ಷಿಸಿದ್ದಾರೆ. ಅವರು ತಿಳಿದಂತೆ ಕಲೆ ಸಾಧ್ಯವಾಗಿರದೇ ಸಾಧನವಾಗಿದೆ.

ಅವರ ದೃಷ್ಟಿಯಲ್ಲಿ ಸಾಮಾಜಿಕ, ರಾಜನೈತಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ಮತ್ತು ಮಾನವ ಜೀವನಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಕಥಾಲೇಖಕರ ವಿಚಾರಗಳಿಗೆ ಅಭಿವ್ಯಕ್ತಿಯನ್ನು ನೀಡುವ ಸಾಧನ ಕಥನಕಲೆ. ಈ ಸಮಸ್ಯೆಗಳು ಕಥಾವಸ್ತು, ಪಾತ್ರರಚನೆ, ವರ್ಣನೆ ಮುಂತಾದ ಸಣ್ಣಕತೆಯ ತತ್ವಗಳ ಮೇಲೆ ತಮ್ಮ ಒತ್ತಡವನ್ನು ಹಾಕುತ್ತವೆ. ಸಮಸ್ಯೆಗಳ ದ್ವಂದ್ವದ ಚಿತ್ರಣವು ಸಣ್ಣಕತೆಯನ್ನು ಪ್ರಭಾವಪೂರ್ಣಗೊಳಿಸುತ್ತದೆ.

ಯಾವುದು ಕಲ್ಪನೆಯ ಪ್ರಯೋಗದ ಮೂಲಕ ಓದುಗರಲ್ಲಿ ವಾಸ್ತವಿಕತೆಯ ಭ್ರಮೆಯನ್ನುಂಟು ಮಾಡುತ್ತದೆಯೋ

ಹಾಗೂ ತನ್ನ ಉದ್ದೇಶಪೂರ್ತಿಗಾಗಿ ವಾಸ್ತವಿಕತೆಯ ಸ್ವರೂಪ ವನ್ನು ಉಪಸ್ಥಿತಗೊಳಿಸುತ್ತದೆಯೋ ಅದೇ ಕಥನಕಲೆ.

ಆಧುನಿಕ ಸಣ್ಣ ಕತೆಗಳಲ್ಲಿ ಬಹುತರವಾಗಿ ಒಂದು ಘಟನೆ, ಒಂದು ಆಂತರಿಕ ಆಲೋಕ ಸಜೀವವಾಗಿ, ಹೃದಯ ಸ್ಪರ್ಶಿಯಾಗಿ ಚಿತ್ರಿಸಲ್ಪಡುತ್ತವೆ. ಇದರಿಂದ ಸಣ್ಣ ಕತೆಗೆ ಪ್ರಭಾವೋತ್ಪಾದಕ ಶಕ್ತಿ ಬರುತ್ತದೆ. ಈ ಕತೆಗಳ ಬೆಲೆಯನ್ನು ಘಟನಾ ವಿನ್ಯಾಸದಿಂದ ನಿರ್ಧರಿಸದೇ ಪಾತ್ರಗಳ ಮನಃಸ್ಥಿತಿಯ ತಳಹದಿಯ ಮೇಲೆ ನಿರ್ಧರಿಸಲಾಗುತ್ತದೆ. ಆದ್ದರಿಂದ ಸಣ್ಣ ಕತೆಯಲ್ಲಿ ಘಟನೆಗೆ ತನ್ನದೇ ಆದ ಮಹತ್ವವಿಲ್ಲ. ಆದರೆ ಪಾತ್ರಗಳ ಮನೋಭಾವಗಳನ್ನು ಪ್ರಕಟಪಡಿಸುವಾಗ ಮಾತ್ರ ಘಟನೆಗೆ ಮಹತ್ವ ಬರುತ್ತದೆ. ಆದಕಾರಣ ಘಟನೆಯು ಇಂದಿನ ಸಣ್ಣಕತೆಯ ಮುಖ್ಯ ಅಂಗವಲ್ಲ. ಸಣ್ಣಕತೆಯ ಆಧಾರ ಅನುಭವ, ಘಟನೆಯಲ್ಲ.

ಅನುಭವಗಳು ಉತ್ಕೃಷ್ಟ ಭಾವ ಹಾಗೂ ಉಚ್ಚ ವಿಚಾರಗಳ ಸಂಸ್ಕಾರ ಪಡೆದು, ರಚನಾತತ್ವಗಳ ತಿಗರಿಯಲ್ಲಿ ತೀಡಲ್ಪಟ್ಟು ಸಣ್ಣಕತೆಯ ರೂಪ ತಾಳುತ್ತವೆ. ಘಟನೆಯು ಮನೋವೈಜ್ಞಾನಿಕ ಸತ್ಯದೊಡನೆ ಬೆರೆತು ಪ್ರಕಟವಾದಾಗ ಮಾತ್ರ ಸುಂದರವಾದ ಸಣ್ಣಕತೆಯ ರಚನೆ ಸುಲಭ ಸಾಧ್ಯ. ಅವರ ಈ ಅಭಿಪ್ರಾಯದಂತೆ ಅವರ ಸಣ್ಣಕತೆಗಳಲ್ಲಿ ಕಲ್ಪನೆ ಕಡಿಮೆ ಪ್ರಮಾಣದಲ್ಲಿದ್ದು ಯಾವುದಾದರೊಂದು ಪ್ರೇರಣೆ ಅಥವಾ ಅನುಭವಗಳ ಪ್ರಮಾಣ ಹೆಚ್ಚಿಗಿದೆ. ಒಂದು ರೀತಿಯಲ್ಲಿ

ಮನೋವೈಜ್ಞಾನಿಕ ವಿಶ್ಲೇಷಣೆ ಆಧುನಿಕ ಸಣ್ಣ ಕತೆಗಳ ಪ್ರಾಣ ಶಕ್ತಿಯಾಗಿದೆ. ಘಟನೆ, ಪಾತ್ರಗಳು ಆ ಮನೋವೈಜ್ಞಾನಿಕ ಸತ್ಯವನ್ನು ಸ್ಥಿರಪಡಿಸುವುದಕ್ಕಾಗಿ ಬಳಸಲ್ಪಡುತ್ತವೆ. ಇಂತಹ ಸಣ್ಣ ಕತೆಗಳ ಪರಿಪಕ್ವತೆ, ಶುದ್ಧತೆ, ಆಳ ಅಸಾಧಾರಣವಾದುದು. ಪ್ರೇಮಚಂದರು ಅಂತರ್ರಾಷ್ಟ್ರೀಯ ಖ್ಯಾತಿ ಗಳಿಸಬಲ್ಲ ಮನೋ ವಿಶ್ಲೇಷಣಾತ್ಮಕ ಕತೆಗಳನ್ನು ರಚಿಸಿದ್ದಾರೆ.

ಆಧುನಿಕ ಸಣ್ಣ ಕತೆಗಳಲ್ಲಿ ದೊಡ್ಡ ದೊಡ್ಡ ವ್ಯಾಖ್ಯೆ ಕೊಡಬೇಕಾದ ಅಗತ್ಯವಿಲ್ಲ; ಪಾತ್ರಗಳ ಮನೋಭಾವಗಳ ಕಡೆಗೆ ಸಂಕೇತವೊಂದೇ ಸಾಕಾಗುತ್ತದೆ. ಪಾತ್ರಗಳ ಚರಿತ್ರವನ್ನು ಇಡಿಯಾಗಿ ಚಿತ್ರಿಸದೇ ಅದರ ಯಾವುದಾದರೊಂದು ಭಾಗ ವನ್ನು ಚಿತ್ರಿಸಿದರೆ ಸಾಕು. ಕತೆಯ ಪರಿಣಾಮ ಅಥವಾ ತತ್ವ ಎಲ್ಲರಿಗೂ ಹಿಡಿಸುವಂತಿರಬೇಕು.

ಚರಿತ್ರ ಪ್ರಧಾನ ಸಣ್ಣಕತೆಯ ಸ್ಥಾನ ಅತ್ಯುಚ್ಚವಾ ದುದು. ಇಂತಹ ಸಣ್ಣಕತೆಯಲ್ಲಿ ವಿಸ್ತೃತವಾದ ವಿಶ್ಲೇಷಣೆಗೆ ಅವಕಾಶವಿಲ್ಲ. ಇಲ್ಲಿ ಕತೆಗಾರನ ಧ್ಯೇಯ ಸಮಗ್ರವಾಗಿ ವ್ಯಕ್ತಿ ಯನ್ನು ಚಿತ್ರಿಸುವದಾಗಿರದೇ ಅವನ ಜೀವನ ಚರಿತೆಯ ಒಂದು ಭಾಗವನ್ನು ತೋರಿಸುವದಾಗಿದೆ.

ಸಣ್ಣಕತೆಗಳಲ್ಲಿ ಉಪದೇಶ ಅನಪೇಕ್ಷ್ಯವಾದುದು. ಆದರೆ ವಿಚಾರಗಳಿಗೆ ಉತ್ತೇಜನ ನೀಡಲು, ಭಾವಗಳನ್ನು ಜಾಗ್ರತ ಗೊಳಿಸಲು ಮನೋರಂಜನೆ, ಮಾನಸಿಕ ತೃಪ್ತಿ ಇವುಗಳಲ್ಲಿ

ಯಾವುದಾದರೂ ಒಂದನ್ನು ಮನುಷ್ಯ ಬಯಸುತ್ತಾನೆ. ಅಂತಹ ಸಣ್ಣ ಕತೆಯೇ ಉತ್ತಮವಾದ ಸಾಹಿತ್ಯಕೃತಿ ಎನ್ನಿಸಿಕೊಳ್ಳುತ್ತದೆ.

ಕೆಲವೇ ಶಬ್ದಗಳಲ್ಲಿ ಸಣ್ಣ ಕತೆಯನ್ನು ಹೇಳಬೇಕು. ಅದರಲ್ಲಿ ಯಾವುದೇ ಅನಾವಶ್ಯಕವಾದ ಶಬ್ದ ಅಥವಾ ವಾಕ್ಯ ಬರಕೂಡದು. ಅಸ್ವಾಭಾವಿಕ ಮಾತುಗಳಿಗೆ ಆಸ್ಪದವೇ ಇಲ್ಲ. ಏಕೆಂದರೆ ಅವುಗಳಲ್ಲಿ ಓದುಗನು ಜೀವನದ ಪ್ರತಿಬಿಂಬವನ್ನು ನೋಡ ಬಯಸುತ್ತಾನೆ. ಅದರ ಒಂದೊಂದು ವಾಕ್ಯ ಮತ್ತು ಪಾತ್ರವನ್ನು ಪದಾರ್ಥದ ರೂಪದಲ್ಲಿ ಕಾಣಬಯಸುತ್ತಾನೆ. ಮೊದಲನೆಯ ವಾಕ್ಯವೇ ಓದುಗನನ್ನು ಆಕರ್ಷಿಸಬೇಕು. ಕೊನೆಯ ವರೆಗೂ ಅವನನ್ನು ಮಂತ್ರ ಮುಗ್ಧಗೊಳಿಸುವ ಆರಂಭ ಕತೆಗೆ ಇರಬೇಕು. ಆರಂಭದಿಂದ ಮುಕ್ತಾಯದ ವರೆಗೆ ಓದುಗನ ಉತ್ಸಾಹ ಸ್ಥಿರವಾಗಿ ಉಳಿಯುವಂತಾಗಬೇಕು. ಮಧ್ಯದಲ್ಲಿ ಎಲ್ಲಿಯೂ ಅವನಿಗೆ ನಿರುತ್ಸಾಹ ಉಂಟಾಗಬಾರದು. ಅದರಲ್ಲಿ ತ್ವರಿತಗತಿ, ಹೊಸತನದೊಂದಿಗೆ ತತ್ವವೂ ಇರಬೇಕು. ತತ್ವಹೀನ ಕತೆಯಿಂದ ಮನೋರಂಜನೆ ದೊರೆಯಬಹುದು ಆದರೆ ಮಾನಸಿಕ ಹಸಿವೆಯನ್ನು ತೃಪ್ತಿ ಪಡಿಸುವದಕ್ಕೆ ಯಾವ ದಾದರೊಂದು ತತ್ವ ಇರಲೇಬೇಕಾದ ಅವಶ್ಯಕತೆ ಇದೆ.

ಇನ್ನೂ ಅನೇಕ ಶಾಖೋಪಶಾಖೆಗಳಾಗಿ ಹಬ್ಬಿಕೊಂಡಿರುವ ಅವರ ಕಥನ ಕಲೆಯ ಬೇರೆ ಬೇರೆ ರೂಪಗಳನ್ನು ಈ ಮುಂದೆ ಗುರುತಿಸಲಾಗಿದೆ. ಪ್ರೇಮಚಂದರು ಮಾನವ ಜೀವನದ ನೈಜತೆಯನ್ನು, ಸರಳತೆಯನ್ನು ಯಶಸ್ವಿಯಾಗಿ ಸಾಹಿತ್ಯಕ್ಕೆ

ಛಪ್ಪಿಂಯಿಸಿದ್ದಾರೆ. ಜೀವನದ ವಾಸ್ತವಿಕ ಸ್ವಾಭಾವಿಕ ಚಿತ್ರಣ ಅವರ ಕಥಾರಚನೆಯ ಉದ್ದೇಶ. ಅವರಿಗೆ ಜೀವನದಲ್ಲಿ ಘನತೆ ಕಾಣುತ್ತದೆ. ಪ್ರಕೃತಿಯಲ್ಲಿ ಸೌಂದರ್ಯ ಕಾಣುತ್ತದೆ. ಇವುಗಳನ್ನು ಸಣ್ಣ ಕತೆಗಳಲ್ಲಿ ಮನಸುಂಬುಗುವಂತೆ ಚಿತ್ರಿಸಿದ್ದಾರೆ. ಮತ್ತು ಅವುಗಳ ಉದಾತ್ತವಾದ ಸಂದೇಶವನ್ನು ಸಾರಿದ್ದಾರೆ. ತಮ್ಮ ನಿತ್ಯ ಜೀವನದಲ್ಲಿ ಜರುಗಿದ ಅನೇಕ ಕೌತುಕಪೂರ್ಣ ಘಟನೆಗಳನ್ನು ಮಾರ್ಮಿಕವಾಗಿ ವರ್ಣಿಸಿದ್ದಾರೆ. ಸಾಮಾಜಿಕ ಮೌಲ್ಯಗಳಲ್ಲಿ ಬದಲಾವಣೆಯಾಗ ಬೇಕೆಂಬುದರ ಕಾರ್ಯ ಕಾರಣ ಸಂಬಂಧವನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ.

ಹೆಣ್ಣಿನ ಬಗ್ಗೆ ಔದಾರ್ಯ ತೋರಿ ಅವಳಿಗೆ ಗೌರವದ ಸ್ಥಾನವನ್ನಿತ್ತಿದ್ದಾರೆ. ಅವಳ ಬಗ್ಗೆ ಹಸನಾದ ದೃಷ್ಟಿ, ಉದಾತ್ತ ಭಾವನೆಗಳಿವೆ. ಅವರ ಕತೆಗಳಲ್ಲಿ ರಾಷ್ಟ್ರಾಭಿಮಾನವಿದೆ. ಪಾಶ್ಚಿಮಾತ್ಯರಲ್ಲಿರುವ ಶ್ರೇಷ್ಠ ಗುಣಗಳನ್ನು ಗೌರವಿಸಬೇಕೆಂದಿದ್ದಾರೆ.

ಶೈಲಿಯು ವ್ಯಕ್ತಿತ್ವದ ಪ್ರತೀಕವೆಂಬ ಮಾತು ಸಾಹಿತ್ಯಶಾಸ್ತ್ರದಲ್ಲಿ ಸಮ್ಮತಿಸಲ್ಪಟ್ಟಿದೆ. ಪ್ರೇಮಚಂದರು ತಮ್ಮ ವ್ಯಕ್ತಿತ್ವದ ಮುದ್ರೆಯನ್ನು ತಮ್ಮ ಸಣ್ಣ ಕತೆಗಳ ಶೈಲಿಗೆ ಒತ್ತಿದ್ದಾರೆ. ಸಾಹಿತ್ಯವು ಜೀವನದಿಂದ ಹುಟ್ಟುತ್ತಿದ್ದರೂ, ಅದು ಜೀವನಕ್ಕಿಂತ ಸುಂದರವಾಗಬಲ್ಲದೆಂಬ ಸಂಗತಿಯನ್ನು ಒಪ್ಪಲಾಗಿದ್ದರೂ ಒಬ್ಬ ಶ್ರೇಷ್ಠ ಸಾಹಿತಿಯು ಸಾಹಿತ್ಯಕೃತಿಗಿಂತ ಆತನ ಜೀವನ ಇನ್ನೂ ಹಿರಿದಾಗಿರುತ್ತದೆಂಬ ಸಂಗತಿ ಅವರ ಸಣ್ಣ ಕತೆಗಳಿಂದ ಗೊತ್ತಾಗುತ್ತದೆ.

ಇವರ ಸಣ್ಣ ಕತೆಗಳು ಸರಳವೂ, ವಿಚಾರಪ್ಲುತವೂ, ವಿಚಾರ ಪ್ರಚೋದಿತವೂ ಆಗಿವೆ. ಓದುಗನ ವಿಚಾರಕ್ರಿಯೆಯನ್ನು ಜಾಗ್ರತ ಗೊಳಿಸುತ್ತವೆ. ಅವನ ವಿಚಾರಗಳನ್ನು ಅರಳಿಸುತ್ತವೆ. ಅವನ ಸುಪ್ತ ವಿಚಾರಕ್ರಿಯೆಯನ್ನು ಕೆಣಕುತ್ತಲೇ ಮುಗಿಯುತ್ತವೆ. ಕತೆಯ ಮುಕ್ತಾಯವು ಓದುಗನ ಮನಸ್ಸನ್ನು ಉದ್ದೀಪಿಸುತ್ತದೆ.

ಅಕೃತ್ರಿಮತೆ, ಸುತ್ತಮುತ್ತಲಿನ ಬಾಳ್ವಿಯ ಸುಂದರ ಚಿತ್ರಣ, ಹೃದಯದ ಅನುಭವವನ್ನು ಅಥವಾ ಒಳತೋಟಿಯನ್ನು ನೇರವಾಗಿ ಬಿಚ್ಚಿ ತೋರಿಸುವ ಪ್ರಾಮಾಣಿಕತೆ, ನೇರವಾದ ಬಿಚ್ಚು ನುಡಿಗಳಿಗೆ ತಕ್ಕ ಸರಳ ಶೈಲಿ, ಕಿರುನುಡಿಯ ಮೂಲಕ ಹಿರಿದಾದ ವಿಷಯಗಳನ್ನು ಹಿಂಜಿ ಹೇಳಬಲ್ಲ ಸಾಮರ್ಥ್ಯ ಮುಂತಾದವು ಪ್ರೇಮಚಂದರ ಸಣ್ಣಕತೆಗಳ ಕಥನ ಕಲೆಯ ವೈಶಿಷ್ಟ್ಯಗಳು.

ಅವರು ತಮ್ಮ ಸಣ್ಣ ಕತೆಗಳ ಮೂಲಕ ಆ ಯುಗದ ಸತ್ಯ ಸ್ವರೂಪವನ್ನೇ ಜನತೆಯ ಮುಂದಿರಿಸಿದ್ದಾರೆ. ರಾಷ್ಟ್ರೀಯ ಚೈತನ್ಯಕ್ಕೆ ಸ್ವಸ್ಥವಾದ ಅಭಿವ್ಯಕ್ತಿಯನ್ನು ನೀಡಿದ್ದಾರೆ. ಆ ಕಾಲದ ವ್ಯಕ್ತಿಜೀವನ, ಸಮಾಜ ಜೀವನ ಮತ್ತು ರಾಷ್ಟ್ರೀಯ ಜೀವನಕ್ಕೆ ಸಂಬಂಧಿಸಿದ ವಿವಿಧ ರಂಗಗಳ ಒಳ ಹೊರಗನ್ನು ಚಿತ್ರಿಸುವಾಗ ಅವರ ಉಚ್ಚ ಮಟ್ಟದ ಕಥನ ಕಲೆಯ ಕೌಶಲ ಪ್ರಕಟವಾಗಿದೆ. ಆದರ್ಶ ಯಥಾರ್ಥಗಳೆರಡನ್ನೂ ಆಶ್ರಯಿಸಿರುವ ಅವರ ವಿವೇಚನ ಪದ್ಧತಿಯು ಕಥನ ಕಲೆಯ ಶ್ರೇಷ್ಠತೆಗೆ

ಮಾರ್ಗ ಮಾಡಿಕೊಟ್ಟಿದೆ. ಅವರ ಸಣ್ಣ ಕತೆಗಳಲ್ಲಿ ಭಾವ, ವಿಚಾರ, ಕಲ್ಪನೆಗಳ ಸುಂದರ ಸಾಮರಸ್ಯವಿದೆ. ಇಂತಹ ಮಹತ್ವದ ವಿಷಯಗಳನ್ನು ಪ್ರತಿಪಾದಿಸುವಾಗ ಅವರ ಕಥನ ಕಲೆಯು ಪ್ರೋಜ್ವಲವಾಗಿ ಬೆಳಗಿದೆ. ಅದು ಆದರ್ಶ, ವಾಸ್ತವತೆಗಳ ತಳಹದಿಯ ಮೇಲೆ ಹುಟ್ಟಿ ಬೆಳೆದು ತನ್ನ ಗುರಿಯನ್ನು ಸಾಧಿಸಿದೆ. ಅವರ ಸಣ್ಣ ಕತೆಗಳು ಕಥನಕಲೆಯ ಮುಖ್ಯಾಂಶಗಳಾದ ಅಭಿವ್ಯಕ್ತಿ ಮತ್ತು ಅನುಭೂತಿಯ ಆಗರಗಳಾಗಿವೆ.

ರಕ್ತೋಪಜೀವಿಯಾಗಿದ್ದ ಸಾಂಪ್ರದಾಯಿಕ ಮೂಢ ನಂಬಿಕೆಗಳನ್ನು, ಕಂದಾಚಾರಗಳನ್ನು ನಿರ್ಮೂಲಗೊಳಿಸಿ ದೇಶ, ಕಾಲಕ್ಕನುಸಾರವಾಗಿ ನವ್ಯತೆಯನ್ನು ವ್ಯಕ್ತಿ, ಸಮಾಜ ರಾಷ್ಟ್ರ ಮಟ್ಟದಲ್ಲಿ ಪ್ರಚುರಪಡಿಸಬೇಕೆಂದರು. ಈ ಬಗ್ಗೆ ತಮ್ಮ ಸಣ್ಣ ಕತೆಗಳಲ್ಲಿ ಸೂಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಜೀವನದ ಒಳಿತು ಕೆಡಕುಗಳ ಬಗ್ಗೆ ಅವರಿಗೆ ಸಾಕಷ್ಟು ಕಳಕಳಿಯಿತ್ತು. ಆದ್ದರಿಂದ ಅದು ಹೀಗಿರಬೇಕು, ಹೀಗಿರಬಾರದು ಎಂಬ ಮಾತನ್ನು ನಿರ್ದಾಕ್ಷಿಣ್ಯವಾಗಿ ಹೇಳಿದ್ದಾರೆ, ನಿರ್ದೇಶನ ನೀಡಿದ್ದಾರೆ. ಇದರಿಂದ ಅವರ ಸಣ್ಣಕತೆಗಳು ಕಾಂತಾಸಮ್ಮಿತ ಮತ್ತು ಸುಹೃದ್‌ಸಮ್ಮಿತವಾದವುಗಳೆನ್ನಬಹುದು. ಅವುಗಳಲ್ಲಿ ಸಮಗ್ರ ಭಾರತದೇಶ, ಭಾರತೀಯ ಜನಜೀವನ, ಭಾರತೀಯ ಸಂಸ್ಕೃತಿ ಚಿತ್ರಿತಗೊಂಡಿವೆ. ಅವರ ಕಥನ ಕಲೆ ಬಹುತರವಾಗಿ ಭಾವಪ್ರಧಾನವಾಗಿರದೇ ವಸ್ತುಪ್ರಧಾನವಾಗಿದೆ. ಕಥಾವೈಚಿತ್ರ್ಯ ಪ್ರಚಾರಕ, ಪ್ರಮೋದಕ–ಎರಡೂ ತರಹದ್ದಾಗಿದೆ.

ಹೀಗೆ ಪ್ರೇಮಚಂದರ ಸಣ್ಣಕತೆಗಳಲ್ಲಿ ಜೀವನ ಮತ್ತು ಕಲೆ ಏಕರಸಗೊಂಡಿವೆ. ಓದುಗರಿಗೆ ಕುತೂಹಲ ಮತ್ತು ಮನೋರಂಜನೆಯನ್ನುಂಟುಮಾಡುವದು, ಪರೋಕ್ಷವಾಗಿ ಅವರಿಗೆ ಮಾರ್ಗದರ್ಶನ ನೀಡುವದು, ಅವರ ಅಭಿರುಚಿಯನ್ನು ಬೆಳೆಸುವದು ಮುಂತಾದವು ಪ್ರೇಮಚಂದರ ಕಥನಕಲೆಯ ಮಹತ್ವದ ಕಾರ್ಯಗಳು. ಅವರು ಸಣ್ಣಕತೆಯ ಕಥನಕಲೆಯ ಎಲ್ಲ ಉಪಕರಣಗಳಲ್ಲಿ ಅದ್ಭುತವಾದ ಸಾಮಂಜಸ್ಯ ಹಾಗೂ ಹೊಂದಾಣಿಕೆಯನ್ನುಂಟು ಮಾಡಿ ಕಥನಕಲೆಯ ಉಚ್ಚತೆಯನ್ನು ಮೆರೆದಿದ್ದಾರೆ. **ಅವರ ಈ** ಕಥನಕಲೆಯ ಮುಖ್ಯ ಉದ್ದೇಶ ಜೀವನವನ್ನು ಚಿತ್ರಿಸುವದಾಗಿತ್ತೇ ವಿನಾ ಅದರ ವಿಧಿನಿಷೇಧಗಳನ್ನು ಕಣ್ಣುಮುಚ್ಚಿ ಅನುಕರಿಸುವದಾಗಿರಲಿಲ್ಲ.

ಅಂಗಗಳು: ಪ್ರೇಮಚಂದರ ಕಥನ ಕಲೆಯ ಅಂಗಗಳು ಈ ಕೆಳಗಿನಂತಿವೆ–

ಅ) ಪ್ರೇಮಚಂದರ ಸಣ್ಣಕತೆಗಳಲ್ಲಿ ಭಾವ ಮತ್ತು ವಿಚಾರ ಪ್ರಧಾನ ಪ್ರವೃತ್ತಿಗಳು (ಜೀವನ ದರ್ಶನ)

ಆ) ಪ್ರೇಮಚಂದರ ಸಣ್ಣಕತೆಗಳ ರಚನಾಕೌಶಲ.

ಮೇಲೆ ಪ್ರಸ್ತುತ ಪಡಿಸಿದ ಪ್ರೇಮಚಂದರ ಸಣ್ಣಕತೆಗಳ ಕಥನ ಕಲೆಯ ಎಲ್ಲ ಲಕ್ಷಣಗಳು ಈ ಎರಡೂ ಅಂಗಗಳಲ್ಲಿ ಸಮಾವೇಶಗೊಂಡಿವೆ. ಅವುಗಳ ವಿಸ್ತಾರಪೂರ್ವಕ ಅಧ್ಯಯನ ಇಲ್ಲಿದೆ:

(ಅ) ಜೀವನ ದರ್ಶನ

ಭಾವ ಮತ್ತು ವಿಚಾರ ಪ್ರಧಾನ ಪ್ರವೃತ್ತಿಗಳು ಮಾನವ ನಲ್ಲಿರಬೇಕಾದಂಥವುಗಳು. ಅವನ ಜೀವನಕ್ಕೆ ಸಂಬಂಧಿಸಿದ ಕ್ರಿಯೆ-ಪ್ರತಿಕ್ರಿಯೆಗಳಿಂದ ಹುಟ್ಟುವಂಥವುಗಳು. ಆದ್ದರಿಂದ ಪರ್ಯಾಯವಾಗಿ ಇಂಥ ಪ್ರವೃತ್ತಿಗಳಿಗೆ 'ಜೀವನದರ್ಶನ' ವೆಂತಲೂ ಇಲ್ಲಿ ಹೆಸರಿಸಲಾಗಿದೆ.

ಸಾಮಾಜಿಕ, ರಾಜನೈತಿಕ, ಆರ್ಥಿಕ ದೃಷ್ಟಿಯಿಂದ ಪ್ರೇಮಚಂದರ ಕಾಲದಲ್ಲಿ ಅರಾಜಕತೆ— ತಾಂಡವವಾಡುತ್ತಿತ್ತು. ಹೊಸ ಚೈತನ್ಯದ ಹೊನಲು ಹರಿಯುತ್ತಲಿತ್ತು. ಸಮಗ್ರ ದೇಶದಲ್ಲಿ ಸುಧಾರಣೆ, ಸಂಘರ್ಷದ ಬಿರುಗಾಳಿ ಬೀಸುತ್ತಲಿತ್ತು. ಸ್ವರಾಜ್ಯ ಮತ್ತು ಸುಧಾರಣೆಯ ಆಂದೋಲನ ಶರವೇಗದಲ್ಲಿ ಹರಡುತ್ತಲಿದ್ದವು. ದೇಶವಿದೇಶಗಳಲ್ಲಿ ಕ್ರಾಂತಿಯ ಧ್ವನಿ ಕೇಳಿಬರುತ್ತಿತ್ತು. ಕ್ರಿ. ಶ. ೧೯೧೪ರಿಂದ ೧೯೧೯ರ ವರೆಗೆ ಜರುಗಿದ ಜಾಗತಿಕ ಮಹಾಯುದ್ಧ, ರಶಿಯಾದೇಶದ ರಾಜ್ಯ ಕ್ರಾಂತಿ ಭಾರತೀಯ ಜನಮನದ ಮೇಲೆ ಪ್ರಭಾವ ಬೀರಿದವು. ಪ್ರೇಮಚಂದರೂ ಸಹ ಈ ಪ್ರಭಾವವಲಯದಿಂದ ದೂರ ಉಳಿಯಲು ಸಾಧ್ಯವಿರಲಿಲ್ಲ.

ವ್ಯಕ್ತಿ, ಸಮಾಜ, ರಾಷ್ಟ್ರದ ಉನ್ನತಿಗೆ ಅಡ್ಡಿಯನ್ನುಂಟುಮಾಡುತ್ತಲಿದ್ದ ಅಂಶಗಳಾವವೆಂಬುದನ್ನು ಚನ್ನಾಗಿ

ಅರಿತುಕೊಂಡು ಅವುಗಳನ್ನು ಒಂದೊಂದಾಗಿ ಕೈಬಿಡಬೇಕೆಂದೂ, ಈ ದಿಶೆಯಲ್ಲಿ ಸಕ್ರಿಯವಾಗಿ ಸಹಕರಿಸಬಲ್ಲ ಪ್ರಗತಿಪರವಾದ, ಸುಧಾರಣಾತ್ಮಕವಾದ ಹೊಸ ಹೊಸ ಅಂಶಗಳನ್ನು ರೂಢಿಸಿಕೊಳ್ಳಬೇಕೆಂದೂ ಅವರು ತಮ್ಮ ಕಥಾಸಾಹಿತ್ಯದ ಮೂಲಕ ಜನತೆಗೆ ಕರೆ ಇತ್ತರು. ತಮ್ಮ ಸಣ್ಣಕತೆಗಳಲ್ಲಿ ಚಿತ್ರಿಸಿದ ೧) ಸಾಮಾಜಿಕ, ೨)ರಾಜನೈತಿಕ, ೩)ಸಾಂಸ್ಕೃತಿಕ, ೪) ಧಾರ್ಮಿಕ, ೫) ಸೈದ್ಧಾಂತಿಕ, ೬) ಸ್ತ್ರೀಯ ಬಾಳಿನಲ್ಲಿ ಹೊಸಬೆಳಕು ಮುಂತಾದ ವಿವಿಧ ರಂಗಗಳಲ್ಲಿ ಇಂತಹ ಪ್ರಗತಿಪರವಾದ ಅಂಶಗಳನ್ನು ಪ್ರಯೋಗಿಸಿ ಅವುಗಳಿಂದುಂಟಾಗಬಹುದಾದ ಪರಿಣಾಮಗಳ ತಿಳುವಳಿಕೆ ಮಾಡಿಕೊಡುವದರೊಂದಿಗೆ ವ್ಯಾಪಕವಾಗಿ ಜೀವನದರ್ಶನ ಮಾಡಿಕೊಟ್ಟಿದ್ದಾರೆ. ಅದರ ಸಂಕ್ಷಿಪ್ತ ವಿವೇಚನೆ ಈ ಕೆಳಗಿನಂತಿದೆ–

೧. ಸಾಮಾಜಿಕ:

i) ನಿಮ್ನವರ್ಗೀಯ ಜನಾಂಗಗಳ ಶೋಷಣೆ:

ಪ್ರೇಮಚಂದರ ಕಾಲದಲ್ಲಿ ಜಮೀನುದಾರರು, ಮಿಲ್ಲುಗಳ ಮಾಲಿಕರು, ಧನಿಕರು, ಅಮಲ್ದಾರರು, ಅಂದಿನ ಪೋಲೀಸ ಅಧಿಕಾರಿಗಳು ರೈತರನ್ನು, ಕೂಲಿಕಾರರನ್ನು ಬಡವರನ್ನು ಕೆಳದರ್ಜೆಯ ಕರ್ಮಚಾರಿಗಳನ್ನು, ಜನಸಾಮಾನ್ಯರನ್ನು ಶೋಷಿಸುತ್ತಿದ್ದರು– 'ಸವಾಸೇರ ಗೋಹೂ' ಕತೆಯಲ್ಲಿ ತಾನು ಕುಲೀನನೆಂದು ಜಂಭ ಕೊಚ್ಚುವ ಒಬ್ಬ

ವಿಪ್ರನು ಶಂಕರನೆಂಬ ಒಬ್ಬ ಒಡರೈತನಿಗೆ ಸವಾಸೇರ ಗೋದಿಯನ್ನು ಕಡಕೊಟ್ಟು ಜೀವಂತವಿರುವ ವರೆಗೆ ಅವನನ್ನು ತನ್ನ ಮನೆಯಲ್ಲಿ ಪುಕ್ಕಟೆಯಾಗಿ ದುಡಿಸಿಕೊಳ್ಳುವದಲ್ಲದೇ ಅವನ ಮಗನನ್ನೂ ಸಹ ದುಡಿಸಿಕೊಳ್ಳುತ್ತಾನೆ. ಈ ಶೋಷಣೆಯ ಕಿಚ್ಚನ್ನು ನಂದಿಸಲು ಕತೆಗಾರನು ಗಾಂಧೀಜಿಯವರ ಹೃದಯ ಪರಿವರ್ತನ ಸಿದ್ಧಾಂತದ ಗಂಗೋದಕವನ್ನು ಎರಿದಿದ್ದಾನೆ.

ಒಡೆಯನು ವೇಳೆಗೆ ಸರಿಯಾಗಿ ಸಂಬಳ ಕೊಟ್ಟರೆ ಕೂಲಿಕಾರರ ಹೃದಯ ಪರಿವರ್ತನೆಯಾಗಿ ಅವರು ಕಳ್ಳತನ, ಸುಲಿಗೆಗಳಂತಹ ಹೀನಕೃತ್ಯಗಳಿಂದ ಮುಕ್ತರಾಗಿ ಆಸ್ಥೆವಹಿಸಿ ದುಡಿದು ಉತ್ಪಾದನೆ ಹೆಚ್ಚಲು ಸಹಕರಿಸುತ್ತಾರೆ. ಉದ್ಯೋಗಪತಿಗಳ ಮಿಥ್ಯಾಡಂಬರದಿಂದ, ಸ್ವಾರ್ಥಲೋಲುಪತೆಯಿಂದ ಕೂಲಿಕಾರರೊಡನೆ ಅವರ ಸಂಬಂಧ ವಿಷಮಿಸಿ ಹಾನಿಕಾರಕ ಆಂದೋಲನಕ್ಕೆ ಆಸ್ಪದವಾಗುತ್ತದೆ. ಇಂತಹ ಆಂದೋಲನವನ್ನು ಹೃದಯ ಪರಿವರ್ತನೆಯ ಸಿದ್ಧಾಂತದ ಮೂಲಕ ಸ್ಥಗಿತಗೊಳಿಸಲು ಸಾಧ್ಯವೆಂದಿದ್ದಾರೆ– ' ಡಾಮುಲ ಕಾ ಕೈದಿ ' ಕತೆಯಲ್ಲಿ ಕೂಲಿಕಾರರನ್ನು ತೆಗೆದು ಹಾಕುವುದು, ಸಂಬಳದಲ್ಲಿ ಕಡಿತ ಮಾಡುವುದು ಮುಂತಾದ ಅನಿಷ್ಟಗಳ ವಿರುದ್ಧ ಹರತಾಳ ಮತ್ತು ಕೂಲಿಕಾರರ ಸ್ಥಿತಿಯಲ್ಲಿ ಸುಧಾರಣೆಗಾಗಿ ಆಂದೋಲನ ಇವೆಲ್ಲವುಗಳ ವರ್ಣನೆ ಇದೆ. ಇಂತಹ ಸಂಘರ್ಷ ಕಾಲದಲ್ಲಿ ಕೃಷ್ಣ ಚಂದ್ರನ ಅಕಾಲಿಕ ಮರಣದಿಂದ ಮೆನೇಜರ ಮತ್ತು ಡೈರೆಕ್ಟರರ. ಹೃದಯ ಪರಿವರ್ತನೆಗಾಗಿ ಕೂಲಿಕಾರರ

ಎಲ್ಲ ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿಕೊಳ್ಳಲಾಗುತ್ತದೆ. ಶೋಷಣೆಯ ವಿರುದ್ಧ ಕೂಲಿಕಾರರನ್ನು ಎತ್ತಿ ಕಟ್ಟುವುದೇ ಈ ಕತೆಯ ಉದ್ದೇಶ. ಇಂತಹ ಉಪಾಯಗಳಿಂದಲೂ ಶೋಷಣೆಯ ಸಮಸ್ಯೆಗೆ ಪರಿಹಾರ ದೊರೆಯದಿದ್ದಾಗ ಸಮಾಜವಾದಿ ಪದ್ಧತಿಯೇ ಇದಕ್ಕೆ ಮದ್ದು ಎಂಬುದಾಗಿ ಪ್ರೇಮಚಂದರು ಭಾವಿಸಿದರು. ಶೋಷಿತರು ಒಂದುಗೂಡಿ ವರ್ಗ ಸಮನ್ವಯದ ಭಾವನೆಯನ್ನು ಪ್ರಚುರಪಡಿಸಬೇಕೆಂದು ಕರೆಕೊಟ್ಟರು. ಏಕೆಂದರೆ ಈ ಒಗ್ಗಟ್ಟಿನ ಮುಂದೆ ಶೋಷಕರು ತಲೆಬಾಗಲೇಬೇಕಾಗುತ್ತದೆಯೆಂಬುದು ಅವರ ನಿಲುವೆಯಾಗಿತ್ತು.

ಶೋಷಣೆಯ ಶಮನಕ್ಕಾಗಿ ಸ್ವರಾಜ್ಯವು ಬೆಳಕಿಗೆ ಬರಬೇಕೆಂದು 'ಆಹುತಿ' ಕತೆಯ ನಾಯಕ ವಿಶ್ವಂಭರನ ಮಾತುಗಳಲ್ಲಿ ಹೇಳಿದ್ದಾರೆ. ಆದರೆ ಈ ಸ್ವರಾಜ್ಯ ಧನಿಕರಕ್ಕೆಕೂಸಾಗದೇ 'ಸರ್ವಹಾರಾ' ಜನ ಸಮುದಾಯದ ಸ್ವತ್ತಾಗಬೇಕೆಂದು ಹೇಳಿ ರಶಿಯಾ ದೇಶದ 'ಬೋಲಶೆವಿಕ್' ಸರಕಾರದ ಮಾದರಿಯಲ್ಲಿ ಸ್ವರಾಜ್ಯ ಸ್ಥಾಪನೆಯಾಗಬೇಕೆಂದಿದ್ದಾರೆ. ಬೋಲಶೆವಿಕ್ ಸರಕಾರದ ಅಂಗವಾಗಿ ಒಂದು ಸರಕಾರಿ ಕೃಷಿಯೋಜನೆಯನ್ನು ಬೆಳಕಿಗೆ ತಂದು ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿ, ರೈತ ಬಾಂಧವರನ್ನು ಶೋಷಣೆಯಿಂದ ಮುಕ್ತಗೊಳಿಸಿ ದೇಶದಲ್ಲಿ ಸುಖ, ಶಾಂತಿ ಹೆಚ್ಚುವಂತೆ ಮಾಡಬೇಕೆಂದಿದ್ದಾರೆ. ಸಾಮ್ಯವಾದವು ಜಮೀನುದಾರರನ್ನು ಬಹಿಷ್ಕರಿಸಿದರೆ ಗಾಂಧೀವಾದದಿಂದ ಪ್ರಭಾವಿತ

ರಾದ ಪ್ರೇಮಚಂದರು ಅವರನ್ನು ಒಂದು 'ಟ್ರಸ್ಟ'ರೂಪ ದಲ್ಲಿ ಉಳಿಯಗೊಡಬೇಕೆಂದಿದ್ದಾರೆ.

ii) ವಿವಾಹಗಳು:

ಪ್ರೇಮಚಂದರು ವಿವಾಹವನ್ನು ಒಂದು ಸಾಮಾಜಿಕ ಒಪ್ಪಂದ, ಧಾರ್ಮಿಕ ಬಂಧನ, ಆತ್ಮಪ್ರತಿಜ್ಞೆಯೆಂದು ಪರಿ ಭಾಷಿಸಿದರು. ಸ್ತ್ರೀಪುರುಷರ ಆತ್ಮೋನ್ನತಿ ವಿವಾಹದ ಮುಖ್ಯ ಉದ್ದೇಶ. ಪಾಶವಿಕ ಭೋಗವನ್ನು ಹೋಗಲಾಡಿಸಲು ವೈವಾಹಿಕ ಜೀವನವು ಒಂದು ಸಿದ್ಧ ಪಥಿಯಂತಿದೆ. ಅದನ್ನು ಮುರಿಯುವ ಪ್ರಯತ್ನ ಧರ್ಮಸಮ್ಮತವೆನ್ನಿಸದು. ಈ ಒಪ್ಪಂದವೇರ್ಪಡುವ ಪೂರ್ವದಲ್ಲಿ ಸಂಭವಿಸುವ ಯಾವದೇ ಬದಲಾವಣೆಯು ಅನೈತಿಕವೆನ್ನಿಸದು. ಆದಕಾರಣ ಈ ಒಪ್ಪಂದ ಒಂದು ಭದ್ರವಾದ ತಳಹದಿಯ ಮೇಲೆ ಏರ್ಪಡ ಬೇಕೆಂದು ತಮ್ಮ ಕತೆಗಳಲ್ಲಿ ಹೇಳಿದ್ದಾರೆ. ಈ ದೃಷ್ಟಿಯಿಂದ ವಧು-ವರರಿಬ್ಬರಲ್ಲಿಯೂ ಪ್ರೀತಿ, ವಿಶ್ವಾಸ ಬೆಳೆದು ಬರಬೇಕು. ಪ್ರೀತಿಯಿಲ್ಲದ ವಿವಾಹಕ್ಕೆ ಅರ್ಥವೇ ಇಲ್ಲವೆಂದಿದ್ದಾರೆ. ಪ್ರೇಮ ವಿವಾಹವಾಗಬೇಕೆನ್ನುವ ಭಾರತೀಯ ಸುಶಿಕ್ಷಿತ ಮಹಿಳೆಯರ ವಿಚಾರಸರಣಿಯ ಒಗ್ಗೆ ವಿಷಾದಿಸಿದ್ದಾರೆ.

ವಿಷಮ ವಿವಾಹ, ಬಾಲವಿವಾಹ, ವಿಧುರವಿವಾಹ, ಬಹುವಿವಾಹ, ವಿವಾಹ ವಿಚ್ಛೇದನ ಮುಂತಾದ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಗೆಡಹುವಂತಹ ಅನಪೇಕ್ಷಣೀಯವಾದ

ಪದ್ಧತಿಗಳನ್ನು ತಿರಸ್ಕರಿಸಿದರು. ವಿಧವಾ ವಿವಾಹವನ್ನು ಸಮರ್ಥಿಸಿದರು.

ವಿಷಮ ವಿವಾಹ: ಯುವಕ ಯುವತಿಯರು ಜೀವನ ಪರ್ಯಂತ ಅವಿವಾಹಿತರಾಗಿ ಉಳಿದರೂ ಚಿಂತೆಯಿಲ್ಲ. ಆದರೆ ಪರಸ್ಪರ ವಿರೋಧಾತ್ಮಕ ಗುಣ ಕರ್ಮ ಸ್ವಭಾವವುಳ್ಳ ವಧು ವರರಲ್ಲಿ ವಿವಾಹವಾಗಲೇಕೂಡದೆಂದು ಅಭಿಪ್ರಾಯಪಟ್ಟಿದ್ದರು. ಸ್ವತಃ ತಮ್ಮ ತಂದೆಯು ಇಳಿವಯಸ್ಸಿನಲ್ಲಿ ಮದುವೆಯಾದು ದನ್ನು ಸಹಿಸದಾದರು. ವಯಸ್ಸಿನಿಂದ ತಮಗಿಂತಲೂ ದೊಡ್ಡವಳಾದ ಸ್ತ್ರೀಯೊಡನೆ ಪ್ರೇಮಚಂದರ ವಿವಾಹವಾ ಗಿತ್ತು. ಈ ವಿಷಮ ವಿವಾಹದಿಂದ ತಾವೇ ಮುಕ್ತರಾಗಿ ತಮ್ಮ ಅಭೀಷ್ಟದಂತೆ ಇನ್ನೊಬ್ಬ ಮಹಿಳೆಯನ್ನು ಮದುವೆ ಯಾದರು. ವಿಷಮ ವಿವಾಹದಿಂದಾಗಿ ವಿಧವೆಯಾಗುವ '**ನರಕ ಕಾ ಮಾರ್ಗ**' ಕತೆಯ ಕಥಾನಾಯಕಿಯು ತಾನು ಪಟ್ಟ ಪಾಡಿನ ಅನುಭವದ ಮೇರೆಗೆ ಎಲ್ಲ ತಂದೆ ತಾಯಿ ಗಳನ್ನುದ್ದೇಶಿಸಿ ಹೀಗೆ ಹೇಳಿದ್ದಾಳೆ– "ನಿಮ್ಮ ಪುತ್ರಿಗಾಗಿ ಹಣ, ಆಸ್ತಿ, ಉಚ್ಚ ಜಾತಿ ಯಾವುದನ್ನೂ ನೋಡಬೇಡಿರಿ. ಕೇವಲ ಒಳ್ಳೆಯ ವರವನ್ನು ನೋಡಿರಿ. ಒಂದು ವೇಳೆ ಅವಳಿಗಾಗಿ ಯೋಗ್ಯನಾದ ವರನು ದೊರೆಯದಿದ್ದಲ್ಲಿ ಅವಳು ಕುಮಾರಿಯಾಗಿ ಉಳಿದರೂ ಚಿಂತೆಯಿಲ್ಲ, ತಾಳಿಕೊಳ್ಳಿರಿ. ಇದು ನಿಮ್ಮಿಂದ ಸಾಧ್ಯವಾಗದಿದ್ದರೆ ವಿಷಕೊಟ್ಟು ಇಲ್ಲವೆ ಕುತ್ತಿಗೆ ಹಿಚುಕಿ ಕೊಲ್ಲಬಹುದು. ಆದರೆ ಯಾವ ವೃದ್ಧ ನೊಡನೆಯೂ ಅವಳನ್ನು ಮದುವೆ ಮಾಡಿಕೊಟ್ಟು ಪಾಪ

ಕಟ್ಟಿಕೊಳ್ಳಬೇಡಿರಿ. ಸ್ತ್ರೀಯು ದಾರುಣವಾದ ದುಃಖ, ಬಡತನ ಎಲ್ಲವನ್ನು ಸಹಿಸಿಯಾಳು. ಆದರೆ ತನ್ನ ಏರುಜವ್ವನದ ಆಶೆ ಆಕಾಂಕ್ಷೆಗಳು ತುಳಿಯಲ್ಪಡುವದನ್ನು ಮಾತ್ರ ಸಹಿಸಿಕೊಳ್ಳಲಾರಳು.” ಎಂಬ ಹೇಳಿಕೆಯಲ್ಲಿ ತರುಣ ಪತ್ನಿಯು ತನ್ನ ಪತಿಯಿಂದ ದಾಂಪತ್ಯ ಸುಖವನ್ನು ಅಪೇಕ್ಷಿಸುವಳೇವಿನಾ ಅವನ ಅಪಾರ ಸಂಪತ್ತನ್ನಲ್ಲ ಎಂಬ ಮಾತು ಸ್ಪಷ್ಟವಾಗುತ್ತದೆ. ಆದ್ದರಿಂದ ಯುವಕ ಯುವತಿಯರ ಅಭೀಷ್ಟದಂತೆ ಮದುವೆ ಮಾಡುವದು ಒಳ್ಳೆಯದು. ಅಷ್ಟೇ ಏಕೆ ‘ದೊ ಸಖಿಯಾ’ ಕತೆಯಲ್ಲಿ ನಾಲ್ಕೈದು ಸಲವಾದರೂ ವಧುವರರಲ್ಲಿ ಪರಸ್ಪರ ಭೆಟ್ಟಿಯನ್ನೇರ್ಪಡಿಸಿ ಒಬ್ಬರನ್ನೊಬ್ಬರು ತಿಳಿದುಕೊಂಡ ನಂತರವೇ ವಿವಾಹ ಮಾಡುವುದು ಹೆಚ್ಚು ಕ್ಷೇಮಕರವೆಂದು ಹೇಳಿದ್ದಾರೆ. ಇದಕ್ಕೆ ಎರಡನೆಯ ಪತ್ನಿಯೊಂದಿಗಿನ ಅವರ ದಾಂಪತ್ಯ ಜೀವನವೇ ಸಾಕ್ಷಿಯಾಗಿದೆ. ಸಂಪ್ರದಾಯಶರಣತೆಯಿಂದಾಗಿ ಬೆಳೆದು ಬಂದಿರುವ ಸಾಮಾಜಿಕ ಕುರೀತಿಗಳನ್ನು ನಿರ್ನಾಮಗೊಳಿಸಿ ಭಾವೀ ಜೀವನದ ಸಂರಕ್ಷತೆಯ ದೃಷ್ಟಿಯಿಂದ ಜನರಲ್ಲಿ ಮುಂಜಾಗ್ರತೆಯ ಅರಿವನ್ನು ಹುಟ್ಟಿಸಬಲ್ಲ ದಿಟ್ಟ ನಿಲುಮೆ ಇದಾಗಿದೆ. ಇಲ್ಲಿ ಪ್ರೇಮಚಂದರು ಭಾರತೀಯ ಪುರಾತನ ವೈವಾಹಿಕ ಪದ್ಧತಿಯನ್ನು ಹೊಸ ಮತ್ತು ಸುಭದ್ರವಾದ ವಿವಾಹ ಪದ್ಧತಿಯ ತಳಹದಿಯ ಮೇಲೆ ಪುನರ್ರಚಿಸಬೇಕೆಂಬ ಅಭಿಪ್ರಾಯದವರಾಗಿದ್ದಾರೆ. ಹೀಗೆ ವಿಷಮ ವಿವಾಹವೆನ್ನಿಸಿಕೊಳ್ಳುವ—ವೃದ್ಧನೊಡನೆ ಯುವತಿಯ ವಿವಾಹ, ಚಿಕ್ಕ ವಯಸ್ಸಿನ ವರನೊಡನೆ ಅವನಿಗಿಂತಲೂ ವಯಸ್ಸಿನಿಂದ ಹಿರಿಯಳಾದ ಯುವ

ತ್ರಿಯ ವಿವಾಹ, ಪರಸ್ಪರ ವಿರೋಧಾತ್ಮಕ ಗುಣ ಸ್ವಭಾವ ವುಳ್ಳ ಯುವಕ ಯುವತಿಯರ ವಿವಾಹಗಳನ್ನು ವಿರೋಧಿಸಿ ವರು.

ಇತರ ವಿವಾಹಗಳು: 'ಸ್ಮೃತಿ ಕಾ ಪುಜಾರಿ'ಯ ಮುಖ್ಯ ಪಾತ್ರ ಹೋರಿಲಾಲನ ಮೂಲಕ ವಿಧುರ ವಿವಾಹದ ಅನುಪಯುಕ್ತತೆಯನ್ನು ಸ್ಪಷ್ಟ ಪಡಿಸಿದ್ದಾರೆ. ಹೋರಿಲಾಲ ತಾರುಣ್ಯದಲ್ಲಿಯೇ ವಿಧುರನಾದರೂ ಸಹ ಮತ್ತೊಂದು ಮದುವೆ ಮಾಡಿಕೊಳ್ಳಲು ಇಚ್ಛಿಸುವುದಿಲ್ಲ. ವಧುವರರು ತಮ್ಮನ್ನು ಪರಸ್ಪರ ತಿಳಿದುಕೊಳ್ಳಲು ಅಸಮರ್ಥರಿರುವಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವುದು ಬೇಡವೆಂದು ಹೇಳಿ 'ಧಿಕ್ಕಾರ' ಕತೆಯಲ್ಲಿ ಬಾಲ ವಿಧವೆಯಾದ ಮಾನಿಯು ವಿಧವಾ ವಿವಾಹದ ನಂತರವೂ ಸುಖ ಪಡೆಯದೆ ಮರಣ ವನ್ನಪ್ಪಿದ ಸಂಗತಿಯನ್ನು ಹೇಳಿ ಬಾಲವಿವಾಹವನ್ನು ವಿರೋಧಿಸಿದ್ದಾರೆ. ಬಾಲ ವಿಧವೆಯಾದ ಮಾನಿಯು ಸಹನಶೀಲ, ಭಾವುಕ ಯುವತಿ. ತನ್ನ ಚಿಕ್ಕಮ್ಮನ ಮನೆ ಯಲ್ಲಿ ಆಶ್ರಯ ಪಡೆದುಕೊಂಡಿರುತ್ತಾಳೆ. ಚಿಕ್ಕಮ್ಮನ ಪತಿ ವಂಶೀಧರ ರೂಢಿವಾದಿ, ನಿರ್ದಯಿ, ಸ್ವಾರ್ಥಿಯಾಗಿರುತ್ತಾನೆ. ಅವರ ಮಗ ಗೋಕುಲ ಪ್ರಗತಿಶೀಲ ವಿಚಾರವಾದಿ ಯುವ ಕನು. ಮಾನಿಯ ಬಗ್ಗೆ ಅವನಿಗೆ ಸಹಾನುಭೂತಿ ಇರು ತ್ತದೆ. ಪ್ರಗತಿಶೀಲ ವಿಚಾರವಾದಿಯಾದ ಇಂದ್ರನಾಥನೊಡನೆ ಮಾನಿಯ ಪುನರ್ವಿವಾಹ ಮಾಡಿ ಕೊಡುತ್ತಾನೆ. ವಂಶೀ ಧರನ ಚಿತ್ರಹಿಂಸೆಗೆ ಬೇಸತ್ತು ಆತ್ಮ ಹತ್ಯೆಮಾಡಿಕೊಳ್ಳಲು

ಣಿಯಾದ ಮಾನಿಗೆ ಇಂದ್ರನಾಥನ ನೆರಳಿನಲ್ಲಿ ನಿಲ್ಲಲು ಅವಕಾಶ ಮಾಡಿಕೊಡುತ್ತಾನೆ. ತನ್ನ ಪತಿಗೆ ಮುಂಬಯಿಯಲ್ಲಿ ನೌಕರಿ ದೊರೆತದ್ದರಿಂದ ಮಾನಿಯು ಅತ್ತೆಯೊಂದಿಗೆ ಮುಂಬಯಿಗೆ ತೆರಳುತ್ತಾಳೆ. ಇತ್ತ ವಂಶೀಧರನು ಕುಪಿತನಾಗಿ ಮಾನಿಯನ್ನು ಹುಡುಕುತ್ತಿರುವಾಗಲೇ ಅವನಿಗೆ ಮಾನಿ ಬರೆದ ಒಂದು ಪತ್ರ ತಲುಪುತ್ತದೆ. ಸ್ಟೇಶನ್ನಿಗೆ ಹೋಗಲಾಗಿ ಆಕಸ್ಮಾತ್ತಾಗಿ ಮಾನಿಯ ಭೆಟ್ಟಿಯಾಗುತ್ತದೆ. ಅವಳಿಗೆ ಇಲ್ಲದ–ಸಲ್ಲದ ಮಾತುಗಳನ್ನು ಆಡುತ್ತಾನೆ. ವಂಶೀಧರನ ಬಿರುನುಡಿಗಳಿಂದ ನೊಂದುಕೊಂಡ ಮಾನಿಯು ಮಧ್ಯರಾತ್ರಿಯಲ್ಲಿ ರೇಲಗಾಡಿಯಿಂದ ಕೆಳಕ್ಕೆ ಜಿಗಿದು ದುರ್ಮರಣಕ್ಕೀಡಾಗುತ್ತಾಳೆ. ಮನೆಬಿಟ್ಟು ಹೋದ ಮಗ ಗೋಕುಲ ಮರಳಿ ಮನೆಗೆ ಬಂದನೇನೋ ನಿಜ, ಆದರೆ ಮಾನಿಯ ಅಕಾಲಿಕ ಮರಣಕ್ಕೆ ತಾನೇ ಜವಾಬ್ದಾರನೆಂದು ಅವನ ಅಂತರಂಗವೇ ಅವನನ್ನು ಧಿಕ್ಕರಿಸುತ್ತಲಿತ್ತು. ವರ್ತಮಾನ ಯುವಜನಾಂಗವು ವಿಧವಾ ವಿವಾಹದಂತಹ ಪ್ರಗತಿಶೀಲ ವಿಚಾರಸರಣಿಯನ್ನು ಕಾರ್ಯರೂಪಕ್ಕೆ ತಂದು ಸಮಾಜವನ್ನು ರೂಢಿವಾದದಿಂದ ಮುಕ್ತಗೊಳಿಸಬೇಕೆಂಬುದೇ ಈ ಕತೆಯ ಉದ್ದೇಶವು.

ಬಹುವಿವಾಹದಿಂದ ಕುಟುಂಬದಲ್ಲಿ ಅಶಾಂತಿ, ಒಳಜಗಳಗಳು ಹೆಚ್ಚುತ್ತವೆಯಾದ್ದರಿಂದ ಅದಕ್ಕೆ ಸ್ಥಾನಕೊಟ್ಟಿಲ್ಲ. ತಂದೆತಾಯಿಗಳು ಅಂತರ್ಜಾತೀಯ ವಿವಾಹಗಳಿಗೆ ಅನುಮತಿಸಬೇಕೆಂದು ಪರೋಕ್ಷವಾಗಿ ಹೇಳಿ ಅಂತಹ ವಿವಾಹಗಳನ್ನು ಸಮ್ಮತಿ

ಸದಿದ್ದರೆ ಸಂಭವಿಸಬಹುದಾದ ಅನಾಹುತಗಳನ್ನು ವಿವರಿಸಿದ್ದಾರೆ.

'ಕಾಯರ' ಕತೆಯಲ್ಲಿ ಮುಖ್ಯಪಾತ್ರ ಕೇಶವನು ಬ್ರಾಹ್ಮಣನು. ಪ್ರೇಮಾ ಎಂಬ ವೈಶ್ಯ ಜಾತಿಯ ಯುವತಿಯನ್ನು ಪ್ರೇಮಿಸಿ ವಿವಾಹವಾಗಬಯಸುತ್ತಾನೆ. ಆದರೆ ತಂದೆಯ ಗದರಿಕೆಗೆ ಅಂಜಿ ಅವಳನ್ನು ವಿವಾಹವಾಗುವದು ಸಾಧ್ಯವಿಲ್ಲವೆಂದು ಪತ್ರ ಬರೆದು ತಿಳಿಸುತ್ತಾನೆ. ಅದನ್ನು ಓದಿದಾಕ್ಷಣವೇ ಸಿಡಿಲು ಬಡಿದಂತಾಗಿ ಪ್ರೇಮ ಅಸುನೀಗುತ್ತಾಳೆ. ಹೀಗೆ ಮುಖ್ಯ ಪಾತ್ರ ಕೇಶವನು ಸ್ವಭಾವತಃ ಹೇಡಿಯಾದದ್ದರಿಂದ ಕತೆಗಾರ ಕತೆಗೆ 'ಕಾಯರ' ಎಂಬ ಶಿರೋನಾಮವನ್ನು ಕೊಟ್ಟಿದ್ದಾನೆ. ಅಂತರ್ಜಾತೀಯ ವಿವಾಹದ ಮೂಲಕ ಜಾತಿವಾದದ ಸಂಕೀರ್ಣವಾದ ರೂಢಿಗತ ಸಂಸ್ಕಾರಗಳಿಂದ ಬಿಡುಗಡೆ ಹೊಂದಿ ಒಂದು ಹೊಸ ಜಾತ್ಯಾತೀತ ಸಮಾಜ ಸ್ಥಾಪನೆಯ ಪ್ರಗತಿಶೀಲ-ಧೋರಣೆಗೆ ಹೊಂದಿಕೊಳ್ಳುವಂತೆ ಹೊಸ ಪೀಳಿಗೆಗೆ ಪ್ರೇರಣೆ ನೀಡುವದು ಮತ್ತು ಸನಾತನಿಗಳಾದ ಹಿರಿಯರು ಈ ಪ್ರಗತಿಶೀಲ ವಿಚಾರವಾದವನ್ನು ಕಟುವಾಗಿ ವಿರೋಧಿಸಿ ಇಂದಿನ ಯುವಕ ಯುವತಿಯರ ಆಶೋತ್ತರಗಳ ಕುಡಿಯನ್ನು ಚಿವುಟಿ ಹಾಕಿ ತಮ್ಮ ಕೌಟುಂಬಿಕ ಜೀವನದಲ್ಲಿ ಅಶಾಂತಿಯನ್ನುಂಟು ಮಾಡಿಕೊಳ್ಳಬಾರದೆಂಬ ಸಲಹೆ ನೀಡುವದು ಈ ಕತೆಯ ಉದ್ದೇಶ.

ವಿಧವಾ ವಿವಾಹ: ವಿಷಮವಿವಾಹ, ಬಾಲವಿವಾಹಗಳಿಂದ ವೈಧವ್ಯ ಉಂಟಾಗುವ ಸಾಧ್ಯತೆ ಬಹಳವಿದೆ. ಪ್ರಾರಬ್ಧದ ಪರಿಣಾಮವಾಗಿ ಅಕಸ್ಮಾತ್ತಾಗಿ ವೈಧವ್ಯ ಬರುವ ಸಂಭವವೂ ಇಲ್ಲದಿಲ್ಲ– 'ಪ್ರತಿಶೋಧ' ಕತೆಯ ಮಾಯಾ

ವಿಧವೆಯಾಗುವದು ಪ್ರಾರಬ್ಧದಿಂದಾಗಿಯೇಯೆಂದು ಹೇಳಿದ್ದಾರೆ. ವಿಧವಾ ಸಮಸ್ಯೆಯ ನಿವಾರಣೆಗೆ ಅವರು ಎರಡು ಉಪಾಯಗಳನ್ನು ಸೂಚಿಸಿದ್ದಾರೆ– ವಿಧವಾ ವಿವಾಹಕ್ಕೆ ಪ್ರೋತ್ಸಾಹನೆ, ಆಶ್ರಮಗಳ ಸ್ಥಾಪನೆ. ಸ್ವತಃ ಒಬ್ಬ ಬಾಲವಿಧವೆಯನ್ನು ಮದುವೆಯಾಗಿದ್ದರು. ಆದರೆ ಪ್ರೌಢವಿಧವೆಯ ವಿವಾಹಕ್ಕಿಂತಲೂ ಬಾಲವಿಧವೆಯ ವಿವಾಹ ಒಳ್ಳೆಯದು. ಪ್ರೌಢ ವಿಧವೆಯರು ಅಧ್ಯಾತ್ಮದಲ್ಲಿ ಆಸಕ್ತಿಯುಳ್ಳವರಾಗಿ ಈಶ್ವರಾರಾಧನೆಯಲ್ಲಿ ಕಾಲ ಕಳೆಯಬೇಕೆಂದರು. 'ಧಿಕ್ಕಾರ' ಕತೆಯ ಮಾನಿ ಬಾಲ ವಿಧವೆ. ಪತಿಯ ಮುಖವನ್ನೂ ಸಹ ಸರಿಯಾಗಿ ನೋಡದ ಅವಳ ಪುನರ್ವಿವಾಹ ಮಾಡಲು ಸಮ್ಮತಿಸಲಾಗಿದೆ. ಏಕೆಂದರೆ ಪತಿಯ ಸಂಪರ್ಕವನ್ನೇ ಪಡೆಯದ ಆ ಬಾಲವಿಧವೆಯು ಇನ್ನೊಂದು ಮದುವೆಗೆ ಸರ್ವಥಾ ಅರ್ಹಳೆಂಬುದು ಕತೆಗಾರನ ನ್ಯಾಯಸಮ್ಮತ ಅಭಿಪ್ರಾಯವಾಗಿದೆ. 'ಸುಭಾಗಿ' ಕತೆಯಲ್ಲಿ ಪ್ರೌಢವಿಧವೆ ಸುಭಾಗಿಯನ್ನು ಸಜನಸಿಂಹನ ಸೊಸೆಯನ್ನಾಗಿ ಮಾಡಿ ಸವರ್ಣೀಯ ಪ್ರೌಢ ವಿಧವೆಯ ವಿವಾಹವನ್ನು ಸಮರ್ಥಿಸಿದ್ದಾರೆ.

iii) ವರದಕ್ಷಿಣೆ:

ವಿವಾಹವು ವ್ಯಾಪಾರವಲ್ಲ. ಸ್ತ್ರೀ ಪುರುಷರ ಭೋಗಲಾಲಸೆ ಅದರ ಉದ್ದೇಶವಲ್ಲ. ಅದು ಧರ್ಮ ಹಾಗೂ ಪ್ರೇಮದ ತಳಹದಿಯ ಮೇಲೆ ನಿರೂಪಿತಗೊಳ್ಳಬೇಕೆಂದು ಹೇಳಿ ಪ್ರೇಮಚಂದರು ವರದಕ್ಷಿಣೆ ತೆಗೆದುಕೊಳ್ಳುವವರನ್ನು ಕಟುವಾಗಿ ಟೀಕಿ

ಸಿದ್ದಾರೆ. ಈ ಸಮಸ್ಯೆಯ ಮೂಲಕಾರಣವನ್ನೂ, ಪರಿಹಾರ ವನ್ನೂ ಸೂಚಿಸಿದ್ದಾರೆ– "ಸಮಾಜದಲ್ಲಿ ವರದಕ್ಷಿಣೆಗೆ ಅವಕಾಶ ವಿರುವ ವರೆಗೆ, ಅವಿವಾಹಿತ ತರುಣಿಯು ನಿಂದನೀಯಳೆಂದು ಪರಿಗಣಿಸಲ್ಪಡುವ ವರೆಗೆ ಈ ಪದ್ಧತಿಯು ಅಳಿಯದೇ ಉಳಿ ಯುವದು. ಆದರೆ ತರುಣರಂತೆ ಪ್ರತಿಯೊಬ್ಬ ತರುಣಿಗೂ ಉಚ್ಚ ಶಿಕ್ಷಣ ಹಾಗೂ ಉದರ ನಿರ್ವಾಹದ ಸೌಕರ್ಯಗಳು ಒದಗುತ್ತ ನಡೆದರೆ ಈ ಪದ್ಧತಿಯು ಕಾಲಕ್ರಮೇಣ ಇಲ್ಲ ದಂತಾಗಬಹುದು." ವರದಕ್ಷಿಣೆಯನ್ನು ತಗೆದುಕೊಳ್ಳುವಲ್ಲಿ ಪ್ರಮುಖ ಪಾತ್ರವಾಡುವ ತಂದೆ–ತಾಯಿಗಳು ವಿಷಜಂತು ಗಳಿಗೆ ಸಮಾನರೆಂಬ ಗಾಂಧಿಜಿಯವರ ಧ್ವನಿಯನ್ನು 'ಕುಸುಮ' ಕತೆಯಲ್ಲಿ ಎತ್ತರಿಸಿ ಹೇಳಿದ್ದಾರೆ. ಅಂತಹ ವರಗಳನ್ನು ಧಿಕ್ಕರಿ ಸಿದ್ದಾರೆ. ವರದಕ್ಷಿಣೆಯ ಹಣವನ್ನು ಕೊಡುವದಕ್ಕಾಗಿ ಎಷ್ಟೋ ಮನೆತನಗಳು ದಿವಾಳಿಯಾಗುತ್ತವೆ. ಕೆಲವು ಅತ್ತೆಮಾವಂದಿರಿಗೆ ಸೊಸೆಗಿಂತಲೂ ಸೊಸೆಯ ಜೊತೆಗೆ ಬರುವ ವರದಕ್ಷಿಣೆಯ ಮೊತ್ತದ ಮೇಲೆ ಬಹಳ ಪ್ರೀತಿ. ಕೈತುಂಬ ವರದಕ್ಷಿಣೆಯ ಹಣ ದೊರೆಯುವಂತಿದ್ದರೆ ಕುರುಡಿಯನ್ನು ಸಹ ಮದುವೆ ಯಾಗಲು ಸಂಕೋಚ ಪಡದ ಜನರೂ ಇದ್ದಾರೆಂಬುದನ್ನು ಕತೆಗಾರನು ಸ್ಪಷ್ಟಪಡಿಸಿದ್ದಾನೆ.

iV) ವೇಶ್ಯಾವೃತ್ತಿ:

ಗೌರವಪೂರ್ಣವಾದ ಆಶ್ರಯದ ಕೊರತೆ, ಹದಗೆಟ್ಟ ಆರ್ಥಿಕ ಪರಿಸ್ಥಿತಿ, ವಿಷಮ ವಿವಾಹ ಮುಂತಾದವು ವೇಶ್ಯಾ

ವೃತ್ತಿಯ ಮೂಲಕಾರಣಗಳು. ಈ ಸ್ಥಿತಿ ಇಲ್ಲವಾದಾಗ ಮಾತ್ರ ವೇಶ್ಯಾಸಮಸ್ಯೆ ನಿಃಶೇಷಗೊಳ್ಳುವದೆಂದು ಅವರು ಅಭಿಪ್ರಾಯ ಪಟ್ಟಿದ್ದರು. ಸ್ತ್ರೀಯರನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಲು ಉಪಜೀವನಕ್ಕೆ ಮಾರ್ಗ ಮಾಡಿಕೊಡಬಲ್ಲ ಉದ್ಯೋಗಗಳು, ಗೃಹಕೈಗಾರಿಕೆಗಳು, ಜೀವನೋಪಯೋಗಿ ಕಲೆ ಮುಂತಾದವುಗಳನ್ನು ಕಲಿಸುವ ಏರ್ಪಾಡು ಆಗಬೇಕು. ಎರಡನೆಯದಾಗಿ ಕೆಲವು ಆಶ್ರಮಗಳನ್ನು ತೆರೆದು ಈ ವರೆಗೆ ಆ ಹೀನ ಕೃತ್ಯದಲ್ಲಿ ತೊಡಗದೇ ಇರುವ ವೇಶ್ಯೆಯರ ಬಾಲಿಕೆ ಯರಿಗೆ ಆ ಆಶ್ರಮಗಳಲ್ಲಿ ಆಶ್ರಯಕೊಟ್ಟು ಸಾಮಾಜಿಕ, ಪಾರಿವಾರಿಕ ಜೀವನದ ಒಳಿತಿಗಾಗಿ ತಮ್ಮ ಪಾಲಿನ ಕರ್ತವ್ಯ ವನ್ನು ತುಂಬ ಗೌರವದಿಂದ ನಿರ್ವಹಿಸಬೇಕೆಂಬ ಪ್ರಜ್ಞೆ ಉಂಟಾ ಗುವಂತೆ ಅವರನ್ನು ತರಬೇತುಗೊಳಿಸಬೇಕು. ಇದರಿಂದ ಅವರು ಭವಿಷ್ಯದಲ್ಲಿ ಈ ವೃತ್ತಿಯನ್ನು ಆಶ್ರಯಿಸದೇ ಸ್ವತಂತ್ರ ವಾಗಿ ಮರ್ಯಾದೆಯಿಂದ ಬಾಳುವಂತಾಗುವದೆಂದು ಹೇಳಿದರು. 'ಆಗಾ ಪೀಛಾ' ಕತೆಯಲ್ಲಿ ವೇಶ್ಯೆಯ ಪುತ್ರಿಯ ಬಗ್ಗೆ ಸಮಾಜದ ಅಕಾರಣ ಉಪೇಕ್ಷೆ ಸಲ್ಲದೆಂದರು. ತಾಯಿ ಮಾಡಿದ ಪಾಪಕ್ಕೆ ನಿರ್ದೋಷಿಯಾದ ಮಗಳನ್ನು ಗುರಿಪಡಿಸುವದು ಯಾವ ನ್ಯಾಯ? ಎಂದು ಪ್ರಶ್ನಿಸಿದರು.

ಸಂಯಮದಿಂದ ವರ್ತಿಸಿ ವೇಶ್ಯೆಯರ ಜೀವನ ಕ್ರಮ ದಲ್ಲಿ ಸುಧಾರಣೆಯುಂಟಾಗುವಂತೆ ಸಹಕರಿಸಬೇಕೆಂದು ಪುರುಷರಿಗೆ ಕೇಳಿಕೊಂಡರು. 'ವಿಶ್ವಾಸ' ಕತೆಯ ನಾಯಕಿ ಮಿಸ್ ಜೋಶಿ ಶಿಕ್ಷಕಿಯಾಗಿದ್ದರೂ ಸಹ ಐಷ ಆರಾಮಕ್ಕಾಗಿ

ಹಣ ಸಂಪಾದಿಸಲು ಮುಂಬೈಯಲ್ಲಿ ಸಭ್ಯ ಸಮಾಜದ ರಾಧೆಯಾಗುತ್ತಾಳೆ. ಕ್ರಾಂತಿವೀರ ಆಪ್ಟೇನ ಉಪದೇಶದಿಂದ ಪ್ರಭಾವಿತಳಾಗಿ ಸರಿಯಾದ ದಾರಿ ಹಿಡಿಯುತ್ತಾಳೆ. ಹೀಗೆ ಸ್ತ್ರೀಯು ವಿಕಟ ಪರಿಸ್ಥಿತಿಗಳಿಂದ ಇಲ್ಲವೆ ಗತಾನುಗತಿಕ ಸಂಸ್ಕಾರಗಳಿಂದ ಕುಪಥಗಾಮಿನಿಯಾಗುತ್ತಾಳೆಂಬುದು ಕತೆಗಾರನ ಅಭಿಮತ.

ಪ್ರೇಮಚಂದರು ವೇಶ್ಯೆಯ ಬಗ್ಗೆ ಸಹಾನುಭೂತಿಯುಳ್ಳವರಾಗಿದ್ದಾರೆ. ಒಳ್ಳೆಯ ಉಪದೇಶದಿಂದ ಅವಳ ಮನಸ್ಸು ಪರಿವರ್ತನೆಗೊಂಡು ಸರಿಯಾದ ದಾರಿಗೆ ಬರುತ್ತಾಳೆಂಬ ಬಗ್ಗೆ ಅವರು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇವೆಲ್ಲಕ್ಕೂ ಆ ವೇಶ್ಯೆಯ ಸುತ್ತಲೂ ಹೆಣೆದುಕೊಂಡಿರುವ ಪರಿಸರವೇ ಕಾರಣವೆನ್ನಬಹುದಾಗಿದೆ.

V) ಮದ್ಯಪಾನ ನಿಷೇಧ:

ಮದ್ಯಪಾನ ನಿಷೇಧವನ್ನು ಸಮರ್ಥಿಸಿದ ಪ್ರೇಮಚಂದರು ಅದರ ಪ್ರಚಾರಕಾರ್ಯವು ಬಲಪ್ರಯೋಗದಿಂದ ಸಾಧ್ಯವಾಗದೇ ಪ್ರೇಮಮಾರ್ಗದಿಂದ ಸಾಧ್ಯವೆಂದು ಹೇಳಿ ಧರಣಿ, ಪಿಕೆಟಿಂಗ, ಸತ್ಯಾಗ್ರಹಗಳಂತಹ ವಿಧಾನಗಳನ್ನು ಅನುಸರಿಸಬೇಕೆಂದರು. 'ಶರಾಬ ಕಿ ದೂಕಾನ' ಕತೆಯಲ್ಲಿ ಶ್ರೀಮತಿ ಸಕ್ಸೇನಾಳ ಸತ್ಯಾಗ್ರಹದಿಂದ ಮದ್ಯದಂಗಡಿಯ ಮಾಲಿಕನ ಹೃದಯ ಪರಿವರ್ತನೆಯಾಗಿ ಅವನು ಆ ಉದ್ಯೋಗವನ್ನೇ ಬಿಡುತ್ತಾನೆ. 'ಮಸ್ಸಾಹಸ' ಕತೆಯಲ್ಲಿ ಮುನ್ಸಿ ಮೈಕೂಲಾಲನ ಹೃದಯ

ಪರಿವರ್ತನೆಯಾಗಿ ಮದ್ಯಪಾನ ಬಿಡುತ್ತಾನೆ. ಮದ್ಯಪಾನ ಮಾಡುವವನು ತನ್ನ ಹಾಗೂ ಹೆಂಡತಿಯ ಮಾನಾಪಮಾನದ ಬಗ್ಗೆ ಯೋಚಿಸದಷ್ಟು ಪತಿತನಾಗಿರುತ್ತಾನೆಂಬುದು ಕತೆಗಾರನ ಅಭಿಪ್ರಾಯ. 'ಮೈಕೂ' ಕತೆಯಲ್ಲಿ ಮದ್ಯಪಾನದ ಹುಳುವಾಗಿದ್ದ ಮೈಕೂ ಸತ್ಯಾಗ್ರಹದಿಂದ ಪ್ರಭಾವಿತನಾಗಿ ಕುಡಿಯುವವನ್ನು ಬಿಟ್ಟು ಸ್ವತಃ ತಾನೇ ಮದ್ಯಪಾನ ನಿಷೇಧದ ಪರವಾಗಿ ಪ್ರಚಾರ ಮಾಡಲಾರಂಭಿಸುತ್ತಾನೆ. ಮದ್ಯದಂಗಡಿಯ ಮೇಲೆ ರಾಷ್ಟ್ರೀಯ ಸ್ವಯಂಸೇವಕರ ಕಾವಲು ಇತ್ತು. ಯಾವನಾದರೂ ಕುಡಿಯಲು ಬಂದರೆ ಅವನನ್ನು ತಡೆದು ಭೂಮಿಯ ಮೇಲೆ ಕೆಡವಿ, ಎದೆಯ ಮೇಲೆ ಕಾಲಿಟ್ಟು ಮುಂದೆ ಹೋಗಲು ಒತ್ತಾಯಿಸುತ್ತಿದ್ದರು. ಆವಾಗ ನೆಲಕ್ಕೆ ಬಿದ್ದವನು ಕುಪಿತನಾಗಿ ಹೊಡೆದರೂ ಸಹಿಸಿಕೊಳ್ಳುತ್ತಿದ್ದರು. ಒಂದು ದಿನ ಮೈಕೂ ಮತ್ತು ಕಾದಿರ ಎಂಬಿಬ್ಬರು ಕುಡುಕರು ಅಲ್ಲಿಗೆ ಕುಡಿಯಲು ಬಂದರು. ಸ್ವಯಂಸೇವಕರು ಅವರನ್ನು ತಡೆದರು. ಮೈಕೂ ತನ್ನನ್ನು ತಡೆದ ಸ್ವಯಂಸೇವಕನ ಕಪಾಳದ ಮೇಲೆ ಬಲವಾಗಿ ಏಟು ಹಾಕಿದನು. ಅವನ ಗಲ್ಲಗಳ ಮೇಲೆ ಚೆನ್ನಾಗಿ ಬಾಸುಂಡೆಗಳು ಮೂಡಿದವು. ಸ್ವಯಂಸೇವಕನು ಸುಮ್ಮನಿದ್ದನು. ಇದನ್ನು ಕಣ್ಣಾರೆ ಕಂಡ ಮೈಕೂ ತನ್ನ ಕುಕೃತ್ಯಕ್ಕಾಗಿ ಬಹಳ ವ್ಯಥೆ ಪಟ್ಟುಕೊಂಡ. ಅವನಿಗೆ ಮದ್ಯದ ಬಗ್ಗೆ ಜುಗುಪ್ಸೆ ಉಂಟಾಯಿತು. ಮದ್ಯದಂಗಡಿಯ ಮಾಲಿಕನು ಮದ್ಯಕೊಟ್ಟರೂ ಕುಡಿಯಲಿಲ್ಲ. ಪುಕ್ಕಟೆ ಕುಡಿಯಲು ಕೊಟ್ಟರೂ ಅದನ್ನು ಸ್ವೀಕರಿಸಲಿಲ್ಲ. ಕುಡುಕರ ಆ ದೃಶ್ಯ

ಅವನಿಗೆ ಶೂಲದಂತೆ ಇರಿಯುತ್ತಲಿತ್ತು. ಕುಡುಕರನ್ನು ನೋಡುತ್ತಲೆ ಅವನಿಗೆ ಕಡುಕೋಪ ಬಂದಿತು. ಒಂದು ಬಡಿಗೆಯಿಂದ ಅವರನ್ನು ಚನ್ನಾಗಿ ಥಳಿಸಿದನು. ಮದ್ಯದಂಗಡಿಯ ಮಾಲಿಕನನ್ನೂ ಹೊಡೆದನು. ಮದ್ಯತುಂಬಿದ ಪಾತ್ರೆಗಳನ್ನು ಉರುಳಿಸಿ ಬುಡಮೇಲು ಮಾಡಿ ಇಟ್ಟನು. ಮದ್ಯದಂಗಡಿ ಪೂರ್ಣ ಖಾಲಿಯಾಯಿತು.

Vi) ಕೌಟುಂಬಿಕ ಸಮಸ್ಯೆಗಳು :

ತಾಯಿಯ ಮಮತೆಯ ಮಹತ್ವ ಎಷ್ಟೆಂಬುದನ್ನು ಪ್ರೇಮಚಂದರು ಸ್ವತಃ ತಮ್ಮ ತಾಯಿಯ ಮರಣದ ನಂತರ ಕಂಡುಕೊಂಡಿದ್ದರು. ತಾಯಿಯನ್ನು ಕಳೆದುಕೊಂಡ ಮಗುವಿನ ಸ್ಥಿತಿ ಏನಾಗುತ್ತದೆಯೆಂಬುದನ್ನು ಬಾಲ್ಯಕಾಲದ ತಮ್ಮ ಅನುಭವದಿಂದ ಮನಗಂಡಿದ್ದರು. ಇದನ್ನು ತಮ್ಮ ಸಣ್ಣ ಕತೆಗಳಲ್ಲಿ ಮನಕರಗುವಂತೆ ಚಿತ್ರಿಸಿದ್ದಾರೆ– 'ಗೃಹದಾಹ' ಕತೆಯಲ್ಲಿ ತಾಯಿಯನ್ನು ಕಳೆದುಕೊಂಡ ಸತ್ಯಪ್ರಕಾಶನಿಗೆ ತಾಯಿಯ ಮಧುರ ಸ್ಮೃತಿಯೇ ಅವನ ಬಾಳಿಗಾಧಾರವಾಗಿದೆ. ಮಲತಾಯಿಯ ಕಠೋರವಾದ ವರ್ತನೆಯಿಂದ ಬೇಸತ್ತ ಜನ್ಮಕೊಟ್ಟ ತಾಯಿಯ ಅಗಲುವಿಕೆಯಿಂದ ಶೋಕತಪ್ತನಾದ ಬಾಲಕನ ಜೀವನವನ್ನು ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇಲ್ಲಿ ಪ್ರೇಮಚಂದರು ಪ್ರದರ್ಶಿಸಿದ ಸಂವೇದನೆ ಅನುಪಮವಾದುದು. ಏಕೆಂದರೆ ಇಂತಹ ಜೀವನವನ್ನೇ ಜೀವಿಸಿದ ಅವರು ಬಾಲ್ಯದಲ್ಲಿ ತಾಯಿಯ ವಾತ್ಸಲ್ಯಕ್ಕಾಗಿ ಹಲು

ಬಿದ್ದರು. ಮಲತಾಯಿಯ ಕ್ರೌರ್ಯದ ಬಲಿಪಶುವಾಗಿ ಬಳಲಿದ್ದರು. ಮಲತಾಯಿಯಿಂದ ಮಲಮಗನ ಕಲ್ಯಾಣ ಅಸಾಧ್ಯವೆಂಬ ನಿರ್ಧಾರಕ್ಕೆ ಬಂದಿದ್ದರು. ಅವಳ ಅತ್ಯಾಚಾರ, ಹೀನ ಬೈಗಳಗಳು, ಮಲಸಹೋದರನ ಏಟುಗಳು, ಅವರೆಲ್ಲರ ಅನೈತಿಕತೆಯಿಂದುಂಟಾದ ಮನೋವೇದನೆ ಮುಂತಾದ ಮಲಮಗನ ಕಟು ಅನುಭವಗಳು 'ಅಲಗ್ಯೋಝಾ' ಕತೆಯ 'ರಗ್ಘೂ'ನ ಚರಿತ್ರ ಚಿತ್ರಣದಿಂದ ಸ್ಪಷ್ಟವಾಗುತ್ತವೆ. 'ಗೃಹ ಧಾಹ'ದ ಸತ್ಯಪ್ರಕಾಶ 'ಅಲಗ್ಯೋಝಾ'ದ 'ರಗ್ಘೂ' ಪ್ರೇಮಚಂದರ ಪ್ರತಿರೂಪವಾಗಿದ್ದಾರೆ. ಎಲ್ಲ ಮಲತಾಯಿಯರು ಕೆಟ್ಟವರೇ ಇರುತ್ತಾರೆನ್ನಲು ಬರುವದಿಲ್ಲವೆಂಬ ಮಾತನ್ನು ಅಷ್ಟೇ ಆತ್ಮವಿಶ್ವಾಸದಿಂದ ಒಪ್ಪಿಕೊಂಡಿದ್ದಾರೆ. ತಮ್ಮ ಬಾಳಿನಲ್ಲಿ ಎಂತಹ ಘೋರ ವಿಪತ್ತುಗಳು ಎದುರಾದಾಗಲೂ ಸಹ ಪ್ರೇಮಚಂದರು ಪಲಾಯನವಾದಿಗಳಾಗಲಿಲ್ಲ.

ಅವಿಭಕ್ತ ಕುಟುಂಬ ಪದ್ಧತಿಯಿಂದ ಕುಟುಂಬದ ಎಲ್ಲ ಸದಸ್ಯರಿಗೂ ಸಮಾನ ಅವಕಾಶಗಳು, ಸಹಾಯ–ಸಹಕಾರಗಳು ದೊರೆಯುತ್ತವೆಂಬುದು ಅವರಿಗೆ ತೃಪ್ತಿಯನ್ನುಂಟು ಮಾಡಿತ್ತು– 'ಬಡೆ ಘರಕಿ ಬೇಟಿ' ಕತೆಯಲ್ಲಿ ಕುಟುಂಬದ ಶ್ರೀಕಂಠ ಮುಂತಾದ ಎಲ್ಲ ಸದಸ್ಯರ ಪರಸ್ಪರ ಸಹಕಾರದಿಂದ ಅಸ್ತಿತ್ವಕ್ಕೆ ಬಂದ ಒಂದು ಸುಂದರವಾದ ಅವಿಭಕ್ತ ಕುಟುಂಬವನ್ನು ಚಿತ್ರಿಸಿದ್ದಾರೆ. ಈ ತತ್ವವು ಅವರ ಸಮಷ್ಟಿವಾದಕ್ಕೆ ಅನುಗುಣವಾಗಿಯೇ ಇದೆ. ಭಾರತೀಯ ಸಭ್ಯತೆಗೆ ಕಳಸಪ್ರಾಯವಾಗಿರುವ ಅವಿಭಕ್ತ ಕುಟುಂಬ ಪದ್ಧತಿಯ ಎದುರು

ಪಾಶ್ಚಾತ್ಯರ ವ್ಯಕ್ತಿಗತ ಕುಟುಂಬ ಪದ್ಧತಿಯು ತುಚ್ಛವಾದುದೆಂದು ಭಾವಿಸಿದ್ದರು. 'ಅಲಗ್ಯೋಝಾ' ಕತೆಯಲ್ಲಿ ಬರುವ 'ಭೋಲಾ ಮಹತೋ' ಎಂಬವನು 'ಪನ್ನಾ' ಎಂಬ ಮತ್ತೊಬ್ಬ ಸ್ತ್ರೀಯನ್ನು ಮದುವೆಯಾಗುತ್ತಾನೆ. ಪನ್ನಾ ತನ್ನ ಮಲಮಗನಾದ ರಗ್ಗೂನಿಗೆ ಚಿತ್ರಹಿಂಸೆ ಕೊಡುತ್ತಿರುತ್ತಾಳೆ. ಅವಳಿಗೂ ಮಕ್ಕಳಿರುತ್ತವೆ. ಮುಲಿಯಾ ಎಂಬವಳೊಡನೆ ರಗ್ಗೂನ ವಿವಾಹವಾಗುತ್ತದೆ. ಅವಳೊಡನೆಯು ಎಲ್ಲರೂ ಜಗಳವಾಡುತ್ತಿದ್ದುದರಿಂದ ರಗ್ಗೂ ಅನಿವಾರ್ಯವಾಗಿ ಬೇರೆಯಾಗಬೇಕಾಗುತ್ತದೆ. ಆದರೂ ತನ್ನ ಮಲ ಸಹೋದರರನ್ನು ಬಹಳ ಪ್ರೀತಿಸುತ್ತಾನೆ. ಆಕಸ್ಮಿಕವಾಗಿ ಸಾವಿಗೀಡಾಗುತ್ತಾನೆ. ಭೋಲಾಮಹತೋ ಮೊದಲೇ ತೀರಿಹೋದದ್ದರಿಂದ ಮನೆಯ ಜವಾಬ್ದಾರಿ ಪನ್ನಾಳ ಹಿರಿಯ ಮಗ ಕೇದಾರನ ಮೇಲೆ ಬೀಳುತ್ತದೆ. ಕೇದಾರನು ವಿಧವೆಯಾದ ಮುಲಿಯಾಳನ್ನು ಪ್ರೇಮಿಸಿ ಅವಳನ್ನು ಮದುವೆಯಾಗುತ್ತಾನೆ. ಹೀಗೆ ಅವಿಭಕ್ತ ಕುಟುಂಬದಿಂದಾಗಿ ಒಂದೇ ಸಲಕ್ಕೆ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆಯಬಲ್ಲದೆಂಬ ಸಂಗತಿ ಪ್ರಸ್ತುತ ಸಣ್ಣಕತೆಯಿಂದ ಸ್ಪಷ್ಟವಾಗುತ್ತದೆ.

Vii) ಮೂಢ ನಂಬಿಕೆಗಳು :

ಮೂಢನಂಬಿಕೆಗಳಿಂದ ಚಿತ್ರಹಿಂಸೆಗೆ ತುತ್ತಾದ ಪ್ರೇಮಚಂದರು ಅವುಗಳನ್ನು ವಿರೋಧಿಸಿದರು. ಅವರು ಮೂಲಾ ನಕ್ಷತ್ರದಲ್ಲಿ ಜನಿಸಿದ್ದರು. ಅವರ ಎಂಟನೇ ವಯಸ್ಸಿಗೆ ತಾಯಿ,

ಹನ್ನೆರಡನೆಯ ವಯಸ್ಸಿಗೆ ಅಜ್ಜಿ, ಹದಿನಾರನೆಯ ವಯಸ್ಸಿಗೆ ತಂದೆ ತೀರಿಹೋದರು. ಭಾರತೀಯರಲ್ಲಿ ಪ್ರಚಲಿತವಿರುವ-ಮೂಲಾ ನಕ್ಷತ್ರದಲ್ಲಿ ಜನಿಸಿದ ಮಗುವಿನಿಂದ ತಂದೆ ಅಥವಾ ತಾಯಿಯ ಪ್ರಾಣಕ್ಕೆ ಅಪಾಯವಿದೆಯೆಂಬ ಮೂಢನಂಬಿಕೆಯಂತೆ ಎಲ್ಲರೂ ಬಾಲಕ ಪ್ರೇಮಚಂದನನ್ನು ತಿರಸ್ಕರಿಸ ಹತ್ತಿದರು. ಇದರಿಂದ ನೊಂದುಕೊಂಡಿದ್ದ ಅವರು 'ತೇಂತರ' ಕತೆಯಲ್ಲಿ ಈ ನಂಬಿಕೆಯನ್ನು ಕಟುವಾಗಿ ಟೀಕಿಸಿ ಇದು ಸತ್ಯಕ್ಕೆ ಬಹಳ ದೂರವಾದುದೆಂದು ಹೇಳಿದ್ದಾರೆ.

'ಶಾಂತಿ' ಕತೆಯ ಮುಖ್ಯ ಪಾತ್ರ ಗೋಪಾ ಎಂಬವಳ ಪತಿ ತೀರಿಹೋಗುತ್ತಾನೆ. ಪತಿಯು ನಿರ್ವಹಿಸುತ್ತಿದ್ದ ಪೂರ್ಣ ಜವಾಬ್ದಾರಿ ಗೋಪಾಳ ಮೇಲೆ ಬೀಳುತ್ತದೆ. ಬಡತನವಿದ್ದರೂ ಸಹ ತನ್ನ ಒಬ್ಬಳೇ ಮಗಳಾದ ಸುನೀತೆಯ ವಿವಾಹವನ್ನು ಒಂದು ಪ್ರತಿಷ್ಠಿತ ಮನೆತನದ ವರನೊಡನೆ ಬಹಳ ವೈಭವದಿಂದ ಮಾಡುತ್ತಾಳೆ. ಆದರೆ ಅವಳ ಪತಿಯು ಜೀವಂತವಿದ್ದಾಗ ಬೇರೊಬ್ಬ ಸ್ತ್ರೀಯೊಡನೆ ಅನೈತಿಕ ಸಂಬಂಧವಿಟ್ಟುಕೊಂಡ ಬಗ್ಗೆ ದುಃಖಿಸುತ್ತಾಳೆ. ಗೋಪಾ ಪದ್ಧತಿಯಿಂದ ಹೊರಜಗತ್ತನ್ನು ನೋಡದೇ ಸುನೀತೆಯು ಯಾವಾಗಲೂ ಅಡಿಗೆ ಮನೆಯಲ್ಲಿಯೇ ಇದ್ದು, ಗಂಡನ ಮನೆಯವರಿಂದ ಪಡಬಾರದ ಕಷ್ಟಪಟ್ಟು ಒಂದು ದಿನ ಸ್ವರ್ಗಸ್ಥಳಾದ ಸಂಗತಿಯನ್ನು ಓದಿದ ಓದುಗನ ಎಂತಹ ಕಠೋರ ಹೃದಯವೂ ಸಹ ಮಮ್ಮಲ ಮರುಗದಿರಲಾರದು. ಹೀಗೆ ಇಲ್ಲಿ ಗೋಪಾ ಪದ್ಧತಿಯ ನಿಸ್ಸಾರತೆಯನ್ನು ಬಣ್ಣಿಸಿದ್ದಾರೆ. 'ಆಭೂಷಣ'

‘ಶಾಂತಿ’ ಮುಂತಾದ ಕತೆಗಳಲ್ಲಿ ಮಹಿಳೆಯರಿಗಿರುವ ಒಡವೆಗಳ ಮೇಲಿನ ಮೋಹವನ್ನು ವರ್ಣಿಸಿದ್ದಾರೆ. ‘ಶಾಂತಿ’ ಕತೆಯಲ್ಲಿ ಗೋಪಾ ತನ್ನ ಬಡತನವನ್ನು ಲೆಕ್ಕಿಸದೆ ಬಹಳ ಕಷ್ಟಪಟ್ಟು ದುಡಿದು ಹಣ ಸಂಗ್ರಹಿಸಿ ತನ್ನ ಒಬ್ಬಳೇ ಮಗಳು ಸುನೀತೆಗೆ ಒಡವೆಗಳನ್ನು ಮಾಡಿಸಿಕೊಟ್ಟು ಅಂದ-ಚಂದ ನೋಡುತ್ತಾಳೆ.

೨. ರಾಜನೈತಿಕ:

i) ಅಸ್ಪೃಶ್ಯತೆಯ ನಿವಾರಣೆ:

ಪ್ರೇಮಚಂದರು ತಮ್ಮ ಸಣ್ಣಕತೆಗಳ ಸಹಾಯದಿಂದ ಅಸ್ಪೃಶ್ಯತೆಯ ನಿವಾರಣೆಯನ್ನು ಕುರಿತು ಜನಮನದಲ್ಲಿ ಹೊಸ ವಿಚಾರ ಕ್ರಾಂತಿಯನ್ನುಂಟುಮಾಡಲೆತ್ನಿಸಿದರು. ಸವರ್ಣೀಯರು ಮತ್ತು ಅಸ್ಪೃಶ್ಯರು ಸಮಾನರು. ಸಾರ್ವಜನಿಕ ಸೀನೀರಿನ ಬಾವಿಗಳಿಂದ ಅವರೂ ಸಹ ಇತರರೊಡನೆ ನೀರು ತರುವಂತಾಗಬೇಕು. ದೇವರ ಗುಡಿಗಳಲ್ಲಿ ಪ್ರವೇಶಿಸಲು ಅವರಿಗೆ ಅಡ್ಡಿಯನ್ನುಂಟು ಮಾಡಬಾರದು. ಹಿಂದುಗಳೂ. ಅಸ್ಪೃಶ್ಯರೂ ಕೂಡಿ ಕುಳಿತು ಊಟ ಮಾಡುವಂತಾಗಬೇಕು ಅಸ್ಪೃಶ್ಯರು ಹೊಲಸು ಪದಾರ್ಥಗಳನ್ನು ತಿನ್ನಕೂಡದು. ಅವರಲ್ಲಿ ಒಳ್ಳೆಯ ಸಂಸ್ಕಾರಗಳು ಬೆಳೆದು ಬರಲು ನೆರವಾಗಬೇಕು. ಸಾಕ್ಷರತೆಯ ಮಹತ್ವ ತಾನೇ ತಾನಾಗಿ ಅವರಿಗೆ ಮನವರಿಕೆಯಾಗುವಂತೆ ಸುತ್ತಲಿನ ಪರಿಸರ ನಿರ್ಮಿತಗೊಳ್ಳಬೇಕು ಎಂದು ಸಲಹೆಯನ್ನಿತ್ತರು. 'ಠಾಕೂರ ಕಾ ಕುವಾ' ಕತೆಯಲ್ಲಿ ಹರಿಜನ ಮಹಿಳೆ ಗಂಗೆಗೆ ಜ್ವರಪೀಡಿತನಾದ ಆವಳ ಗಂಡನಿಗಾಗಿ ಕುಡಿಯಲು ಹಳ್ಳಿಯ ಶ್ರೀಮಂತ ಠಾಕುರನ ಸೀ ನೀರಿನ ಬಾವಿಯಿಂದ ನೀರನ್ನು ಒಯ್ಯಲು ಅನುಮತಿ ದೊರೆಯದಿದ್ದುದರಿಂದ ಆ ರೋಗಿಯು ಹೊಲಸು

ನೀರನ್ನೇ ಕುಡಿಯಬೇಕಾಗಿ ಬಂದ ಅನಿವಾರ್ಯ ಪ್ರಸಂಗವನ್ನು ಖಂಡಿಸಿದ್ದಾರೆ. ಪ್ರೇಮಚಂದರು ಅಸ್ಪೃಶ್ಯತೆಯ ನಿವಾರಣೆಗಾಗಿ ಸಾಂಪ್ರದಾಯಿಕ ಐಕ್ಯವನ್ನುಂಟುಮಾಡಿದರು. ಈ ಕಾರ್ಯದಲ್ಲಿ ಗಾಂಧೀಜಿ ಹಾಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ತತ್ವಗಳಿಂದ ಪ್ರೇರಿತರಾಗಿದ್ದರು.

ಇವರಂತೆಯೇ ಕ್ರಿಸ್ತ ಮತೀಯರೊಡನೆ ಅಥವಾ ಯಾವದೇ ವಿದೇಶಿಯನೊಡನೆ ವಾಸವಾಗಿರುವ, ಉಚ್ಚ ಶಿಕ್ಷಣಕ್ಕಾಗಿ ವಿದೇಶವೊಂದಕ್ಕೆ ತೆರಳುವ ವ್ಯಕ್ತಿಯನ್ನು ಆ ಕಾಲದಲ್ಲಿ ಸಮಾಜದಿಂದ ಬಹಿಷ್ಕರಿಸಲಾಗುತ್ತಿತ್ತು. ಪ್ರೇಮಚಂದರಿಗೆ ಇದು ಅಸಹ್ಯವೆನ್ನಿಸಿತು. ' ಖೂನ ಸಫೇದ ' ಕತೆಯಲ್ಲಿ ಈ ಬಗ್ಗೆ ಅವರ ಸ್ಪಷ್ಟವಾದ ನಿಲುವು ವ್ಯಕ್ತವಾಗಿದೆ. ಠಾಕುರ ಜಾಧೋರಾಯನ ಮಗ ಸಾಧೋರಾಯ ಬಾಲ್ಯ ಕಾಲದಲ್ಲಿಯೇ ಒಬ್ಬ ಪಾದರಿಯೊಂದಿಗೆ ಹೊರಟು ಹೋಗುತ್ತಾನೆ. ಹದಿನಾಲ್ಕು ವರ್ಷಗಳ ನಂತರ ಬರುತ್ತಾನೆ. ಪಾದರಿಯೊಡನೆ ಇರುವದು, ತಿನ್ನುವದು, ಮಾಡುತ್ತಿದ್ದನೆಂಬ ಆರೋಪದಮೇರೆಗೆ ಹಳ್ಳಿಯ ಪ್ರಮುಖನಾದ ಜಗತಸಿಂಹನೆಂಬ ವಯೋವೃದ್ಧನು ಸಾಧೋರಾಯನನ್ನು ತಮ್ಮ ಧರ್ಮದಿಂದ ಬಹಿಷ್ಕರಿಸುತ್ತಾನೆ. ಇದಕ್ಕಾಗಿ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾದರೂ ಸಹ ಆತನಿಗೆ ತಮ್ಮ ಧರ್ಮದಲ್ಲಿರಲು ಅನುಮತಿ ದೊರೆಯುವದಿಲ್ಲ. ಕೊನೆಗೆ– " ರಕ್ತ ಬಿಳಿಯದಾಗಿರುವವರ ಸಂಗಡ ಇರುವದೇ ಬೇಡ " ಎಂದು ನಿರ್ಧರಿಸಿ ಕ್ರೈಸ್ತ ಧರ್ಮದಲ್ಲಿ ಸೇರಿಕೊಳ್ಳುತ್ತಾನೆ.

ii) ಸ್ವದೇಶ ಪ್ರೇಮ:

ಪ್ರೇಮಚಂದರು ಸ್ವಾತಂತ್ರ್ಯ ಪೂರ್ವಕಾಲದಲ್ಲಿಯ ಸ್ವಾತಂತ್ರ್ಯ ಸಂಗ್ರಾಮದ ಬೆಂಬಲಿಗರಲ್ಲಿ ಒಬ್ಬರು. ದೇಶ ಪ್ರೇಮಿಗಳಾದ ಅವರ ಸರಸಾದಿಗಳಲ್ಲಿ ರಾಷ್ಟ್ರೀಯತೆಯ ಅದ್ಭುತ ಚೇತನಶಕ್ತಿ ತುಂಬಿಕೊಂಡಿತ್ತು. ಅವರ 'ಸೋಜೇ ವತನ' ಸಂಗ್ರಹದ ನಾಲ್ಕು ಕತೆಗಳಲ್ಲಿ ದೇಶಪ್ರೇಮ, ಬ್ರಿಟಿಶ ಸಾಮ್ರಾಜ್ಯದ ವಿರೋಧ, ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಅಚಲವಾದ ನಿಷ್ಠೆ– ಇವುಗಳ ಜೋದ್ಯ ವರ್ಣನೆ ಇದೆ. ವಿದೇಶಿ ಬಟ್ಟೆಗಳನ್ನು ತೊರೆಯುವದು ಇಲ್ಲವೆ ನಾಶಪಡಿಸು ವದು, ಸ್ವದೇಶಿ ಬಟ್ಟೆಗಳನ್ನು ಧರಿಸುವದು ಅರ್ಥಾತ್ 'ಸ್ವದೇಶಿ ಆಂದೋಲನ ವಿದೇಶಿ ಬಹಿಷ್ಕಾರ'ಗಳಂತಹ ಗಾಂಧೀಜಿಯ ವರ ತತ್ವಗಳು ಅಂದಿನ ಭಾರತಕ್ಕೆ ಅವಶ್ಯವೆಂದು ಘೋಷಿ ಸಿದ್ದಾರೆ. ಏಕೆಂದರೆ ವಿದೇಶಿ ವಸ್ತುಗಳ ಮೇಲಿನ ಮೋಹವೇ ನಮ್ಮ ಪರಾಧೀನತೆಗೆ ಮುಖ್ಯಕಾರಣವೆಂದು 'ಸುಹಾಗ ಕೀ ಸಾಡಿ' ಕತೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಆದಕಾರಣ ಈ ಪಾರತಂತ್ರ್ಯದ ಸಂಕೋಲಿಯನ್ನು ಹರಿದು ಹಾಕುವ ವರೆಗೆ ಆಂದೋಲನ ಮುಂದುವರಿಯಬೇಕೆಂದಿದ್ದಾರೆ. ಭಾರತ ಸ್ವತಂತ್ರವಾದೊಡನೆಯೇ ವಿದೇಶಿ ವಸ್ತುಗಳ ಮೇಲೆ ಹೆಚ್ಚಿಗೆ ಕರ ವಸೂಲ ಮಾಡಬೇಕೆಂದು ಸಲಹೆ ಮಾಡಿದ್ದಾರೆ. 'ಯಹೀ ಮೇರಾ ವತನ ಹೈ' ಕತೆಯಲ್ಲಿ ಅಮೇರಿಕೆಗೆ ವ್ಯಾಪಾರ ಕ್ಕೆಂದು ಹೋದ ಒಬ್ಬ ವ್ಯಾಪಾರಿಯು ಅಲ್ಲಿ ಬಹಳಷ್ಟು ಹಣ

ಗಳಿಸಿ ಧನಿಕನಾದ ನಂತರ ದೇಶಪ್ರೇಮ ಉಕ್ಕಿ ಬಂದು ಭಾರತಕ್ಕೆ ಮರಳಿ ಬರುತ್ತಾನೆ.

iii) ಸ್ವಾತಂತ್ರ್ಯ ಸಂಗ್ರಾಮ:

ಪ್ರೇಮಚಂದರು ಬ್ರಿಟಿಶರಿಂದ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ, ಪೂರ್ಣ ಸ್ವರಾಜ್ಯ, ಜನತೆಯ ರಾಜ್ಯವನ್ನು ಬಯಸಿದ್ದರು. ಪ್ರಭುತ್ವಶಾಹಿ ರಾಜ್ಯವನ್ನು ವಿರೋಧಿಸಿ ಅದು ಜನತೆಯ ಮೇಲೆ ಎಸಗುವ ದೊಡ್ಡ ಮೋಸವೆಂದು ಹೇಳಿ ವರ್ಗಭೇದ, ಜಾತಿಭೇದ, ಬಡವ ಬಲ್ಲಿದನೆಂಬ ಬೇದಭಾವ ಮುಂತಾದ ವೈಷಮ್ಯಗಳನ್ನು ತೊಡೆದು ಹಾಕಲು ಸಂಪೂರ್ಣ ಪ್ರಜಾರಾಜ್ಯವೇ ಬೇಕೆಂದರು. ಇದಕ್ಕಾಗಿ ಗಾಂಧೀಜಿಯವರ ಸತ್ಯಾಗ್ರಹ, ಅಸಹಯೋಗ ಆಂದೋಲನ, ಸವಿನಯ ಅವಜ್ಞಾ ಆಂದೋಲನ ಸಮುಚಿತ ಮಾರ್ಗಗಳೆಂದು ಘೋಷಿಸಿ ಇವು ಗಳಿಗೆ ಶಕ್ತಿಯನ್ನೀಯುವ ಅಹಿಂಸೆ, ಪ್ರೇಮ, ನ್ಯಾಯ ಹಾಗೂ ಹೃದಯ ಪರಿವರ್ತನದ ಸಿದ್ಧಾಂತವನ್ನು ಸಮರ್ಥಿ ಸಿದರು. ಹರತಾಳ, ಕೊಲೆ ಸುಲಿಗೆಗಳಂತಹ ಹಿಂಸೆಯ ಮಾರ್ಗಗಳನ್ನು ತೊರೆದು ಸತ್ಯಾಗ್ರಹ, ಮೆರವಣಿಗೆ ಮುಂತಾದ ಅಹಿಂಸಾತ್ಮಕ ವಿಧಾನಗಳಿಂದ ಸ್ವಾತಂತ್ರ್ಯ ಸಂಗ್ರಾಮವನ್ನು ನೆರವೇರಿಸಿದಾಗಿನ ಕೆಲವು ಅವಿಸ್ಮರಣೀಯ ಸನ್ನಿವೇಶಗಳನ್ನು ತಮ್ಮ ಸಣ್ಣಕತೆಗಳಲ್ಲಿ ವರ್ಣಿಸಿದ್ದಾರೆ. 'ಜುಲೂಸ' ಕತೆಯ ಇಬ್ರಾಹಿಮನು ಪೂರ್ಣ ಸ್ವರಾಜ್ಯ ಕ್ಕಾಗಿ ಆಂದೋಲನ ಮಾಡಿ ಬ್ರಿಟಿಶರಿಂದ ಏಟು ತಿಂದು

ಸಾವನ್ನಪ್ಪಿದ ಸಂಗತಿಯನ್ನು ಓದಿದಾಗ ಓದುಗನ ಹೃದಯದ ಮೇಲೆ ಬರೆ ಎಳೆದಷ್ಟು ನೋವಾಗುತ್ತದೆ. ಆಡಳಿತೆಯ ಅನಾನುಕೂಲತೆ ಮತ್ತು ಒಳಜಗಳಗಳನ್ನು ನಿವಾರಿಸಿ ಸಮಾಜದಲ್ಲಿ ಶಾಂತಿ, ಸೌಹಾರ್ದಗಳನ್ನುಂಟುಮಾಡುವ ದೃಷ್ಟಿಯಿಂದ ಪ್ರೇಮಚಂದರು ' ಪಂಚ ಪರಮೇಶ್ವರ ' ಕತೆಯ ಮೂಲಕ ಪಂಚಾಯತ ರಾಜ್ಯಪದ್ಧತಿಯ ಕನಸು ಕಂಡಿದ್ದಾರೆ.

ಕಾಲಕ್ರಮೇಣ ಅವರಿಗೆ ಅಹಿಂಸೆಯಲ್ಲಿ ನಂಬಿಕೆ ಉಳಿಯದಂತಾಗಿ ಹಿಂಸೆಯ ಮಾರ್ಗದಲ್ಲಿ ಆಸ್ಥೆಯುಂಟಾಯಿತು. ' ಕಾತಿಲ ' ಕತೆಯ ನಾಯಕ ಧರ್ಮವೀರನು ಅಹಿಂಸೆಯ ಸಮರ್ಥಕಳಾದ ತನ್ನ ತಾಯಿಗೆ ಅಹಿಂಸೆಯ ಮಾರ್ಗದಿಂದ ದೂರ ಸರಿದು ಹಿಂಸೆಯ ಮಾರ್ಗವನ್ನನುಸರಿಸಿದಾಗ ಮಾತ್ರ ದೇಶಕ್ಕೆ ಸ್ವಾತಂತ್ರ್ಯ ಸಿಗಬಲ್ಲದೆಂದು ಹೇಳುತ್ತ " ಕೇವಲ ಪಿಕೆಟಿಂಗ ಮತ್ತು ಮೆರವಣಿಗೆಗಳಿಂದ ನಮಗೆ ಸ್ವಾತಂತ್ರ್ಯ ದೊರೆಯಲಾರದು.... .... ಕೇವಲ ಧ್ವಜಾರೋಹಣ, ಗೀತಗಳನ್ನು ಹಾಡುವದರಿಂದ ದೇಶವು ಸ್ವತಂತ್ರವಾಗಲಾರದು. ನನಗಂತೂ ಇದೆಲ್ಲ ಸಣ್ಣ ಮಕ್ಕಳ ಆಟವೆನ್ನಿಸುತ್ತಲಿದೆ. ಅಳುವ ಮಕ್ಕಳಿಗೆ ಮಿಠಾಯಿಗಳನ್ನು ಕೊಟ್ಟು ಸುಮ್ಮನಿರಿಸುವಂತೆ ನಮಗೂ ಹಾಗೆಯೇ ಆಗಬಹುದು. ನಿಜವಾದ ಸ್ವಾತಂತ್ರ್ಯ ಅದರ ಬೆಲೆಯನ್ನು ನಿರ್ಧರಿಸಲು ಮುಂದಾದಾಗ ಮಾತ್ರ ದೊರೆಯ ಬಲ್ಲದು " ಎಂದಿದ್ದಾನೆ.

೩. ಸಂಸ್ಕೃತಿ—ಸಭ್ಯತೆ, ಶಿಕ್ಷಣ

ಪ್ರೇಮಚಂದರು ಭಾರತೀಯ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಮಾನವನ ಕಲ್ಯಾಣಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಅದರಿಂದ ಆಯ್ದುಕೊಂಡು ಸಣ್ಣ ಕತೆಗಳ ಮೂಲಕ ಬಹು ಯಶಸ್ವಿಯಾಗಿ ಜನತೆಯ ಹೃನ್ಮನಗಳಿಗೆ ಮುಟ್ಟಿಸಿದರು. ಭಾರತೀಯ ಸಂಸ್ಕೃತಿ, ಸಭ್ಯತೆ ಮತ್ತು ಧರ್ಮದಲ್ಲಿ ತುಂಬಿಕೊಂಡಿರುವ ಪತನೋನ್ಮುಖವಾದ ಪ್ರವೃತ್ತಿಗಳನ್ನು ದೂರ ಮಾಡುವ ಉಪಾಯಗಳನ್ನು ಕಂಡುಕೊಳ್ಳುವದಕ್ಕಾಗಿ ಆರ್ಯಸಮಾಜದಿಂದ ಸಾಕಷ್ಟು ಸಹಾಯವನ್ನು ಪಡೆದುಕೊಂಡರು. 'ಪಾಪ ಕಾ ಅಗ್ನಿಕುಂಡ'ದಲ್ಲಿ ರಾಜನಂದಿನಿಯ ಸಂಸ್ಕೃತ ಭಾಷೆಯ ಮೇಲಿನ ಪ್ರೇಮ, ಬ್ರಜವಿಲಾಸಿನಿಯು ವ್ರತ ಮಾಡುವದಕ್ಕೆ ಹೆಚ್ಚು ಮಹತ್ವ ಕೊಡುವಿಕೆ, ಹಸುವಿನ ಮೇಲೆ ಅವಳ ತಂದೆಯ ಪ್ರೇಮ, ಭಾರತೀಯ ಸಂಸ್ಕೃತಿಯ ಬಗ್ಗೆ ಅವರಿಗಿದ್ದ ನಿಷ್ಠೆಯನ್ನು ಸೂಚಿಸುತ್ತವೆ.

ತಮ್ಮ ಸಣ್ಣಕತೆಗಳ ಮೂಲಕ ಇಸ್ಲಾಂ ಸಂಸ್ಕೃತಿ ಹಾಗೂ ಅದರ ಪರಿಚಯ ಮಾಡಿಕೊಟ್ಟಿದ್ದಾರೆ. ಪಾತ್ರಗಳಿಗೆ ಇಸ್ಲಾಮಿಯತ್ವ ಅಥವಾ ಹಿಂದುತ್ವದ ಬಟ್ಟೆಯನ್ನು ತೊಡಿಸದೇ ಮಾನವೀಯತೆಯ ವಸ್ತ್ರ ತೊಡಿಸಿ ಸೃಷ್ಟಿಸಿದ್ದಾರೆ. ಇವೆರಡೂ ಸಂಸ್ಕೃತಿಗಳಲ್ಲಿ ಪರಸ್ಪರ ಸಹಿಷ್ಣುತೆ, ತ್ಯಾಗಬುದ್ಧಿ ಬೆಳೆದು ಬರಬೇಕೆಂಬುದು ಪ್ರೇಮಚಂದರ ಇಚ್ಛೆಯಾಗಿತ್ತು. ಸಮಾ

ನತೆ, ಬಂಧುತ್ವ, ಸ್ತ್ರೀಜೀವನದ ಸುಭದ್ರತೆ ಮುಂತಾದ ಕೆಲವು ಇಸ್ಲಾಂ ಸಂಸ್ಕೃತಿಯ ಅದ್ವಿತೀಯವಾದ ಗುಣವಿಶೇಷಗಳು ಅವರ ಗಮನ ಸೆಳೆದಿದ್ದವು. ಇದಕ್ಕೆ ಪ್ರತಿಯಾಗಿ ಭಾರತೀಯ ರಲ್ಲಿರುವ ಸೇವೆ, ತ್ಯಾಗ, ಪ್ರೇಮ, ಅಹಿಂಸಾ ಪರಮೋ ಧರ್ಮಃ, ವಸುಧೈವ ಕುಟುಂಬಕಮ್ ಮುಂತಾದ ಆದರ್ಶಗಳು ವಿದೇಶ ಗಳಲ್ಲಿ ಮೆಚ್ಚಿಗೆ ಪಡೆದಿವೆಯೆಂಬುದು ಅವರಿಗೆ ಅತೀವ ಹೆಮ್ಮೆಯ ಮಾತಾಗಿತ್ತು. ಅವರು ಎಲ್ಲಿಯೂ ಭಾರತೀಯ ಸಂಸ್ಕೃತಿಯನ್ನು ವಿರೋಧಿಸಿಲ್ಲ. ಪಾಶ್ಚಾತ್ಯ ಮತ್ತು ಭಾರ ತೀಯ ಸಂಸ್ಕೃತಿ – ಶಿಕ್ಷಣಗಳು ಸ್ವಾರ್ಥ ಪರಾರ್ಥಗಳ ಸಂಕೇತಗಳಾಗಿವೆ. ಪಾಶ್ಚಾತ್ಯ ಸಭ್ಯತೆಯ ಸಂಪರ್ಕದ ಪರಿಣಾಮವಾಗಿ ಭಾರತೀಯರಲ್ಲಿ ಸ್ವಾರ್ಥಲೋಲುಪತೆ ಮುಗಿಲೆತ್ತರಕ್ಕೆ ಮುಟ್ಟುತ್ತಲಿದೆ. ಮನುಷ್ಯ ದುರ್ವ್ಯಸನಿಯಾಗು ತ್ತಲಿದ್ದಾನೆ. ಆದ ಕಾರಣ ಸಾಧಕ ಬಾಧಕಗಳನ್ನು ಚೆನ್ನಾಗಿ ಅರಿತುಕೊಳ್ಳದೆ ಅದಕ್ಕೆ ಮಾರು ಹೋಗಬಾರದೆಂದು ಭಾರ ತೀಯ ಜನತೆಗೆ ಮನವಿ ಮಾಡಿಕೊಂಡರು. 'ಉನ್ಮಾದ' ಕತೆ ಯಲ್ಲಿ ನಾಯಕ ಮನಹರ ಪಾಶ್ಚಾತ್ಯ ಸಭ್ಯತೆಯ ಬಾಹ್ಯಾಡಂ ಬರಕ್ಕೆ ಭಾಯಿ ಬಾಯಿ ಬಿಡುತ್ತಾನೆ. ವಿಲಾಸಿಯಾಗಿ ಮಾನ ಸಿಕ ಶಾಂತಿಯನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ಪಶ್ಚಾ ತ್ತಾಪ ಪಟ್ಟುಕೊಂಡು ಭಾರತೀಯ ಸಂಸ್ಕೃತಿಗೆ ಮರಳಿ ಬರು ತ್ತಾನೆ. ಇದರಿಂದ ಮಾತ್ರ ಮನಸ್ಸಿಗೆ ನೆಮ್ಮದಿ ಮತ್ತು ಸುಖ ದೊರೆಯ ಬಲ್ಲದೆಂದು ಅವನಿಗೆ ಮನವರಿಕೆಯಾಗುತ್ತದೆ.

ಅವರು ಇನ್ನಷ್ಟು ಮುಂದೆ ಹೋಗಿ ಭವ್ಯವಾದ ಭಾರತೀಯ ಸಂಸ್ಕೃತಿಯನ್ನು ತೊರೆದು ಭಾರತೀಯರ ದೃಷ್ಟಿಯಲ್ಲಿ ನಿಷಿದ್ಧವೆನ್ನಿಸಬಹುದಾದ ಬೇರೆ ಇನ್ನೊಂದು ಸಂಸ್ಕೃತಿಯ ಅಗ್ರಾಹ್ಯ ಅಂಶಗಳನ್ನು ಅನುಕರಿಸುವದು ಮಾನಸಿಕ ಪರಾಧೀನತೆಯೆಂದರು. ಉದಾಹರಣೆಗೆ, ಭಾರತೀಯ ಸಂಸ್ಕೃತಿಯನ್ನು ಅಲಕ್ಷಿಸಿ, ಪಾಶ್ಚಾತ್ಯ ಸಭ್ಯತೆಯ ಸೋಗು ಹಾಕಿ, ಬ್ರಿಟಿಶ ಆಳರಸರ ಕೈಗೊಂಬೆಯಾಗಿ ಭಾರತೀಯ ಜನತೆ ಮತ್ತು ಸಂಸ್ಕೃತಿಯನ್ನು ಆದರಿಸದ ನ್ಯಾಯಾಧೀಶ ರಾಯಸಾಹೇಬ ರತ್ನಕಿಶೋರನಂತಹ ಛದ್ಮವೇಷಧಾರಿಗಳನ್ನು 'ಸಭ್ಯತಾ ಕಾ ರಹಸ್ಯ' ಕತೆಯಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ. ಆದರೂ ಸಹ ಹಿತಕಾರಿಯಾದ ಯಾವ ಅನುಕರಣೆಗೂ ಅವರು ವಿರೋಧಿಗಳಾಗಿರಲಿಲ್ಲ. ಭಾರತೀಯ ಸಂಸ್ಕೃತಿಯು ಇನ್ನೂ ವ್ಯಾಪಕವಾಗಬೇಕು, ಯುಗಧರ್ಮಕ್ಕೆ ಹೊಂದಿಕೊಂಡು ಬೆಳೆಯಬೇಕು-ಎಂಬ ಉದ್ದೇಶದಿಂದ ಪಾಶ್ಚಾತ್ಯ ಸಂಸ್ಕೃತಿಯ ಕೆಲವು ಒಳ್ಳೆಯ ಅಂಶಗಳನ್ನು ಭಾರತೀಯ ಭಾವಭೂಮಿಯ ಮೇಲೆ ಬೆಳೆಯಿಸಿ ರೂಢಿಸಿಕೊಳ್ಳಬೇಕೆಂದರು. ಪಾಶ್ಚಾತ್ಯರ ಕಾರ್ಯತತ್ಪರತೆ, ವಿನೋದಪ್ರಿಯತೆಯಿಂದ ಮನುಷ್ಯನಲ್ಲಿ ಉತ್ಸಾಹ, ಚೈತನ್ಯ ಉಂಟಾಗುತ್ತವೆಯೆಂದು ಹೇಳುತ್ತಿದ್ದರು. 'ಸುಹಾಗ ಕಾ ಶವ' ಕತೆಯಲ್ಲಿ ಭಾರತೀಯ ಸ್ತ್ರೀ ಸುಭದ್ರಾ ಲಂಡನ್ನಿನ ಜನಜೀವನದಲ್ಲಿ ಕ್ಷಣಕ್ಷಣಕ್ಕೂ ಪ್ರದರ್ಶಿಸಲ್ಪಡುವ ಆಮೋದ-ಪ್ರಮೋದವನ್ನು ಕಂಡು ಆಶ್ಚರ್ಯ ಪಡುತ್ತಾಳೆ. ಪ್ರೇಮಚಂದರು ಶಿಷ್ಟ ವಿನೋದಕ್ಕೆ ಭಾರತೀಯ ಸಂಸ್ಕೃತಿಯಲ್ಲಿಯೂ

ಸ್ಥಾನವಿರಬೇಕೆಂದು ಬಯಸಿದ್ದರು. ಪಾಶ್ಚಾತ್ಯರ ಕಾಯಕ ನಿಷ್ಠೆಯನ್ನು ಭಾರತೀಯರಲ್ಲಿಯೂ ಕಾಣಬೇಕೆಂದು ಇಚ್ಛಿಸಿದ್ದರು. ಉತ್ಸವ, ಅತಿಥಿಸತ್ಕಾರ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳು. ಅತಿಥಿ ಸತ್ಕಾರವು ಪವಿತ್ರವಾದ ಧರ್ಮವೆಂಬ 'ಮಮತಾ' ಕತೆಯ ಮುಖ್ಯ ಪಾತ್ರ ರಾಮರಕ್ಷಾದಾಸನ ಅಭಿಪ್ರಾಯವೇ ಇವರ ಅಭಿಪ್ರಾಯವಾಗಿತ್ತು. ರಾಮರಕ್ಷಾದಾಸನು ದಿಲ್ಲಿಯ ಒಬ್ಬ ಶ್ರೀಮಂತನು. ದೊಡ್ಡ ದೊಡ್ಡ ಧನಿಗಳು ಅವನನ್ನು ಕಾಣಲು ಬರುತ್ತಿರುತ್ತಾರೆ. ಮನೆಗೆ ಬಂದ ಅತಿಥಿಗಳಿಗೆ ತೃಪ್ತಿಯಾಗುವಂತೆ ಆತಿಥ್ಯನೀಡುವದು ಅವನಿಗೆ ಬಹಳ ಇಷ್ಟ. ಅವರವರ ಅಭಿರುಚಿಗೆ ತಕ್ಕಂತೆ ಟೆನ್ನೀಸ ಮುಂತಾದ ಆಟವಾಡಿ, ಪಾನೀಯಗಳನ್ನು ಕೊಟ್ಟು ಅತಿಥಿ ಸತ್ಕಾರ ಮಾಡುತ್ತಾನೆ. "ಪುರಾತನ ಕಾಲದಿಂದಲೂ ಅತಿಥಿ ಸತ್ಕಾರವು ಭಾರತೀಯ ಭವ್ಯಪರಂಪರೆಯ ಒಂದು ಮುಖವು. ಭಾರತೀಯರು ಅತಿಥಿಸತ್ಕಾರದ ವಿಷಯದಲ್ಲಿ ಅಗ್ರಗಣ್ಯರು. ನಾವೆಲ್ಲ ಭಾರತೀಯರು ಈ ಗುಣದಿಂದಾಗಿಯೇ ಮನುಷ್ಯರಾಗಿ ಬಾಳುತ್ತೇವೆ. ಈ ಗುಣವನ್ನು ಕಳೆದುಕೊಂಡರೆ ನಮ್ಮ ಬದುಕಿಗೆ ಬೆಲೆ ಬರಲಾರದು." ಎಂದು ಹೇಳುತ್ತಿದ್ದನು.

ಪ್ರೇಮಚಂದರು ವ್ಯಕ್ತಿಯನ್ನು ಮಾನಸಿಕ ಶೈಥಿಲ್ಯಕ್ಕೊಳಪಡಿಸುವ ಶಿಕ್ಷಣ ಪದ್ಧತಿಯನ್ನು 'ಪಶು ಸೆ ಮನುಷ್ಯ' ಕತೆಯ ಪ್ರೇಮಶಂಕರನ ಮಾತುಗಳಲ್ಲಿ ತಿರಸ್ಕರಿಸಿದ್ದಾರೆ. ಮನುಷ್ಯನು ಸತ್ಪ್ರವೃತ್ತಿಯುಳ್ಳವನಾಗುವಂತೆ ಅವನಲ್ಲಿ ಧೈರ್ಯ, ಸಂತೋಷ,

ಪರೋಪಕಾರ ಹಾಗೂ ಔದಾರ್ಯದ ವೃದ್ಧಿಯಾಗುವಂತೆ ಮಾಡುವ ಶಿಕ್ಷಣವು ಒಳ್ಳೆಯ ಶಿಕ್ಷಣವು. ಸ್ವಾರ್ಥ, ಮೋಸ, ಭ್ರಷ್ಟಾಚಾರಗಳಂತಹ ದುಷ್ಟ ಪ್ರವೃತ್ತಿಗಳು ಬೆಳೆಯಲು ಅನುಕೂಲವಾಗುವ ಶಿಕ್ಷಣವು ಒಳ್ಳೆಯ ಶಿಕ್ಷಣವಲ್ಲವೆಂದಿದ್ದಾರೆ. ಪಾಶ್ಚಾತ್ಯ ಶಿಕ್ಷಣಪದ್ಧತಿಯು ಭಾರತೀಯ ಯುವಕ ಯುವತಿಯರಿಗೆ ಹಿತಕಾರಿಯಾಗಲಾರದೆಂದು ಅಭಿಪ್ರಾಯ ಪಟ್ಟಿದ್ದಾರೆ. ಭಾರತದಲ್ಲಿ ದಿನದಿನಕ್ಕೆ ಹೆಚ್ಚುತ್ತಲಿರುವ ಅನೈತಿಕತೆ, ಅಸಭ್ಯತೆಗೆ ಪಾಶ್ಚಾತ್ಯ ಸಭ್ಯತೆಯು ಮುಖ್ಯ ಕಾರಣಗಳಲ್ಲೊಂದು. ಇಂತಹ ಪರಿಸ್ಥಿತಿಯಲ್ಲಿ ಪತನೋನ್ಮುಖವಾದ ವ್ಯಕ್ತಿ-ಚಾರಿತ್ರ್ಯದ ಪರಿಶುದ್ಧತೆಗೆ ಪುರಾತನ ಗುರುಕುಲ ಪದ್ಧತಿಯು ದಾರಿದೀಪವಾದೀತೆಂಬ ತಮ್ಮ ದೂರದೃಷ್ಟಿಯನ್ನು ಪ್ರಸ್ತುತಪಡಿಸಿ ಓದುಗನು ಈ ಕಡೆಗೆ ಗಮನ ಹರಿಸುವಂತೆ ಮಾಡಿದ್ದಾರೆ.

೪. ಧಾರ್ಮಿಕ

ಪ್ರೇಮಚಂದರ ದೃಷ್ಟಿಯಲ್ಲಿ ಧರ್ಮವೆಂದರೆ ಕರ್ತವ್ಯ. ಪ್ರಾಮಾಣಿಕತೆಯಿಂದ ಕೆಲಸ ಮಾಡುವವನೇ ಧಾರ್ಮಿಕನು. ಅವನೇ ಪರಮಾತ್ಮನ ಪ್ರೀತಿಗೆ ಪಾತ್ರನು. ಅವರು ಧರ್ಮದ ಪುನರುತ್ಥಾನವನ್ನು ಬಯಸಿದ್ದರೂ ಸಹ ಅದರಲ್ಲಿ ವಿಕೃತ ರೂಪ, ಬಾಹ್ಯಾಡಂಬರ ಬೇಡವೆನ್ನುತ್ತಿದ್ದರು. ತ್ಯಾಗ, ಸೇವೆ, ಶುದ್ಧಾಚಾರ, ಸತ್ಯ, ಅಹಿಂಸೆ, ಪ್ರೇಮದಂತಹ ಉಚ್ಚಾದರ್ಶಗಳನ್ನು ನಿಸ್ವಾರ್ಥ ಬುದ್ಧಿಯಿಂದ ಸಂರಕ್ಷಿಸಿಕೊಂಡು ಹೋಗುವದೇ ಧರ್ಮವೆಂದರು. ಇಂತಹ ಧರ್ಮವನ್ನು ಅವರು ಬಹಳ ಗೌರವಿಸುತ್ತಿದ್ದರು. ಮೂರ್ತಿಪೂಜೆ, ದಾನ, ವ್ರತ ಮುಂತಾದ ಅಂಧಶ್ರದ್ಧೆಗಳನ್ನು ವಿರೋಧಿಸಿದರು. ದೇವರ ಹೆಸರಿನಲ್ಲಿ ಹಾಡುವದು, ಬಾರಿಸುವದು ಧರ್ಮವಲ್ಲ. ಸತ್ಯ ಹಾಗೂ ಪ್ರಾಮಾಣಿಕತೆಯಲ್ಲಿ ಧರ್ಮವಿದೆಯೆಂದರು. ಅಂತರಂಗದಲ್ಲಿ ಉನ್ನತವಾದ ವಿಚಾರಗಳನ್ನು ಹುಟ್ಟಿಸುವ ಶಕ್ತಿ ಧರ್ಮದಲ್ಲಿದೆ. ಇದಕ್ಕೆ ಪವಿತ್ರ ಮನಸ್ಸು ಒಂದು ಸಾಧನವಾಗಿ ದೊರೆಯಬೇಕೆಂದು ಹೇಳಿದರು. ಸಹಾನುಭೂತಿ, ಪ್ರೇಮ, ಸೌಹಾರ್ದಗಳ ಮುಪ್ಪುರಿಗೆ ಧರ್ಮವೆಂದರು. ದೇವರ ಗುಡಿ, ಮಸೀದೆಗಳೆರಡೂ ಈಶ್ವರನ ನಿವಾಸಸ್ಥಾನಗಳೆಂದರು. ಮಾನವತಾವಾದಿಗಳಾದ ಅವರು ಹಿಂದು ಮುಸಲ್ಮಾನರಲ್ಲಿ ಸಂಭವಿಸುತ್ತಿದ್ದ ಒಳಜಗಳವನ್ನು ವಿರೋಧಿಸಿ ಧಾರ್ಮಿಕ ಐಕ್ಯವನ್ನುಂಟು ಮಾಡಲು ಯತ್ನಿಸಿದರು.

ಹಿಂದುಗಳಲ್ಲಿ ಪ್ರಚಲಿತವಿರುವ ಧಾರ್ಮಿಕ ಸಂಕೀರ್ಣತೆಯು ಹಿಂದೂಧರ್ಮದ ವಿನಾಶಕ್ಕೇ ಕಾರಣೀಭೂತವಾಗುತ್ತದೆಂದು ಹೇಳಿದರು. ಅಂದಿನ ಸಮಾಜದಲ್ಲಿ ಅಪಾಯಕಾರಿಯಾದ ಮಟ್ಟವನ್ನು ತಲುಪಿದ ಧಾರ್ಮಿಕ ಸಾಂಪ್ರದಾಯಿಕ ವೈಮನಸ್ಸನ್ನು ತೊಡೆದು ಹಾಕಿ ಧರ್ಮಸಹಿಷ್ಣುತೆಯನ್ನುಂಟು ಮಾಡುವ ದೃಷ್ಟಿಯಿಂದ ಥಿಯಾಸಾಫಿಕಲ್ ಸೊಸಾಯಿಟಿಯ ತತ್ವಗಳ ಕಡೆಗೆ ಆಕರ್ಷಿತರಾದರು. 'ಮಂದಿರ ಮಸ್ಜಿದ' 'ಅಹಿಂಸಾ ಪರಮೋ ಧರ್ಮಃ' ಕತೆಗಳ ನಾಯಕರಾದ ಚೌಧರಿ ಇತರತ ಅಲಿ, ಜಾಮೀದ ಪರಧರ್ಮಸಹಿಷ್ಣುತೆಯ ದ್ಯೋತಕವಾಗಿದ್ದಾರೆ. ಜಾಮೀದನೆಂಬೊಬ್ಬ ಹಳ್ಳಿಗ ಅತ್ತಿತ್ತ ಅಲೆದಾಡಿ ಒಂದು ಪಟ್ಟಣಕ್ಕೆ ಬಂದು ತಲುಪುತ್ತಾನೆ. ದಣಿದದ್ದರಿಂದ ಒಂದು ಗುಡಿಯ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾನೆ. ಗುಡಿಯ ಮುಂದೆ ಬಿದ್ದಿದ್ದ ಕಸಕಡ್ಡಿ ಅಸಹ್ಯವೆನ್ನಿಸಿ ತನ್ನ ಧೋತರದ ಸೆರಗಿನಿಂದ ಆ ಕಟ್ಟೆಗಳನ್ನು ಒರೆಸಿ ಸ್ವಚ್ಛ ಮಾಡುತ್ತಾನೆ. ಮುಸಲ್ಮಾನನಾದ ಜಾಮೀದನ ಸೇವಾ ಭಾವನೆಯನ್ನು ಗೌರವಿಸಿ ಭಕ್ತರು ಅವನಿಗೆ ಎಲ್ಲ ರೀತಿಯ ನೆರವು ನೀಡುತ್ತಾರೆ. ಜಾಮೀದನು ಭಕ್ತರೊಡನೆ ಕುಳಿತು ಪುರಾಣ ಓದುತ್ತಿರುವಾಗ ಎದುರು ಬೀದಿಯ ಮೇಲೆ ತಿಲಕಧಾರಿಯಾದ ಒಬ್ಬ ಯುವಕನು ಒಬ್ಬ ವೃದ್ಧನನ್ನು ಹೊಡೆಯುತ್ತಿರುವದನ್ನು ಕಂಡು ತಡೆಯಲು ಪ್ರಯತ್ನಿಸಿದಾಗಲೂ ಅವನ ಮಾತಿನ ಕಡೆಗೆ ಗಮನವನ್ನೇ ಕೊಡದ ಆ ಯುವಕನ ಮೇಲೆ ಕಿಡಿ–ಕಿಡಿಯಾದ ಜಾಮೀದನು ಎದ್ದು ಬಂದು

ಅವನನ್ನು ಚನ್ನಾಗಿ ಹಣಿಯುತ್ತಾನೆ. ಹುಸಿ ಭಕ್ತರು ಜಾಮೀದನನ್ನೂ ಚನ್ನಾಗಿ ಬಯ್ದು ಹೊಡೆಯುತ್ತಾರೆ.

ಇದನ್ನು ಗಮನಿಸಿದ ಮುಸಲ್ಮಾನರು ಜಾಮೀದನನ್ನು ತಮ್ಮೊಳಗೆ ಕರೆದುಕೊಳ್ಳುತ್ತಾರೆ. ಜಾಮೀದ ಕುರಾನವನ್ನು ಪಠನ ಮಾಡ ಹತ್ತುತ್ತಾನೆ. ಒಂದು ದಿನ ಕಾಜಿ ಸಾಹೇಬರು ಒಬ್ಬ ಸ್ತ್ರೀಯನ್ನು ಧರ್ಮಾಂತರ ಮಾಡಲು ಬಲವಂತ ಮಾಡುತ್ತಿರುವದನ್ನು ನೋಡುತ್ತಾನೆ. ಅವಳು ಅದಕ್ಕೆ ಒಪ್ಪದಿದ್ದಾಗ ಸ್ವತಃ ಜಾಮೀದನು ಅವಳನ್ನು ಮನೆಯವರೆಗೆ ಕರೆದುಕೊಂಡು ಮುಟ್ಟಿಸಿ ಆ ಸಂಕಟದಿಂದ ಪಾರುಮಾಡುತ್ತಾನೆ. ಇದರಿಂದಾಗಿ ಧರ್ಮಗುರುಗಳ ಮೇಲೆ ತಿರಸ್ಕಾರ ಉಂಟಾಗುತ್ತದೆ. ಆ ಮೇಲೆ ಪುನಃ ಹಳ್ಳಿಗೆ ಹೋಗಿ ನೆಲೆಸುತ್ತಾನೆ. ಹೀಗೆ ಜಾಮೀದನ ಮನೋಭೂಮಿಕೆಯು ಪರಧರ್ಮ ಸಹಿಷ್ಣುತೆಯ ಸಂಕೇತವೆನ್ನಿಸಿದೆ. ಇಲ್ಲಿ ಕತೆಗಾರನು ಜಾಮೀದನ ಧ್ವನಿಯಲ್ಲಿ ಧರ್ಮವೆಂದರೆ ಸಹಾನುಭೂತಿ, ಪ್ರೇಮ, ಸೌಹಾರ್ದವೆಂದು ವ್ಯಾಖ್ಯೆ ಮಾಡಿದ್ದಾನೆ. ಧರ್ಮಗಳಲ್ಲಿರುವ ನಿಸ್ಸಾರತೆಯನ್ನು ಎತ್ತಿ ತೋರಿಸಿ ಪ್ರತಿಯೊಬ್ಬನಲ್ಲಿಯೂ ಪರಧರ್ಮ ಸಹಿಷ್ಣುತೆಯಿರಬೇಕಾದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದ್ದಾನೆ.

ಈಶ್ವರ–ಅಲ್ಲಾ, ಖುದಾ–ಭಗವಾನ, ರಾಮ–ರಹೀಮ ಇವೆಲ್ಲವೂ ಒಬ್ಬನೇ ಒಬ್ಬ ಈಶ್ವರನ ಹಲವು ನಾಮಗಳು.

ಅವನೇ ಅಖಿಲ ಬ್ರಹ್ಮಾಂಡದ ಒಡೆಯನೆಂದು ಹೇಳಿದರು.
ಅವರಿಗೆ ಈಶ್ವರನ ಅದ್ಭುತ ಶಕ್ತಿಯ ಬಗ್ಗೆ ಪೂರ್ಣ ನಂಬಿಕೆ
ಇತ್ತು. ಮೂರ್ತಿ ಪೂಜೆಯಲ್ಲಿ ಆಸ್ಥೆಯಿಲ್ಲದವನೂ ಸಹ
ಕಷ್ಟಕಾಲದಲ್ಲಿ ದೇವರ ಎದುರು ತನ್ನ ಅಳಲನ್ನು ತೋಡಿ
ಕೊಳ್ಳುತ್ತಾನೆ. ಇಂತಹ ಸ್ಥಿತಿಯಲ್ಲಿ ಮೂರ್ತಿ ಪೂಜೆಯೊಂ
ದಿಗೆ ದೇವರನ್ನು ಮೊರೆ ಹೋಗುವದು ಮಾನವ ಸಹಜ ಗುಣ
ವೆಂದು ಕತೆಗಾರನು 'ಧಕೋಸಲಾ' ಕತೆಯಲ್ಲಿ ಹೇಳಿದ್ದಾನೆ.
'ಮುಕ್ತಿ ಮಾರ್ಗ' ಕತೆಯಲ್ಲಿ 'ಬುದ್ಧೂ' ಎಂಬ ಕುರುಬನು
ಝೀಂಗುರನೆಂಬ ಒಬ್ಬ ರೈತನ ಹೊಲ ಮೇಯಿಸಿ ಹಾಳು
ಮಾಡುತ್ತಿದ್ದುದನ್ನು ಕಂಡು ಆ ರೈತನು ಒಂದು ಸಲ ಅವನನ್ನು
ಚನ್ನಾಗಿ ಹೊಡೆಯುತ್ತಾನೆ. ಸೇಡು ತೀರಿಸಿಕೊಳ್ಳಲು
ಝೀಂಗುರನ ಹೊಲದಲ್ಲಿ ಮಾಗಿ ನಿಂತ ಪೈರಿಗೆ ಬೆಂಕಿಯಿಡು
ತ್ತಾನೆ. ಝೀಂಗುರನು ಪುನಃ ಸೇಡು ತೀರಿಸಿಕೊಳ್ಳಲು
ಹರಿಹರನೆಂಬ ಸಮಗಾರನನ್ನು ಉಪಯೋಗಿಸಿಕೊಳ್ಳುತ್ತಾನೆ.
ಹರಿಹರನು ತನ್ನದೊಂದು ಆಕಳನ್ನು ಕಾಯಲು ಬುದ್ಧೂನ
ಹತ್ತರ ಬಿಡುತ್ತಾನೆ. ಮರುದಿನವೇ ಆಕಳು ಸತ್ತುಹೋಗು
ತ್ತದೆ. ಗೋಹತ್ಯೆಯ ಪಾಪದಿಂದ ಮುಕ್ತನಾಗಲು ಪ್ರಾಯಶ್ಚಿ
ತ್ತದ ರೂಪದಲ್ಲಿ ಬುದ್ಧೂ ತೀರ್ಥಯಾತ್ರೆ ಮಾಡಬೇಕಾಗು
ತ್ತದೆ. ಐದು ನೂರು ಜನ ಬ್ರಾಹ್ಮಣರಿಗೆ ಊಟ ಹಾಕಬೇಕಾ
ಗುತ್ತದೆ. ಬುದ್ಧೂನ ಮನೆ ಹಾಳಾಗುತ್ತದೆ. ಹೀಗೆ ಈ
ಕತೆಯಲ್ಲಿ ಗೋವಧೆಯನ್ನು ವಿರೋಧಿಸಿ ಸರ್ವಧರ್ಮೀಯರೂ
ಆಕಳನ್ನು ಪೂಜಿಸಬೇಕೆಂದಿದ್ದಾರೆ.

೫. ಸೈದ್ಧಾಂತಿಕ

ಪ್ರೇಮಚಂದರು ಸಮಾಜಸೇವೆ, ದೇಶಸೇವೆ, ಪಾರಿವಾರಿಕ ಸೇವೆಗಳಿಗೆ ಬಹಳ ಮಹತ್ವ ಕೊಟ್ಟಿದ್ದರು. ಸೇವೆ ಸಫಲವಾಗಲು ತ್ಯಾಗ, ನಿಸ್ವಾರ್ಥ ಬುದ್ಧಿ ಬೇಕೆಂದರು. 'ಲಾಲ ಫೀತಾ' ಕತೆಯ ನಾಯಕನು ದೇಶಸೇವೆಗಾಗಿ ನೌಕರಿಗೆ ರಾಜೀನಾಮೆ ಕೊಡುತ್ತಾನೆ. 'ದೊ ಸಖಿಯಾ' ಕತೆಯಲ್ಲಿ ಹೆಂಡತಿಯ ನಿಷ್ಠಾಸಂಪನ್ನ ಸೇವೆಯ ಪ್ರಭಾವದಿಂದ ಘಟಿಂಗನಾದ ಗಂಡನು ಸರಿಯಾದ ದಾರಿಗೆ ಬರುತ್ತಾನೆಯೆಂದಿದ್ದಾರೆ. 'ಕಪ್ತಾನ ಸಾಹಬ' ಕತೆಯಲ್ಲಿ ಪ್ರೇಮವು ಮಾನವನಲ್ಲಿ ಭಾವೈಕ್ಯ, ಸಂರಕ್ಷಣೆಯ ತಿಳುವಳಿಕೆಯನ್ನುಂಟು ಮಾಡುತ್ತದೆ. ಸೇವೆ, ತ್ಯಾಗ, ನಿಷ್ಕಾಮ ಕರ್ಮಗಳ ಸಾಮರಸ್ಯದ ಫಲವೇ ಪ್ರೇಮ. ಇದು ಪ್ರತಿಯೊಂದು ಪ್ರಾಣಿ, ಪಕ್ಷಿಗೂ ಅನ್ನ, ನೀರುಗಳಷ್ಟೇ ಅನಿವಾರ್ಯ. ಪ್ರೇಮದ ಬಂಧನವು ಸಡಿಲಗೊಂಡರೆ ಪಾರಿವಾರಿಕ ಜೀವನ ಸುಸೂತ್ರವಾಗಿ ಸಾಗಲಾರದೆಂದು ಹೇಳಿದ್ದಾರೆ. ರೋಮಾರೋಲಾ, ಗೀತಾ ಸಂದೇಶ, ಗಾಂಧೀತತ್ವಗಳಿಂದ ಪ್ರೇರಿತರಾಗಿ ಕಾಯಕದ ಮಹತಿಯನ್ನು ತಮ್ಮ ಸಣ್ಣ ಕತೆಗಳ ಮೂಲಕ ವಿದಿತ ಪಡಿಸಿದ್ದಾರೆ. ಅವರು ಅಕರ್ಮಣ್ಯತೆಯ ವಿರೋಧಿಯಾಗಿದ್ದರು. 'ಕಫನ' ಕತೆಯ ಘೀಸೂ ಮತ್ತು ಮಾಧವ ಇಬ್ಬರ ಅಕರ್ಮಣ್ಯತೆಯು ಆ ಯುಗದ ನಿಮ್ನ ಜಾತಿಗಳಲ್ಲಿ ಗಣನೀಯವಾಗಿ

ಕಂಡುಬರುತ್ತಲಿದ್ದ ಅಕರ್ಮಣ್ಯತೆಯ ದ್ಯೋತಕವಾಗಿವೆ. ಘೀಸೂ ಹಳ್ಳಿಯ ಚಮಗಾರನು. ಮಾಧವ ಅವನ ಮಗನು. ಮಾಧವನ ಹೆಂಡತಿ ಮನೆಯ ಎಲ್ಲ ಕೆಲಸವನ್ನು ಮಾಡಿಕೊಂಡು ಪತಿ ಮತ್ತು ಮಾವ ಇಬ್ಬರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾಳೆ. ಒಂದು ದಿನ ಅವಳು ಪ್ರಸವ ವೇದನೆಯಿಂದ ಬಳಲುತ್ತಿದ್ದಾಗ ಸೋಮಾರಿಗಳಾದ ಘೀಸೂ ಮಾಧವ ಸಮೀಪದ ಹೊಲದಿಂದ ಆಲೂಗಡ್ಡೆಗಳನ್ನು ಕಿತ್ತುತಂದು ಹುರಿದು ತಿನ್ನುವದರಲ್ಲಿರುತ್ತಾರೆ. ಇದೇ ಅವರ ನಿತ್ಯ ಕರ್ಮವಾಗಿರುತ್ತದೆ. ಮಾಧವನ ಹೆಂಡತಿ ಸಾವನ್ನಪ್ಪುತ್ತಾಳೆ. ಘೀಸೂ ತನ್ನ ಸೊಸೆಯ ಅಂತ್ಯ ಸಂಸ್ಕಾರದ ನೆವ ಮುಂದೆ ಮಾಡಿ ಜಮೀನುದಾರರಿಂದ ಎರಡು ರೂಪಾಯಿಗಳನ್ನು ಪಡೆಯುತ್ತಾನೆ. ಚಂದಾದ ರೂಪದಲ್ಲಿಯೂ ಅಲ್ಪ ಸ್ವಲ್ಪ ಹಣವನ್ನು ಸಂಗ್ರಹಿಸುತ್ತಾನೆ. ಕಫನ ತರಲು ಸಂತೆಗೆ ಹೋಗುವಾಗ ಜೀವಂತವಿರುವವರಿಗೆ ತೊಡಲು ಬಟ್ಟೆಯಿಲ್ಲದಾಗ ಮೃತದೇಹಕ್ಕೆ ಕಫನ ಕೊಂಡು ತರಬೇಕಾದ ಅವಶ್ಯಕತೆಯೇನಿದೆಯೆಂದು ಅಂದುಕೊಳ್ಳುತ್ತ ಮದ್ಯದಂಗಡಿಯನ್ನು ಸೇರುತ್ತಾರೆ. ಹೊಟ್ಟೆ ತುಂಬ ತಿನ್ನುತ್ತಾರೆ. ಕುಡಿಯುತ್ತಾರೆ. ನಿಶೆಯಲ್ಲಿದ್ದ ಅವರು ಮನೆಯಲ್ಲಿ ಬಿದ್ದುಕೊಂಡಿದ್ದ ಮೃತದೇಹದ ಅರಿವು ಇರದಷ್ಟು ಪ್ರಜ್ಞಾಹೀನ ಸ್ಥಿತಿಯಲ್ಲಿರುತ್ತಾರೆ. ಹೀಗೆ ಪ್ರೇಮಚಂದರು ಮಾನವನ ಬಾಳಿನಲ್ಲಿ ಕರ್ಮ ಹಾಗೂ ಸಂಘರ್ಷಕ್ಕೆ ಹೆಚ್ಚು ಬೆಲೆ ಕೊಟ್ಟಿದ್ದರು. ಪ್ರಾಣಕ್ಕಿಂತಲೂ ಆತ್ಮಗೌರವ ಶ್ರೇಷ್ಠವಾದುದೆಂದು ನಂಬಿದ್ದರು.

೬. ಸ್ತ್ರೀಯ ಬಾಳಿನ ಹೊಸ ಬೆಳಕು

ಆದಿ ಕಾಲದಿಂದಲೂ ಪುರುಷರ ಶೋಷಣೆಯ ಬಲಿಪಶುವಾಗಿ ಬದುಕಿದ ಮಹಿಳೆಯ ಜೀವನಕ್ರಮದಲ್ಲಿ ಹೊಸ ಬೆಳಕನ್ನುಂಟುಮಾಡಿ ಅದನ್ನು ಸವೀಕರಿಸಲು ಗಾಂಧೀಜಿಯವರು ಹಾಕಿ ಕೊಟ್ಟ ತತ್ವಪ್ರಣಾಳಿಕೆಯೇ ಒಂದು ತಾರಕ ಮಂತ್ರವಾಗಬಹುದೆಂಬ ಬಲವಾದ ನಂಬಿಕೆ ಪ್ರೇಮಚಂದರಿಗಿತ್ತು. ಈ ನಂಬಿಕೆ ಅವರ ಕೆಲವು ಸಣ್ಣ ಕತೆಗಳಲ್ಲಿ ಪ್ರಕಟವಾಗಿದೆ. 'ಜುಲೂಸ' ಕತೆಯಲ್ಲಿ ಬೀರಬಲ್ಲ ಸಿಂಹನ ಪತ್ನಿ ಸ್ವಾತಂತ್ರ್ಯ ಆಂದೋಲನದ ಸ್ವಯಂಸೇವಕರ ಪತ್ನಿಯರ ಸೇವೆಗಾಗಿ ಅವರ ಮನೆಗೆ ಬರುತ್ತಾಳೆ. ಸಾಮಾಜಿಕ, ರಾಜನೈತಿಕ ಮುಂತಾದ ಬೇರೆ ಬೇರೆ ಕ್ಷೇತ್ರಗಳಲ್ಲಿ ಪುರುಷರಷ್ಟೇ ಸ್ತ್ರೀಯರಿಗೂ ಸಮಾನವಾದ ಸ್ಥಾನಮಾನಗಳನ್ನು ಒದಗಿಸಿಕೊಡಬೇಕೆಂದು ಇಲ್ಲಿ ಕತೆಗಾರನು ಆಗ್ರಹ ಪಡಿಸಿದ್ದಾನೆ. 'ಜೀವನ ಕಾ ಶಾಪ' ಕತೆಯ ಮುಖ್ಯ ಪಾತ್ರ ಶಾಪುರಜಿ, 'ಡೊ ಸಖಿಯಾ'ದ ವಿನೋದ ತಮ್ಮ ತಮ್ಮ ಪತ್ನಿಯರಿಗೆ ಸ್ವತಂತ್ರವಾಗಿ ವ್ಯವಹರಿಸಲು ಅನುವು ಮಾಡಿಕೊಡುತ್ತಾರೆ. ಸಾಂಪ್ರದಾಯಿಕ ಇತಿಮಿತಿಗಳಿಗೆ ಅನುಗುಣವಾಗಿ ಭಾರತೀಯ ಮಹಿಳೆಯರಿಗೆ ಸಮಾನ ಅಧಿಕಾರ, ಅವಕಾಶಗಳು ದೊರೆತು ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವಂತಾಗಬೇಕೆಂದು ಇಲ್ಲಿ ಆಶಿಸಲಾಗಿದೆ. 'ಜುಲೂಸ'

‘ಜೇಲ’ ಕತೆಗಳಲ್ಲಿ ಮೃದುಲಾ, ಕ್ಷಮಾದೇವಿ ಎಂಬ ಸ್ತ್ರೀ ಪಾತ್ರಗಳು ‘ಸವಿನಯ ಅವಜ್ಞಾ ಆಂದೋಲನ’ದಲ್ಲಿ ಭಾಗವಹಿಸಿ ಸೆರೆಮನೆಗೆ ತೆರಳಿದ ಹೃದ್ಯವರ್ಣನೆ ಇದೆ. ‘ಶರಾಬ ಕಿ ದೂಕಾನ’ ಕತೆಯ ಶ್ರೀಮತಿ ಸಕ್ಸೇನಾ ‘ಪತ್ನೀಸೆ ಪತಿ’ ಕತೆಯ ಗೋದಾವರಿ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ ವರ್ಣನೆ ಇದೆ. ಭಾರತೀಯ ನಾರಿಯು ಯಾವದೇ ಕಾರ್ಯವನ್ನು ಮಾಡಲಿ ಭಾರತೀಯ ಸಂಸ್ಕೃತಿಯ ಕಟ್ಟಳೆಗಳನ್ನು ಮೀರಬಾರದೆಂಬುದು ಕತೆಗಾರನ ಇಚ್ಛೆಯಾಗಿತ್ತು. ‘ಪ್ರೇರಣಾ’ ಕತೆಯ ನಾಯಕನು ಒಬ್ಬ ಶಿಕ್ಷಕನಾಗಿ, ಪ್ರಾಚಾರ್ಯನಾಗಿ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಲು ಅಸಮರ್ಥನಾದಾಗ ಸತ್ತುಹೋದ ತನ್ನ ಧರ್ಮಪತ್ನಿಯ ಸದ್ಗುಣಗಳನ್ನು ನೆನೆಸಿಕೊಳ್ಳುತ್ತ ತನ್ನ ಹೆಂಡತಿಯು ಸೌಭಾಗ್ಯ ಲಕ್ಷ್ಮಿಯೆಂದೂ, ಅವಳ ಶುಭಾಕಾಂಕ್ಷೆಯಿಂದಲೇ ತನಗೆ ಸುಖ ದೊರೆಯಿತೆಂದೂ, ಅವಳ ತ್ಯಾಗ ಧೈರ್ಯ ಅವರ್ಣನೀಯವಾದವುಗಳೆಂದೂ ಹೇಳಿಕೊಳ್ಳುತ್ತಾನೆ. ಭಾರತೀಯ ಮಹಿಳೆಯು ತನ್ನ ಪತಿಯ ಸುಖ-ಸಂತೋಷಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧಳೆಂಬುದು ‘ಸೌತ’ಕತೆಯ ಗೋದಾವರಿಯ ಜೀವನದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಭಾರತೀಯ ಮಹಿಳೆಯು ಪುರುಷನ ದಾಸಿಯಲ್ಲ, ಅವನ ಸಹಚರಿ. ಅರ್ಧಾಂಗಿನಿ, ಗೆಳತಿ, ದೇವಿಯೆಂದು ಕತೆಗಾರನು ಅವಳ ಬಗ್ಗೆ ತನ್ನ ಗೌರವಾದರಗಳನ್ನು ಸೂಚಿಸಿದ್ದಾನೆ.

'ಸತಿ' ಕತೆಯ ಪತಿವ್ರತಾಶಿರೋಮಣಿ ಮುಲಿಯಾ ತನ್ನ ಪತಿಯ ಸಹಕಾರದಿಂದ ತನ್ನ ನಿರ್ಮಲವಾದ ಚಾರಿತ್ರ್ಯವನ್ನು ಕಾಪಾಡಿಕೊಳ್ಳುತ್ತಾಳೆ. 'ರಹಸ್ಯ' ಕತೆಯಲ್ಲಿ ತನ್ನ ಪತಿಯಿಂದ ಅತೃಪ್ತಳಾದ ಮಂಜುಳೆಯು ಅವನಿಂದ ದೂರವಾಗಿ ಜನಸೇವಕನಾದ ವಿಮಲನನ್ನು ಪ್ರೇಮಿಸುತ್ತಾಳೆ. ಕೊನೆಗೆ ಅಂಜುಬುರುಕನಾದ ಅವನನ್ನು ತ್ಯಜಿಸಿ ತನ್ನ ಇನ್ನೊಬ್ಬ ಆತ್ಮೀಯ ಮಿತ್ರ ಖನ್ನಾನೊಂದಿಗೆ ಪ್ರೇಮ ವ್ಯಾಪಾರದಲ್ಲಿ ತೊಡಗುತ್ತಾಳೆ. ಇಲ್ಲಿ ಅವಳ ಪಾತಿವ್ರತ್ಯ ಅವಳ ಪತಿಯಿಂದಲೇ ಕಲಂಕಿತಗೊಂಡಿತೆಂಬುದು ಗಮನಿಸಬೇಕಾದ ಸಂಗತಿ. ಮಹಿಳೆಯ ಜೀವನದಲ್ಲಿ ಸುಧಾರಣೆ ಎರಡು ಉಪಾಯಗಳಿಂದ ಸಾಧ್ಯವೆಂದಿದ್ದಾರೆ—ಒಂದನೆಯದಾಗಿ ಭಾರತೀಯ ಮಹಿಳೆಗೆ ಒಳ್ಳೆಯ ಶಿಕ್ಷಣವನ್ನು ಒದಗಿಸಿ ಕೊಡಬೇಕು. ಆದರೆ ಪಾಶ್ಚಾತ್ಯ ಸಭ್ಯತೆಯ ದೀಕ್ಷೆ ಕೊಟ್ಟು ಅವಳನ್ನು ಸ್ವೇಚ್ಛಾಚಾರಿಣಿಯನ್ನಾಗಿ ಮಾಡುವ ಶಿಕ್ಷಣವು ಒಳ್ಳೆಯದಲ್ಲವೆಂದಿದ್ದಾರೆ. ಎರಡನೆಯದಾಗಿ ಅವಳು ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ನೋಡಿಕೊಳ್ಳಬೇಕು.

(ಆ) ಪ್ರೇಮಚಂದರ ಸಣ್ಣಕತೆಗಳ ರಚನಾಕೌಶಲ

ಪ್ರೇಮಚಂದರ ಸಣ್ಣ ಕತೆಗಳ ರಚನಾಕೌಶಲ ಪರಿಪಕ್ವತೆಯ ಚರಮೋತ್ಕರ್ಷಕ್ಕೆ ಮುಟ್ಟಿದೆ. ಆದರೆ ಅದು ಕಾಲ, ಪರಿಸ್ಥಿತಿಗಳಿಗನುಸಾರವಾಗಿ ಕ್ರಮಿಕ ವಿಕಾಸ ಹೊಂದುತ್ತ ಪ್ರೌಢತ್ವವನ್ನು ಪಡೆದಿದೆ. ಅದನ್ನು ಹೆಚ್ಚು ಸ್ಪಷ್ಟ ಪಡಿಸುವ ಉದ್ದೇಶದಿಂದ ಅದರಲ್ಲಿ ಎರಡು ಭಾಗಗಳನ್ನು ಮಾಡಿ ವಿಶ್ಲೇಷಣೆ ಕೊಡಲಾಗಿದೆ.

೧. ವಿಕಾಸ ಕ್ರಮ
೨. ರಚನಾ ತತ್ವಗಳ ವಿವೇಚನೆ

೧. ವಿಕಾಸ ಕ್ರಮ : ಪ್ರೇಮಚಂದರು ಒಂದು ಕಡೆ ಸಣ್ಣ ಕತೆಯಲ್ಲಿ ಮನೋರಂಜನೆ, ಮಾನಸಿಕ ತೃಪ್ತಿಯುಂಟು. ಮಾಡುವ ವ್ಯವಸ್ಥೆ ಇರಬೇಕಾದ ಅವಶ್ಯಕತೆಯಿದೆಯೆಂದಿದ್ದಾರೆ. ಇನ್ನೊಂದೆಡೆ ಚರಿತ್ರ ನಿರ್ಮಾಣಕ್ಕೆ ವಿಶೇಷ ಮಹತ್ವ ಕೊಟ್ಟಿದ್ದಾರೆ. ಅನುಭವವೇ ಕತೆಯ ಆಧಾರ, ಘಟನೆ ಅಲ್ಲ ಎಂದು ಹೇಳಿದ್ದಾರೆ. ಇವು ಅವರ ಸಣ್ಣಕತೆಗಳ ರಚನಾವಿಧಿಗಳ ವಿಕಾಸ ಕ್ರಮದ ಮೆಟ್ಟಿಲುಗಳು. ಈ ವಿಕಾಸ ಕ್ರಮವನ್ನು ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಕ್ರಿ. ಶ. ೧೯೧೬ ರಿಂದ ೧೯೩೦ ರ

ವರೆಗಿನ ಕತೆಗಳು ಪ್ರಥಮ ವಿಕಾಸ ಕ್ರಮಕ್ಕೆ ಸೇರಿದವುಗಳು 'ಸಪ್ತ ಸರೋಜ' 'ಪ್ರೇಮ ಪಚೀಸಿ' ಪುಸ್ತಕಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಈ ಸಣ್ಣ ಕತೆಗಳಲ್ಲಿ ಕಲಾತ್ಮಕ ಪರಿಪಕ್ವತೆ ಇಲ್ಲವೆನ್ನಬಹುದು. ದೊಡ್ಡ ದೊಡ್ಡ ಕಥಾನಕಗಳಿವೆ ಘಟನೆಗಳ ಅನಾವಶ್ಯಕ ವಿಸ್ತಾರವಿದೆ. ಟಿಪ್ಪಣಿಗಳು, ಪ್ರಸ್ತಾವನೆಗಳು ಕತೆಯ ಏಕಾತ್ಮಕ ಪ್ರಭಾವದಲ್ಲಿ ಬಾಧಕಗಳಾಗಿ ಪರಿಣಮಿಸಿವೆ. ಪಾತ್ರಗಳ ಚರಿತ್ರ ಚಿತ್ರಣದಲ್ಲಿ ಆದರ್ಶಪರಾಯಣತೆಯನ್ನು ಎಳೆದು ತರಲಾಗಿದೆ. ಆದ ಕಾರಣ ಅವರ ಪ್ರಾರಂಭಿಕ ಕತೆಗಳಲ್ಲಿಯ ತಾಂತ್ರಿಕ ಪ್ರಜ್ಞೆ ಉಚ್ಚಮಟ್ಟದ್ದಲ್ಲ. 'ಸೌತ' 'ಪಂಚ ಪರಮೇಶ್ವರ' 'ನಮಕ ಕಾ ದರೋಗಾ' ಮುಂತಾದ ಕತೆಗಳು ಈ ಶ್ರೇಣಿಯಲ್ಲಿ ಬರುತ್ತವೆ. ಆದರೆ ಪ್ರಾರಂಭಿಕ ಕತೆಗಳಲ್ಲಿ ದೋಷಗಳಾಗುವದು ಸಹಜ.

ಕ್ರಿ.ಶ. ೧೯೩೦ ರಿಂದ ೧೯೩೪ ರ ವರೆಗಿನ ಸಣ್ಣ ಕತೆಗಳು ದ್ವಿತೀಯ ವಿಕಾಸ ಕ್ರಮದಲ್ಲಿ ಬರುತ್ತವೆ. ಭಾವಪಕ್ಷ, ಕಲಾ ಪಕ್ಷಗಳ ದೃಷ್ಟಿಯಿಂದ ಇವುಗಳಲ್ಲಿ ಪ್ರಗತಿ ಕಂಡುಬಂದಿದೆ. 'ವಜ್ರಪಾತ' 'ಶತರಂಜ ಕೆ ಖಿಲಾಡಿ' 'ಮುಕ್ತಿ ಕಾ ಮಾರ್ಗ' ದಂತಹ ಕತೆಗಳ ಕಥಾವಸ್ತುಗಳು ಸುಸಂಬದ್ಧವಾಗಿವೆ. ಅವುಗಳಲ್ಲಿ ಅನಾವಶ್ಯಕ ವಿಸ್ತಾರವಿಲ್ಲ. ಆದರ್ಶವನ್ನು ಒತ್ತಾಯದಿಂದ ತುಂಬಲಾಗಿಲ್ಲ. ಆದರೆ ಆದರ್ಶವನ್ನು ಯಥಾರ್ಥದ, ಮೂಲಕ ಪ್ರಸ್ತುತ ಪಡಿಸಲಾಗಿದೆ. 'ಶಾಂತಿ', 'ಮಮತಾ' 'ಮುಕ್ತಿ ಕಾ ಮಾರ್ಗ' ಹೆಚ್ಚು ಕಲಾಪೂರ್ಣವಾಗಿವೆ.

ಕ್ರಿ.ಶ. ೧೯೩೦ ರಿಂದ ೧೯೩೬ ರ ವರೆಗಿನ ಅವಧಿಯು ತೃತೀಯ ವಿಕಾಸ ಕ್ರಮದಲ್ಲಿ 'ಪೂಸ ಕೀ ರಾತ' 'ಕಫನ' 'ನಶಾ' 'ಮಿಸ್ ಪದ್ಮಾ' ದಂತಹ ಮನೋವಿಶ್ಲೇಷಣಾತ್ಮಕ ಸಣ್ಣ ಕತೆಗಳು ಬರುತ್ತವೆ. ಇದು ಪ್ರೇಮಚಂದರ ಸಣ್ಣ ಕತೆಗಳ ರಚನಾ ಕೌಶಲದ ಉತ್ಕರ್ಷ ಕಾಲ. ಈ ಸಣ್ಣ ಕತೆಗಳು ಜೀವಂತ ವ್ಯಕ್ತಿಗಳ ಕೆಲವು ಸತ್ಯ ಸಂಗತಿಗಳು. ಆಧುನಿಕ ಸಣ್ಣ ಕತೆಗಳ ಕಲಾತ್ಮಕ ಪ್ರೌಢಿಮೆಯು ಇವುಗಳಲ್ಲಿ ವಿದ್ಯಮಾನಗೊಂಡಿವೆ. ಇಲ್ಲಿ ಆದರ್ಶಕ್ಕೆ ಸ್ಥಾನವಿಲ್ಲ. ಆದ್ದರಿಂದ ನೀತಿಬೋಧಕ ಸಣ್ಣ ಕತೆಗಳಲ್ಲಿ ಇರುವಂತಹ ಏಕರಸತ್ವ ಇವುಗಳಲ್ಲಿಲ್ಲ. ಇಲ್ಲಿ ಪ್ರೇಮಚಂದರು ಎಷ್ಟು ಜಾಗರೂಕರಾಗಿದ್ದಾರೆಂದರೆ ಮುಖ್ಯ ಸಂಕೇತಾರ್ಥವನ್ನು ಸೂಕ್ಷ್ಮ ಅಭಿವ್ಯಕ್ತಿಯ ಮೂಲಕವೇ ಪ್ರಕಟಪಡಿಸಿದ್ದಾರೆ. ಅಭಿವ್ಯಕ್ತಿಯ ಈ ಸಂಯಮ ಅಂದಿನಿಂದ ಇಂದಿನವರೆಗೆ ಯಾವ ಇನ್ನೊಬ್ಬ ಹಿಂದಿಯ ಸಣ್ಣ ಕತೆಗಾರನಲ್ಲಿಯೇ ಆಗಲಿ ದೊರೆಯಲಾರದೆಂಬುದು ನಿಸ್ಸಂಶಯ.

ಪ್ರೇಮಚಂದರು ಹಿಂದಿಯಲ್ಲಿ ಸುಮಾರು ಐದು ನೂರರಷ್ಟು ಸಣ್ಣ ಕತೆಗಳನ್ನು ಬರೆದಿದ್ದಾರೆ. ಅವೆಲ್ಲವೂ ೨೯-೩೦ ಪುಸ್ತಕಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. 'ರಾನಿ ಸಾರಂಧಾ' ಮಂದಿರ ಮಸ್ಜಿದ್' 'ಪಂಚ ಪರಮೇಶ್ವರ' 'ಬಡೆ ಘರ ಕಿ ಬೇಟಿ' 'ಕಾಮನಾತರು' 'ದುರ್ಗಾ ಕಾ ಮಂದಿರ' 'ಆತ್ಮಾರಾಮ' 'ಬೂಢಿ ಕಾಕಿ' 'ಶತರಂಜ ಕೆ ಖಿಲಾಡಿ' 'ಜೂಲೂಸ' 'ಮಹಾತೀರ್ಥ' 'ಕಫನ' ಮುಂತಾದವು ಪ್ರೇಮಚಂದರ ಶ್ರೇಷ್ಠ ಸಣ್ಣ ಕತೆಗಳೆಂದು ಪರಿಗಣಿಸಲ್ಪಟ್ಟಿವೆ. ಅವರ ಸಣ್ಣ ಕತೆಗಳು ಗುಜರಾತಿ, ಬಂಗಾಲಿ, ಮರಾಠಿ, ಕನ್ನಡ,

ತಮಿಳು, ಮಲಯಾಳಿ ಮುಂತಾದ ಭಾರತೀಯ ಭಾಷೆಗಳಲ್ಲಿಯೂ ಚೀನಿ, ಜಪಾನಿ, ಡಚ್ಚ, ಜರ್ಮನ್, ಇಂಗ್ಲಿಷ, ರಶಿಯನ್ ಮುಂತಾದ ವಿದೇಶೀ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟಿವೆ. ರಶಿಯಾ ದೇಶದಲ್ಲಿ ಅವರ ಪುಸ್ತಕಗಳನ್ನು ಪಠ್ಯಪುಸ್ತಕಗಳ ರೂಪದಲ್ಲಿ ಆಯ್ದುಕೊಳ್ಳಲಾಗಿದೆ. ಸಂತ ತುಳಸೀದಾಸರ ನಂತರ ಅತ್ಯಂತ ಜನಪ್ರಿಯ ಹಿಂದೀ ಲೇಖಕರಲ್ಲಿ ಪ್ರೇಮಚಂದರ ಹೆಸರು ಮೊದಲು ಬರುತ್ತದೆ.

೨. ರಚನಾ ತತ್ವಗಳ ವಿವೇಚನೆ:

ಕಥನ ಕಲೆಯ ಆಧಾರಸ್ತಂಭಗಳಂತಿರುವ ಶಿರೋನಾಮ, ಕಥಾವಸ್ತು, ಪಾತ್ರರಚನೆ, ಸಂವಾದಯೋಜನೆ, ಭಾಷೆ, ಶೈಲಿ, ವಾತಾವರಣ, ಉದ್ದೇಶ – ಸಣ್ಣಕತೆಯ ಈ ರಚನಾ ತತ್ವಗಳು ಅವರ ಸಣ್ಣಕತೆಗಳಲ್ಲಿ ಎಳೆ ಎಳೆಯಾಗಿ ಹೆಣೆಯಲ್ಪಟ್ಟಿವೆ.

ಶಿರೋನಾಮಕ್ಕೆ ಸಂಬಂಧಿಸಿದ ವಿಷಯದ ಸ್ಪಷ್ಟತೆ, ಆಕರ್ಷಣೆ, ಅರ್ಥಪೂರ್ಣತೆ, ನವ್ಯತೆ ಮುಂತಾದ ಲಕ್ಷಣಗಳು ಅವರ 'ಪೂಸ ಕಿ ರಾತ' 'ಶಾಂತಿ' 'ಬಡೇ ಘರಕಿ ಬೇಟಿ' 'ಗೃಹದಾಹ' ಮುಂತಾದ ಕತೆಗಳಲ್ಲಿ ಕಾಣ ಸಿಗುತ್ತವೆ. ಕೆಲವು ಸಣ್ಣಕತೆಗಳ ಶಿರೋನಾಮಗಳ ಉಚ್ಚಾರ ಮಾತ್ರದಿಂದ ಸಮಗ್ರ ಕತೆಯ ಚಿತ್ರ ಕಣ್ಣೆದುರು ಕಟ್ಟಿದಂತಾಗುತ್ತದೆ. 'ಬ್ಯಾಂಕ ಕಾ ದಿವಾಲಾ' ಇಂತಹ ಒಂದು ಉತ್ತಮ ಉದಾ

ಹರಣೆ. 'ಸಿರ್ಫ ಏಕ ಆವಾಜ', 'ಮುಬಾರಕ ಬೀಮಾರಿ' ಮುಂತಾದ ಕತೆಗಳ ಶಿರೋನಾಮೆಗಳು ನವ್ಯತೆಯನ್ನು ಪ್ರದರ್ಶಿಸುತ್ತವೆ.

ಒಂದು ಶಬ್ದದಿಂದ ಹಿಡಿದು ಎಂಟು ಶಬ್ದಗಳ ವರೆಗಿನ ಶಿರೋನಾಮೆಗಳೂ ಇವೆ. 'ಮಾ' 'ಕೋಈ ದುಃಖ ನ ಹೊ ತೊ ಬಕರಿ ಖರೀದ ಲೋ' ಅವರು ತಮ್ಮ ಸಣ್ಣ ಕತೆಗಳಿಗೆ ಸ್ಥಾನ ಮತ್ತು ಘಟನಾವ್ಯಾಪಾರ ಸೂಚಕ, ಕೌತೂಹಲ ಜನಕ, ವ್ಯಂಗ್ಯಪೂರ್ಣ, ಹಾಸ್ಯ ಮೂಲಕ, ಮನೋವೃತ್ತಿ ಗಳಿಂದ ನಿರ್ಮಿತವಾದ ಶಿರೋನಾಮೆಗಳನ್ನು ಕೊಟ್ಟಿದ್ದಾರೆ. ಸಣ್ಣ ಕತೆಗಳಿಗೆ ಶಿರೋನಾಮ ಕೊಡುವಾಗ ಪ್ರೇಮಚಂದರು ಶಬ್ದಗಳ ಮೋಹಜಾಲಕ್ಕೆ ಸಿಲುಕಿ ಎಲ್ಲಿಯೂ ಅದರ ಔಚಿತ್ಯದ ಕೊಲೆಗೆಲಸಕ್ಕೆ ಕೈ ಹಾಕಿಲ್ಲ. ಏಕೆಂಬರೆ ಪ್ರತಿಯೊಂದು ಶಿರೋನಾಮದ ಹಿಂದೆ ಆದರದೇ ಆದ ಒಂದು ಅರ್ಥಸಮು ದಾಯವಿರುತ್ತದೆ. ಅವರು ಸ್ಪಷ್ಟವಾದ ಅರ್ಥ ಕೊಡುವ, ನೇರವಾದ ಶಿರೋನಾಮೆಗಳನ್ನೇ ಕೊಟ್ಟಿದ್ದಾರೆ. 'ಅನಾಥ ಲಡಕಿ' 'ಅಮಾವಾಸ್ಯಾ ಕಿ ರಾತ್ರಿ'ಯಂತಹ ಅನೇಕ ಕತೆಗಳನ್ನು ಉದಾಹರಿಸಬಹುದು. ಒಂದು ರೀತಿಯಲ್ಲಿ ಕತೆಗೆ ಅನ್ವಯಿಸು ವಂತಿದ್ದರೂ ಕತೆಯ ಸೂಚನೆಯನ್ನು ಕೊಡದ ಸಂದಿಗ್ಧ ಶಿರೋನಾಮೆಗಳೇ ಕತೆಗಳಿಗೆ ಯೋಗ್ಯ. 'ಖೂನ ಸಫೇದ' ಇಂತಹ ಶಿರೋನಾಮವು.

ಕಥಾವಸ್ತುವಿಗಾಗಿ ಗ್ರಾಮೀಣ, ನಾಗರಿಕ, ಸಾಮಾ ಜಿಕ, ಧಾರ್ಮಿಕ, ಐತಿಹಾಸಿಕ ರಾಜನೀತಿಕ ವಿಷಯಗಳನ್ನು

ಮತ್ತು ವ್ಯಕ್ತಿ, ಪರಿವಾರ, ಸಮಾಜ, ರಾಷ್ಟ್ರದ ಸಮಸ್ಯೆಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಸಂಕ್ಷಿಪ್ತತೆ, ರೋಚಕತೆ, ಮೌಲಿಕತೆ, ಆದರ್ಶಮಯತೆ, ಯಥಾರ್ಥತೆ, ಧಾರಾವಾಹಿಕತೆ, ರಾಗಾತ್ಮಕತೆ, ಮನೋವೈಜ್ಞಾನಿಕತೆ, ಸಾಮಯಿಕತೆ, ಕ್ಷೇತ್ರೀಯ ಸಾಮಂಜಸ್ಯ, ವಿಶ್ವಸನೀಯತೆ, ಕುತೂಹಲವರ್ಧನೆ, ಪ್ರಭಾವೋತ್ಪಾದಕತೆ, ತಾಂತ್ರಿಕ ಹೊಸತನ ಮುಂತಾದ ಸಣ್ಣಕತೆಗಳ ಕಥಾವಸ್ತುವಿನ ವೈಶಿಷ್ಟ್ಯಗಳು ಇವರ ಕತೆಗಳಲ್ಲಿ ಕಾಣಸಿಗುತ್ತವೆ.

ಸೀಮಿತವಾದ ಪರಿವೇಶದಿಂದಾಗಿ ಕಥಾವಸ್ತುವಿನಲ್ಲಿ ಹೆಚ್ಚು ಘಟನೆಗಳನ್ನು ತೆಗೆದುಕೊಳ್ಳದೇ ಕಡಿಮೆ ಘಟನೆಗಳನ್ನು ಆಯ್ದುಕೊಂಡು ಸಣ್ಣಕತೆಗಳನ್ನು ರಚಿಸಲಾಗಿದೆ. ಈ ಸಣ್ಣಕತೆಗಳು ಚಿಕ್ಕವೂ, ಅಲ್ಪಾವಧಿಯಲ್ಲಿ ಮುಗಿಯುವಂತಹವೂ ಆಗಿವೆ. 'ಅನುಭವ' 'ನಶಾ' 'ಠಾಕುರ ಕಾ ಕುವಾ' ಮುಂತಾದ ಕತೆಗಳನ್ನು ಹೆಸರಿಸಬಹುದು. 'ಅನುಭವ' ಕತೆಯಲ್ಲಿ ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸುವ ಸ್ವಯಂಸೇವಕರಿಗೆ ತಂಪಾದ ಪೇಯ ಕೊಟ್ಟ ಒಬ್ಬ ಯುವಕನನ್ನು ಬ್ರಿಟಿಶ ಸರಕಾರದವರು ಬಂಧಿಸುತ್ತಾರೆ. ಯುವಕನ ಪ್ರಿಯತಮೆಯು ಬ್ರಿಟಿಶ ಆಳರಸರ ಈ ಕೃತಿಯು ಆಕ್ಷೇಪಾರ್ಹವಾದುದೆಂದು ಹೇಳಿ ಪ್ರತಿಭಟಿಸುತ್ತಾಳೆ. ಇದು ಈ ಕತೆಯ ಸಂಕ್ಷಿಪ್ತ ಕಥಾವಸ್ತು. 'ನಶಾ' ಕತೆಯಲ್ಲಿ ವರ್ಣಿಸಲ್ಪಟ್ಟಿರುವ ಬ್ರಿಟಿಶರ ಆರಸೊತ್ತಿಗೆಯ ಕಾಲದಲ್ಲಿಯಲ್ಲಿ ಗ್ರಾಮೀಣ ಜಮೀನುದಾರರ, ಬೇಸಾಯಗಾರರ ಮತ್ತು ಶ್ರೀ ಸಾಮಾನ್ಯನ ಜೀವನ ಚಿತ್ರಣವೇ ಕತೆಯ ಕಥಾ

ವಸ್ತುವಿನ ಪೃಷ್ಠಭೂಮಿಯು. ಅವರ ಪ್ರಾರಂಭಿಕ ಮತ್ತು ವಿಕಾಸಕಾಲೀನ ಸಣ್ಣ ಕತೆಗಳಲ್ಲಿ ಘಟನಾಕ್ರಮ ಮತ್ತು ಸಂಯೋಗವಿಲ್ಲದ ಕಥಾವಸ್ತುವಿನ ಸೃಷ್ಟಿಯು ಕಲ್ಪನೆಯಲ್ಲಿಯೂ ಸಹ ಅಸಾಧ್ಯವೆನಿಸಿತ್ತು ಏಕೆಂದರೆ ಘಟನಾಕ್ರಮ, ಸಂಯೋಗದ ಆವಿರ್ಭಾವ ಕಥಾವಸ್ತುವಿನ ಅತಿ ಮುಖ್ಯ ಅಂಗಗಳು. ಸುಸ್ಪಷ್ಟ, ಇತಿವೃತ್ತಾತ್ಮಕ ಮತ್ತು ಸರ್ವಸಾಧಾರಣವಾದ ಘಟನೆಯ ಆಯ್ಕೆಯು ಪ್ರೇಮಚಂದರ ಕಥನ ತಂತ್ರದ ಮುಖ್ಯ ಪ್ರವೃತ್ತಿಗಳಲ್ಲೊಂದು. ಆದ ಕಾರಣ ಅವರ ಸಣ್ಣ ಕತೆಗಳಲ್ಲಿ ಇತಿವೃತ್ತಾತ್ಮಕ ಕಥಾವಸ್ತುಗಳೇ ಹೆಚ್ಚು. ಘಟನಾ ಪ್ರಧಾನ ಸಣ್ಣ ಕತೆಗಳಲ್ಲಿ ಕಥಾವಸ್ತುವಿಗೆ ಪ್ರಾಮುಖ್ಯವಿದೆ. ಈ ಕಥಾವಸ್ತುವು ಗಂಭೀರ ಹಾಗೂ ವೈವಿಧ್ಯಪೂರ್ಣವಾಗಿದೆ. ಏಕಮುಖತೆ, ಒಂದೇ ಪ್ರಧಾನ ರಸ ಅದರ ಮುಖ್ಯ ಗುಣಗಳಾಗಿವೆ. ಅವರ ಬಹಳಷ್ಟು ಸಣ್ಣ ಕತೆಗಳಲ್ಲಿ ಪಾತ್ರಗಳ ಹೆಸರುಗಳು ಕಾಲ್ಪನಿಕವಾಗಿದ್ದರೂ ಅವುಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವಿಷಯಗಳು ಮಾನವನ ನಿತ್ಯ ವ್ಯವಹಾರಗಳಲ್ಲಿ ಕಾಣಸಿಗುವಂತಹವುಗಳು. 'ಅಲಗ್ಯೋಝಾ' 'ಬೇಟೋವಾಲಿ ವಿಧವಾ' 'ಘರ ಜಮಾಯಿ, ಯಂತಹ ಕತೆಗಳ ಪನ್ನಾ, ರಗ್ಘೂ, ಕೇದಾರ, ಅಯೋಧ್ಯಾನಾಥ, ಫೂಲವತಿ, ಹರಿಧನ, ಗುಮಾನಿ ಮುಂತಾದ ಪಾತ್ರಗಳು ಕಾಲ್ಪನಿಕವಾದವುಗಳಾದರೂ ಈ ಕತೆಗಳ ಕಥಾವಸ್ತುವಿಗಾಗಿ ಆಯ್ದುಕೊಂಡ ಅವಿಭಕ್ತ ಕುಟುಂಬ ಪದ್ಧತಿಯಿಂದಾಗುವ ಲಾಭಗಳು, ವಿಧವೆಯ ಜೀವನದ ಕರಾಳತೆ, ಮಾವನ ಮನೆಯಲ್ಲಿರುವ ಅಳಿಯನ ಫಜೀತಿ ಮುಂತಾದ ವಿಷಯಗಳು

ವರ್ತಮಾನ ಜೀವನ–ವ್ಯವಹಾರಗಳಲ್ಲಿ ಕಂಡುಬರುವ ವಾಸ್ತವಿಕ ಸಂಗತಿಗಳೆನ್ನಿಸದಿರಲಾರವು. ಜೀವನದ ಮುಖ್ಯ ಉದ್ದೇಶವಿನಿರಬೇಕೆಂಬುದನ್ನು ಪ್ರೇಮಚಂದರು ತಮ್ಮ ಸಣ್ಣ ಕತೆಗಳಲ್ಲಿ ಸ್ವೀಕಾರಾರ್ಹವಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ಇದರಿಂದಾಗಿ ಓದುಗರಲ್ಲಿ ಕುತೂಹಲ ವರ್ಧನೆಯಾಗುತ್ತದೆ. ಹೀಗೆ ಪ್ರೇಮಚಂದರು ಜೀವನವನ್ನು ತಾವು ನೋಡಿದ ರೀತಿಯಲ್ಲಿ. ತಾವು ಪಡೆದ ಸಂಸ್ಕಾರ ಮತ್ತು ತಮ್ಮ ಮೇಲಿನ ವರ್ಗ ಪ್ರಭಾವ ಇವುಗಳ ಹಿನ್ನೆಲೆಯಲ್ಲಿ ಕಥಾವಸ್ತುವನ್ನು ಆಯ್ದುಕೊಂಡಿದ್ದಾರೆ.

ಕತೆಗಾರನ ಅನುಭವಗಳು, ಬೇರೆ ಬೇರೆ ಮಾನವೀಯ ಮನೋಭಾವಗಳು, ಮಾನಸಿಕ ಅನ್ನಿಸಿಕೆಗಳು, ಮಾನವೀಯ ಅಂತರ್ವೃತ್ತಿಗಳು, ವಿವಿಧ ಸಮಸ್ಯೆಗಳು, ಪ್ರೇಮಭಾವನೆ ಮುಂತಾದವು ಅವರ ಸಣ್ಣ ಕತೆಗಳ ಕಥಾವಸ್ತುವಿನಲ್ಲಿ ಎದ್ದು ಕಾಣುವ ಮುಖ್ಯ ಅಂಶಗಳು. ಕಥಾವಸ್ತುಗಳು ಚಿಕ್ಕ ಗಾತ್ರದವಾಗಿವೆಯಾದರೂ ಪಾತ್ರಗಳ ಮನೋವೈಜ್ಞಾನಿಕ ವಿಶ್ಲೇಷಣೆಯನ್ನು ಕೊಡುವ ಕಥಾವಸ್ತುಗಳು ಮಾತ್ರ ಸುದೀರ್ಘವಾಗಿವೆ. ಕೆಲವು ಕಥಾವಸ್ತುಗಳಲ್ಲಿ ನಾಟ್ಯಮಯತೆ ಗೋಚರಿಸುತ್ತದೆ.

ಆರಂಭ, ವಿಕಾಸ, ಚರಮಸ್ಥಿತಿ, ಮುಕ್ತಾಯ, ಕಥಾವಸ್ತುವಿನ ಈ ನಾಲ್ಕು ಭಾಗಗಳನ್ನು ಸುಸ್ಪಷ್ಟವಾಗಿಯೂ, ಸುಸಂಬದ್ಧವಾಗಿಯೂ ಸಂಗ್ರಥನ ಮಾಡಿದ್ದಾರೆ. ‘ಪೂಸ ಕೀ

ರಾತ' ಕತೆಯಲ್ಲಿ 'ಹಲ್ಕೂ' ಮತ್ತು 'ಮುನ್ನಿ' ಎಂಬ ಪಾತ್ರಗಳ ಸಂಭಾಷಣೆಯೊಂದಿಗೆ ಕಥಾವಸ್ತು ಆರಂಭವಾಗುತ್ತದೆ. ಕಂಬಳಿಯ ಅಭಾವದ ಚರ್ಚೆಯೇ ಈ ಕತೆಯ ಆರಂಭವು. ಹಲ್ಕೂ ರಾತ್ರಿ ಹೊಲಕ್ಕೆ ಹೋಗುವದು, ಜಬರಾ ಎಂಬ ನಾಯಿಯೊಂದಿಗೆ ವಿನೋದ ಮಾಡುವದು, ಶೀತದಿಂದಾಗಿ ನಡುಗುವದು, ಎಲೆಗಳನ್ನು ಹೊತ್ತಿಸುವದು, ಜಬರಾ ಬೊಗಳುವದು, ಆಕಳು ಮುಖದ ಒಂದು ವನ್ಯ ಪಶುವು ಹೊಲಗಳನ್ನು ಮೇಯುವದು, ಹಲ್ಕೂ ಕೂಗುವದು, ಅವನು ಕೆಲವು ಸಲ ಆಲಸಿಯಾಗುವದು. ಮತ್ತೆ ಸಾಹಸಿಯಾಗಿ ಮೇಲೇಳುವದು ಇದು ವಿಕಾಸದ ಸ್ಥಿತಿಯು. ಜಬರಾ ಮತ್ತಷ್ಟು ಗಂಟಲು ಹರಿಯುವಂತೆ ಬೊಗಳುವದು, ಆಕಳು ಮುಖದ ವನ್ಯಪಶುವು ಹೊಲಹೊಕ್ಕು ಹಾಳು ಮಾಡುವದು, ಹಲ್ಕೂ ಅಕರ್ಮಣ್ಯತೆಯ ಬಂಧನದಲ್ಲಿ ಸಿಕ್ಕು ಸೋಮಾರಿಯಾಗುವದು. ಅದು ಚರಮ ಸ್ಥಿತಿಯು. ಹಲ್ಕೂನ ಹೊಲವನ್ನು ಆ ವನ್ಯಪಶುಗಳು ಪೂರ್ಣವಾಗಿ ನಾಶಮಾಡುವದು, ಅವನು ನಿಶ್ಚಿಂತನಾಗಿ ಮಲಗಿಕೊಂಡಿರುವದು, ಮುಂಜಾನೆ ಎದ್ದಾಗ ಉಲ್ಲಾಸದಿಂದಿರುವದು, "ರಾತ್ರಿಯ ಶೀತಹವೆಯಲ್ಲಿ ಇಲ್ಲಿ ಮಲಗಲಾಗುವದಿಲ್ಲ" ಎಂದುಕೊಳ್ಳುವದು– ಇಲ್ಲಿಗೆ ಕತೆಯು ಮುಕ್ತಾಯಗೊಳ್ಳುತ್ತದೆ. ಸಣ್ಣಕತೆಯ ಕಥಾವಸ್ತುವಿನ ವಿಕಾಸದ ದೃಷ್ಟಿಯಿಂದ ಅವರ ಮಧ್ಯಭಾಗಕ್ಕೆ ವಿಶೇಷ ಮಹತ್ವವಿದೆ. ಮಧ್ಯಭಾಗವು ಮೂಲ ಕಥಾಸೂತ್ರದ ಪ್ರಸಾರ ಕಾರ್ಯದಲ್ಲಿ ನೆರವಾಗಬೇಕು. ಈ ದೃಷ್ಟಿಯಿಂದ ಪ್ರೇಮಚಂದರ 'ಸ್ವರ್ಗ ಕಿ ದೇವಿ' ಉತ್ತಮ

ಕತೆಯಾಗಿದೆ.

ಪಾತ್ರ ರಚನೆಯು ಪ್ರೇಮಚಂದರ ದೃಷ್ಟಿಯಲ್ಲಿ ಸಣ್ಣ ಕತೆಯ ಅತಿಮುಖ್ಯ ತತ್ವಗಳಲ್ಲೊಂದು. ಅವರ ಸಣ್ಣ ಕತೆಗಳಲ್ಲಿ ಪಾತ್ರಗಳ ಚರಿತ್ರಚಿತ್ರಣಕ್ಕೆ ಪ್ರಾಧಾನ್ಯವಿದೆ. ಈ ದಿಶೆಯಲ್ಲಿ ಅವರ ಸಾಧನೆ ದೊಡ್ಡದು. 'ಮಾ' 'ಸುಭಾಗಿ' 'ಧಿಕ್ಕಾರ' ಮುಂತಾದವು ಚರಿತ್ರಪ್ರಧಾನ ಸಣ್ಣಕತೆಗಳು. ಇವುಗಳಲ್ಲಿ ಬರುವ ಘಟನೆ, ಸಂವಾದ, ವಾತಾವರಣ, ಪಾತ್ರಗಳ ಮಾನಸಿಕ ಸ್ಥಿತಿಯ ಸೂಕ್ಷ್ಮ ವಿಶ್ಲೇಷಣೆ ಮಾಡುವಲ್ಲಿ ಅವುಗಳ ಚಾರಿತ್ರಿಕ ವೈಶಿಷ್ಟ್ಯಗಳನ್ನು ಪ್ರಕಟಪಡಿಸುವಲ್ಲಿ ಸಹಾಯಕವಾಗಿವೆ. ಇಂತಹ ಚರಿತ್ರ ಚಿತ್ರಣ ಓದುಗರನ್ನು ಹೆಚ್ಚಾಗಿ ಆಕರ್ಷಿಸುತ್ತದೆ. ಚರಿತ್ರ ಪ್ರಧಾನ ಸಣ್ಣಕತೆಗಳಲ್ಲಿ ಚರಿತ್ರ ನಿರೂಪಣೆಗೆ ಪ್ರಾಮುಖ್ಯತೆ ದೊರೆತಿದೆ. ಘಟನೆಯ ಸಂಯೋಜನೆಗೆ ಗೌಣ ಸ್ಥಾನವಿದೆ. 'ಶಾಂತಿ' 'ಘರ ಜಮಾಯಿ' 'ಕಾಯರ' ಇಂತಹ ಉದಾಹರಣೆಗಳು. 'ನಶಾ' 'ಅನುಭವ'ದಂತಹ ಕತೆಗಳಲ್ಲಿ ಕತೆಗಾರನೇ ಮುಖ್ಯ ಪಾತ್ರದ ಸ್ಥಾನದಲ್ಲಿದ್ದುಕೊಂಡು ವ್ಯವಹರಿಸುತ್ತಾನೆ.

ಇಂತಹ ಕತೆಗಳಲ್ಲಿ ಮುಖ್ಯ ಪಾತ್ರ, ಸಹಾಯಕ ಪಾತ್ರವೆಂದು ಎರಡು ಬಗೆಯ ಪಾತ್ರಗಳಿವೆ. ಸಹಾಯಕ ಪಾತ್ರಗಳು ಮುಖ್ಯ ಪಾತ್ರಗಳ ಚಾರಿತ್ರ್ಯಕ್ಕೆ ಪೂರಕಗಳಾಗಿವೆ. ಕತೆಯ ಮೂಲೋದ್ದೇಶದ ಅಭಿವ್ಯಕ್ತಿಯು ಮುಖ್ಯ ಪಾತ್ರವನ್ನೇ ಅವಲಂಬಿಸಿರುತ್ತದೆ. 'ಬಡೆ ಘರ ಕಿ ಬೇಟಿ' ಕತೆಯಲ್ಲಿ

ಆನಂದಿ ಮುಖ್ಯ ಪಾತ್ರ. ಇತರ ಶ್ರೀಕಂಠಸಿಂಹ, ಲಾಲ ಬಿಹಾರಿ ಸಹಾಯಕ ಪಾತ್ರಗಳು. ಅವರ ಸಣ್ಣ ಕತೆಗಳಲ್ಲಿ ಆದರ್ಶವಾದಿ, ಯಥಾರ್ಥವಾದಿ, ವ್ಯಕ್ತಿವಾದಿ, ಮನೋ ವೈಜ್ಞಾನಿಕ, ಪ್ರತೀಕಾತ್ಮಕ, ಐತಿಹಾಸಿಕ ಮುಂತಾದ ನಾನಾ ಬಗೆಯ ಪಾತ್ರಗಳು ಯಶಸ್ವಿಯಾಗಿ ಚಿತ್ರಿಸಲ್ಪಟ್ಟಿವೆ. 'ಮಂತ್ರ'ದ ಭಗತ, 'ಕಫನ'ದ ಘೀಸೂ, 'ಸವಾ ಸೇರಗೇಹೂ' ದಲ್ಲಿ ಶಂಕರ, 'ರಾನಿಸಾರಂಧ್ರಾ'ದಲ್ಲಿ ಸಾರಂಧ್ರಾ ಮುಂತಾ ದವು ಇಂತಹ ಪಾತ್ರಗಳು. ಪಾತ್ರಗಳ ಚರಿತ್ರ ಚಿತ್ರಣದಲ್ಲಿ ಅಡಕವಾಗಿರುವ ಕಥಾತ್ಮಕ ಅನುಕೂಲತೆ, ವ್ಯವಹಾರಿಕ ಬುದ್ಧಿಮತ್ತೆ, ಚಾರಿತ್ರಿಕ ಸಜೀವತೆ, ಭಾವಾತ್ಮಕ ಸಹೃದಯತೆ, ರಚನಾತ್ಮಕ ಮೌಲಿಕತೆ, ಅಂತರ್ದ್ವಂದ್ವ, ಬೌದ್ಧಿಕತೆ, ಕಲಾ ಪೂರ್ಣತೆ ಮುಂತಾದ ಗುಣವಿಶೇಷಗಳು ಪ್ರೇಮಚಂದರಿಗೆ ಈ ಕಾರ್ಯದಲ್ಲಿ ತುಂಬ ಯಶಸ್ಸನ್ನು ತಂದುಕೊಟ್ಟಿವೆ.

ಸಂವೇದನಾತ್ಮಕವಾಗಿ ನಿಮ್ನ-ಮಧ್ಯಮವರ್ಗದ ಪಾತ್ರ ಗಳನ್ನು ಬಹಳ ಕರುಣೆಯಿಂದ ಕಂಡಿದ್ದಾರೆ. ಓದುಗನಿಗೆ ತನ್ನ ಹಾಗು ಪಾತ್ರಗಳ ಮಧ್ಯದಲ್ಲಿ ಅಭಿನ್ನತೆಯ ಅನುಭವ ಉಂಟಾ ಗುತ್ತದೆ. ಓದುಗನು ಆ ಪಾತ್ರವೇ ತಾನೆಂದು ತಿಳಿಯುವಷ್ಟರ ಮಟ್ಟಿಗೆ ಪಾತ್ರಗಳು ಸಜೀವ, ಆಕರ್ಷಕವಾಗಿವೆ. ಅವುಗಳ ಚರಿತ್ರ ಚಿತ್ರಣವು ಸಹಜ, ಸುಂದರವಾಗಿವೆ. ಈ ಪಾತ್ರ ಗಳಿಗೆ ಅವುಗಳದೇ ಆದ ವ್ಯಕ್ತಿತ್ವ ಇದೆ. ಮಹತ್ವದ ಮಾತೆಂ ದರೆ ಎಂಥ ಕಠಿಣ ಪರಿಸ್ಥಿತಿಯಲ್ಲಿಯೇ ಆಗಲಿ ಈ ಪಾತ್ರಗಳ ವ್ಯಕ್ತಿತ್ವ ಸುಸ್ಪಷ್ಟವಾಗಿದೆ. ಅವು ಪರಿಸ್ಥಿತಿಯನ್ನು ಜಟಿಲ

ಗೋಳಿಸುವಂತಹ ತೊಡಕುಗಳಲ್ಲಿ ತಮ್ಮನ್ನು ಸಿಕ್ಕಿಸಿಕೊಳ್ಳುವದಿಲ್ಲ. ಅನಿರೀಕ್ಷಿತವಾಗಿ ಒಂದೊದಗಿದ ವಿಪತ್ತುಗಳನ್ನು ಎದುರಿಸುವಷ್ಟು ಸಾಮರ್ಥ್ಯ ಅವಕ್ಕಿದೆ. ತಮ್ಮ ಅನ್ನಿಸಿಕೆಗಳನ್ನು ಇನ್ನೊಬ್ಬರ ಎದುರು ಹೇಳಿಕೊಳ್ಳಲು ಬಯಸುವದಿಲ್ಲ. ಆದರೆ ಕತೆಗಾರನು ಪಾತ್ರಗಳ ಬಗ್ಗೆ ಓದುಗರಲ್ಲಿ ಸಹಾನುಭೂತಿಯನ್ನುಂಟು ಮಾಡಿದ್ದಾನೆ. ‘ಕಫನ’ದಲ್ಲಿ ಘೀಸೂ, ಮಾಧವ, ಪ್ರಸವವೇದನೆಯಿಂದ ಒಳಲುತ್ತಿರುವ ಮಾಧವನ ಹೆಂಡತಿಯಂತಹ ಪಾತ್ರಗಳ ಬಗ್ಗೆ ಯಾವ ಓದುಗನೂ ಸಹ ಸಹಾನುಭೂತಿಯನ್ನು ವ್ಯಕ್ತಪಡಿಸದಿರಲಾರನು.

ಪಾತ್ರಗಳ ವ್ಯಕ್ತಿತ್ವವು ಸಹಜವಾಗಿ ಬೆಳೆದುಕೊಂಡು ಬಂದಿದೆ. ಅವುಗಳಲ್ಲಿ ಜೀವನದ ಕ್ರಿಯೆ ಪ್ರತಿಕ್ರಿಯೆಗಳ ಸಂಘರ್ಷ ಇದೆ. ಹಾಸ್ಯದಲ್ಲಿ ಆಸಕ್ತಿ, ಕಷ್ಟಸಹಿಷ್ಣುತೆ, ಅನ್ಯಾಯಕ್ಕೆ ಮಣಿಯದಿರುವಿಕೆ ಮುಂತಾದ ಭಾರತೀಯರ ಗುಣವಿಶೇಷಗಳನ್ನೇ ಪಾತ್ರಗಳ ಚರಿತ್ರ ಚಿತ್ರಣದಲ್ಲಿ ಅಳವಡಿಸಿಕೊಳ್ಳಲಾಗಿದೆ. ‘ನಮಕ ಕಾ ದರೋಗಾ’ ‘ಪೂಸಕಿ ರಾತ’ ‘ಶತರಂಜ ಕೆ ಖಿಲಾಡಿ’ ‘ಮಿಸ್ ಪದ್ಮಾ’ ಮುಂತಾದ ಕತೆಗಳಲ್ಲಿ ಬರುವ ಪಾತ್ರಗಳು ಇದಕ್ಕೆ ನಿದರ್ಶನಗಳಾಗಿವೆ. ಪ್ರೇಮಚಂದರು ತಮ್ಮ ಸಣ್ಣ ಕತೆಗಳಲ್ಲಿ ಬೇರೆ ಬೇರೆ ಗುಣಸ್ವಭಾವವುಳ್ಳ ಸ್ತ್ರೀ ಪಾತ್ರಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಸ್ತ್ರೀಯ ಬಗ್ಗೆ ಅವರಿಗೆ ಎಲ್ಲಿಲ್ಲದ ಗೌರವ–ಕರುಣೆ. ಅವಳ ಆತ್ಮವು ಪುರುಷನ ಆತ್ಮಕ್ಕಿಂತಲೂ ಸುಸಂಸ್ಕೃತವಾದುದದ್ದೆಂದು ಅವರ ನಂಬಿಕೆ.

ಪ್ರೇಮಚಂದರ ಪಾತ್ರ ಪರಿಧಿ ಮತ್ತು ಚರಿತ್ರ ಚಿತ್ರಣದಲ್ಲಿ ತತ್ಕಾಲೀನ ಸಮಾಜವು ತನ್ನ ಯಥಾರ್ಥ ಸ್ವರೂಪದೊಂದಿಗೆ ಸ್ಫುಟವಾಗಿ ಮೂಡಿದೆ. ಈ ವಿಷಯದಲ್ಲಿ ಬೇರಾವ ಸಣ್ಣ ಕತೆಗಾರನೂ ಪ್ರೇಮಚಂದರಿಗಿಂತ ಹೆಚ್ಚು ಮುಂದೆ ಹೋಗಿಲ್ಲವೆನ್ನಬಹುದು. ಚರಿತ್ರ ಪ್ರಧಾನ ಸಣ್ಣ ಕತೆಯು ಘಟನಾ ಪ್ರಧಾನ ಸಣ್ಣ ಕತೆಗಿಂತಲೂ ಶ್ರೇಷ್ಠವೆಂಬುದು ಅವರ ಅಭಿಪ್ರಾಯವಾಗಿತ್ತು. ತಮ್ಮ ಗುಣವಿಶೇಷಗಳಿಂದ ಓದುಗರನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳುವಂತಹ ಪಾತ್ರಗಳನ್ನು ರಚಿಸುವುದರ ಕಡೆಗೆ ಹೆಚ್ಚು ಗಮನ ಹರಿಸಿದ್ದಾರೆ. ಅವರ ಸಣ್ಣ ಕತೆಗಳಲ್ಲಿಯ ಪಾತ್ರಗಳು ಕೇವಲ ಸೂತ್ರದ ಗೊಂಬೆಗಳಾಗಿರದೆ ಚಾರ್ಲ್ಸ್ ಡಿಕನ್ಸ್‌ರ ಪಾತ್ರಗಳಂತೆ ಬಾಳ ಕುಲುಮೆಯಲಿ ನೋವು ನಲಿವುಗಳನುಂಡ ಜೀವಂತ ವ್ಯಕ್ತಿಗಳಂತಿವೆ. ಸಣ್ಣಕತೆಗಾರ ಪ್ರೇಮಚಂದರು ಸತ್–ಅಸತ್ ಪಾತ್ರಗಳು ಮತ್ತು ಆದರ್ಶ–ನಿಮ್ನ ಪಾತ್ರಗಳೆಂದು ಎರಡು ಬಗೆಯ ಪಾತ್ರಗಳನ್ನು ರಚಿಸಿದ್ದಾರೆ.

ಸಂವಾದ ಯೋಜನೆಯು ಕಥಾವಸ್ತುವಿನ ವಿಕಾಸ ಪಾತ್ರಗಳ ಚಾರಿತ್ರಿಕ ವ್ಯಾಖ್ಯೆ ನೀಡುವದು, ಕತೆಗಾರನ ಉದ್ದೇಶವನ್ನು ಸ್ಪಷ್ಟಪಡಿಸುವದು, ದೇಶ, ಕಾಲದ ತಿಳುವಳಿಕೆ ಮಾಡಿಕೊಡುವದು ಮುಂತಾದ ಸಣ್ಣ ಕತೆಯ ರಚನಾ ತತ್ವಗಳ ವಿಕಾಸಕ್ಕೆ ಆಧಾರಭೂತವಾಗಿದೆ. 'ಜಾದೂ' 'ಜುಲೂಸ' ಮುಂತಾದ ಕತೆಗಳಲ್ಲಿ ಇಂತಹ ಸಂವಾದ ಯೋಜನೆ ಇದೆ. 'ಜುಲೂಸ' ಕತೆಯ ಇಬ್ರಾಹಿಮ ಬೀರಬಲ್ಲರ ಸಂವಾದಗಳು ಮುಂದಿನ

ಘಟನಾ ಚಕ್ರದ ಕಡೆಗೆ ಸಂಕೇತ ಮಾಡುತ್ತವೆ. 'ಸವಾಸೇರ ಗೇಹೂ'ದಲ್ಲಿ ವಿಪ್ರ ಮತ್ತು ಶಂಕರ ಇಬ್ಬರ ನಡುವಿನ ಸಂವಾದವು ಪಾತ್ರಗಳ ಚಾರಿತ್ರಿಕ ವೈಶಿಷ್ಟ್ಯಗಳನ್ನು ಸ್ಪಷ್ಟಪಡಿಸುತ್ತವೆ. 'ಶತರಂಜ ಕೆ ಖಿಲಾಡಿ'ಯ ಮಿರ್ಜಾಸಾಹೇಬ, ಮೀರ ಸಾಹೇಬರ ಸಂವಾದವು ತತ್ಕಾಲೀನ ಸಮಾಜದ ಬೇರೆ ಬೇರೆ ಕ್ಷೇತ್ರೀಯ ಪರಿಸ್ಥಿತಿಗಳ ಪರಿಚಯ ಮಾಡಿಕೊಡುತ್ತವೆ. 'ಶಾಂತಿ' ಕತೆಯಲ್ಲಿ ಸಂವಾದದ ಮೂಲಕ ಕತೆಗಾರನ ಉದ್ದೇಶ ಸ್ಪಷ್ಟವಾಗಿದೆ.

ಪ್ರೇಮಚಂದರ ಸಣ್ಣಕತೆಗಳಲ್ಲಿ ಸಂವಾದದ ಅನೇಕ ಭೇದಗಳಿವೆ. ಭಾವಪ್ರಧಾನ, ಸಾಂಕೇತಿಕ, ನಾಟಕೀಯ, ವ್ಯಂಗ್ಯಾತ್ಮಕ, ಮನೋವೈಜ್ಞಾನಿಕ. ಕಥಾವಸ್ತು ಮತ್ತು ಪಾತ್ರಗಳಿಗೆ ಅನುಗುಣವಾಗಿ ಈ ಬೇರೆ ಬೇರೆ ಪ್ರಕಾರದ ಸಂವಾದಗಳನ್ನು ಆಯೋಜಿಸಲಾಗಿದೆ. ಸ್ವಾಭಾವಿಕತೆ, ಸ್ಪಷ್ಟತೆ, ಸಂಕ್ಷಿಪ್ತತೆ, ನಾಟ್ಯಮಯತೆ, ಅನುಕೂಲತೆ, ಉಪಯುಕ್ತತೆ, ಸಂಬದ್ಧತೆ, ಮಾರ್ಮಿಕತೆ ಮುಂತಾದ ಗುಣಗಳಿಂದಾಗಿ ಅವರ ಸಂವಾದಯೋಜನೆ ಸಾರ್ಥಕವಾಗಿದೆ. 'ಮಂತ್ರ' 'ಅಲಗ್ಯೋಝಾ' 'ಧಿಕ್ಕಾರ' ಮುಂತಾದ ಕತೆಗಳ ಸಂವಾದಗಳು ಸಂಕ್ಷಿಪ್ತ ಹಾಗೂ ಅರ್ಥಪೂರ್ಣವಾಗಿವೆ.

ಭಾಷೆಯು ಪ್ರೇಮಚಂದರ ಕಥನ ಕಲೆಯನ್ನು ಫಲಪ್ರದಗೊಳಿಸುವಲ್ಲಿ ಒಂದು ಪರಿಣಾಮಕಾರಿ ಶಕ್ತಿಯಾಗಿ ಪರಿಣಮಿಸಿದೆ. ಸಂಸ್ಕೃತನಿಷ್ಠ ಭಾಷೆ, ಲೋಕಭಾಷೆ, ಕ್ಲಿಷ್ಟ ಭಾಷೆ, ಸಮನ್ವಿತ ಭಾಷೆ ಮುಂತಾದ ಬೇರೆ ಬೇರೆ ಮಟ್ಟದ

ಭಾಷೆಯನ್ನು ಪ್ರಯೋಗಿಸಿದ್ದಾನೆ. ಭಾಷೆ ಅಕೃತ್ರಿಮವಾಗಿದೆ. ಪರಿಸ್ಥಿತಿ, ಪಾತ್ರಗಳಿಗನುಕೂಲವಾದ ಭಾಷೆ ಅವರ ಗದ್ಯ ಶೈಲಿಯ ವೈಶಿಷ್ಟ್ಯವಾಗಿದೆ. ಬೇರೆ ಬೇರೆ ಅಂತಸ್ತು, ವರ್ಗ ಕೋಮುಗಳಿಗೆ ಸಂಬಂಧಿಸಿದ ಪಾತ್ರಗಳ ಭಾಷೆಯನ್ನೇ ಬಳಸಿದ್ದಾರೆ 'ಬಡೆ ಭಾಯಿಸಾಹಬ್'ದಂತಹ ಕತೆಗಳಲ್ಲಿ ಜನಸಾಮಾನ್ಯರ ನಾಲಿಗೆಯ ಮೇಲೆ ಕುಣಿವ ಪಡೆನುಡಿಗಳ ಸಫಲ ಪ್ರಯೋಗವಿದೆ. 'ಬೇಟೊವಾಲಿ ವಿಧವಾ' ದಂತಹ ಕತೆಗಳಲ್ಲಿ ಜನರಾಡುವ ಭಾಷೆಯಲ್ಲಿಯೂ ಸಂಸ್ಕೃತ ತತ್ಸಮ ಶಬ್ದಾವಲಿ, ಗ್ರಾಮ್ಯ ಶಬ್ದಾವಲಿ ಬಳಕೆಯಲ್ಲಿರುವ ಪಡೆನುಡಿಗಳ ಸಾರ್ಥಕ ಪ್ರಯೋಗವಿದೆ. ಈ ಭಾಷೆಯು ಮನೋಭಾವ ದೃಶ್ಯಗಳ ಸೂಕ್ಷ್ಮ, ಸಾಕಾರ ಚಿತ್ರಗಳನ್ನು ಪ್ರಸ್ತುತ ಪಡಿಸುವಲ್ಲಿ ಸಮರ್ಥವಾಗಿದೆ. ಇಂತಹ ವೈವಿಧ್ಯಮಯವಾದ ಶಬ್ದಗಳ ಮೂಲಕ ಮಾನವ ಜೀವನವನ್ನು ಯಥಾರ್ಥವಾಗಿ, ಸೂಕ್ಷ್ಮವಾಗಿ, ಸುಂದರವಾಗಿ ಚಿತ್ರಿಸಿದ್ದಾರೆ. 'ಅಲಗ್ಯೋಝಾ' ದಂತಹ ಕತೆಗಳಲ್ಲಿ ಕತೆಗಾರನು ಪ್ರತಿಯೊಂದು ಮಾತಿನಲ್ಲಿ ಕಡಿಮೆ ಶಬ್ದಗಳನ್ನು ಬಳಸಿದ್ದಾನೆ. 'ಶಾಂತಿ'ಯಂತಹ ಕತೆಗಳಲ್ಲಿ ಸ್ವಲ್ಪ ಶಬ್ದಗಳಲ್ಲಿ ಬಹಳಷ್ಟು ಹೇಳಲು ಪ್ರಯತ್ನಿಸಿದ್ದಾನೆ. ಶಬ್ದಚಯನ, ವಾಕ್ಯವಿನ್ಯಾಸದಲ್ಲಿ ಸರಸತೆ, ರೋಚಕತೆ, ಸಂಕ್ಷಿಪ್ತತೆ, ಸಾರ್ಥಕತೆ ಮುಂತಾದುವುಗಳ ಕಡೆಗೆ ಲಕ್ಷ್ಯವಿರಿಸಿದ್ದಾನೆ. ಕೆಲವು ಕಡೆಗೆ ಒಂದು ಪಡೆನುಡಿಯ ಪ್ರಯೋಗವೇ ಒಂದು ವಾಕ್ಯವಾಗಿ ಬಿಟ್ಟಿದೆ. 'ಮೈ ಅಪನಾಸಾ ಮುಹ ಲೇಕರ ರಹ ಗಯಾ' ಮುಂತಾದವು. ಬೇರೆ ಕೆಲವು

ಕಡೆಗೆ 'ರಾಂಡ ಮರೆನ ಖಂಡಹರ ಥಹೆ' 'ಇಸ್ ಕೋಠಿ ದಾನ ಉಸ್ ಕೋಠಿ'ಯಂತಹ ಗ್ರಾಮ್ಯ ಪಡೆ ನುಡಿಗಳನ್ನು, 'ಬ್ರೆಕ್' 'ಡ್ರಾಮಾ'ದಂತಹ ಆಂಗ್ರೇಜಿ ಶಬ್ದಗಳನ್ನು ಉಪಯೋಗಿಸಿದ್ದಾನೆ. ಇಂತಹ ಶಬ್ದಗಳ ಪ್ರಯೋಗದಿಂದ ಅಭಿವ್ಯಂಜನಾ ಸಾಮರ್ಥ್ಯ ಹೆಚ್ಚಿದೆ. ಪ್ರೇಮಚಂದರು ಮೊಟ್ಟ ಮೊದಲು ಹಿಂದುಸ್ತಾನಿಗೆ ಅಗ್ರ ಪ್ರಾಶಸ್ತ್ಯ ಕೊಟ್ಟಿದ್ದರು. ಪ್ರಾರಂಭದ ಕತೆಗಳಲ್ಲಿ ಉರ್ದು, ಫಾರಸಿ ಲೋಕೋಕ್ತಿಗಳನ್ನೂ, ಒಳ್ನುಡಿಗಳನ್ನೂ ಉಪಯೋಗಿಸಿದ್ದಾರೆ. ಒಳ್ನುಡಿ ವ್ಯಂಗ್ಯ ಮತ್ತು ಉಪಯುಕ್ತವಾದ ಶಬ್ದಗಳ ಸಮ್ಮಿಶ್ರಣದಿಂದ ಗದ್ಯಕಾವ್ಯದ ಮಾಧುರ್ಯ ಹೆಚ್ಚಿದೆ. ಸಾಮಾನ್ಯ ಜನ ರಾಡುವ ಭಾಷೆಯಿಂದ ಹಿಡಿದು ಉಚ್ಚ ಮಟ್ಟದ ಗದ್ಯದವರೆಗೆ ಅವರ ಭಾಷೆಯ ಹರಹು ಇದೆ. ಉರ್ದು ಭಾಷೆಯ ಪ್ರಭಾವ ವಿದ್ದಾಗಲೂ ಸಹ ಶುದ್ಧ ಹಿಂದಿಯ ಸ್ವತ್ವ ಇದೆ. ಇವೆರಡರ ಸಮ್ಮಿಶ್ರಣದಿಂದ ಭಾಷೆ ಶ್ರೀಮಂತವಾಗಿದೆ. ಒಳ್ಳೆಯ ಭಾವ ವಿಚಾರಗಳಿಂದ ಅದರ ಆಂತರಿಕ ಶಕ್ತಿ ಹೆಚ್ಚಿದೆ. ಅದು ಕಥಾ ವಸ್ತುವನ್ನು ಗತಿಶೀಲಗೊಳಿಸಿದೆ. ಪಾತ್ರಗಳ ಮನೋವೃತ್ತಿಗಳಿಗೆ ಅನುಗುಣವಾಗಿದೆ. ಇದರ ಪರಿಣಾಮವಾಗಿ ಸಂವಾದಗಳು ಹುಲುಸಾಗಿವೆ. ಭಾಷೆಯಲ್ಲಿ ಚಿತ್ರೋಪಮತೆ, ಸುಸ್ಪಷ್ಟತೆ, ಪ್ರವಾಹಮಯತೆ ಗೋಚರಿಸುತ್ತದೆ.

ಸಾಹಿತ್ಯ ಸೃಷ್ಟಿಯ ಕಾರ್ಯದಲ್ಲಿ ಭಾಷೆಯ ಸತ್ಪಾತ್ರದ ಬಗ್ಗೆ ಅವರು ತಮ್ಮ ಮೌಲಿಕವಾದ ವಿಚಾರಗಳನ್ನು ಪ್ರಕಟ

ಪಡಿಸುತ್ತ "ಯಾವುದೇ ರಾಷ್ಟ್ರದ ಭಾಷೆ ಎಷ್ಟೊಂದು ಸ್ವಸ್ಥ ಹಾಗೂ ಬಲಶಾಲಿಯಾಗಿರಬೇಕೆಂದರೆ ಅದು ಆ ರಾಷ್ಟ್ರದ ಭಾವ, ವಿಚಾರಗಳನ್ನು ತನ್ನೊಳಗೆ ಗ್ರಹಿಸಿ ಚನ್ನಾಗಿ ಜೀರ್ಣಿಸಿಕೊಳ್ಳಬೇಕು. ಎರಡನೆಯದಾಗಿ ಭಾಷೆಯು ಜೀವನ ಮತ್ತು ಜಗತ್ತಿನ ಸೂಕ್ಷ್ಮ ಮನೋವೈಜ್ಞಾನಿಕ ಅಂತರ್ವೃತ್ತಿಗಳ ಕಲಾತ್ಮಕ ಸಮುದ್ಘಾಟನೆ ಮಾಡುವಂತಿರಬೇಕು" ಎಂದಿದ್ದಾರೆ. ಸಣ್ಣಕತೆಗಳಲ್ಲಿ ಪ್ರಯೋಗಿಸಲ್ಪಟ್ಟ ಅವರ ಇಂತಹ ಭಾಷೆಯು ಹಿಂದಿ ಸಾರಸ್ವತ ಲೋಕಕ್ಕೆ ಕೊಡಮಾಡಿದ ಒಂದು ಅಪೂರ್ವ ಕಾಣಿಕೆಯಾಗಿದೆ. ತಮ್ಮ ಭಾಷೆಯ ಬೆಡಗಿನಿಂದಾಗಿಯೇ ಸಣ್ಣಕತೆಗಾರ ಪ್ರೇಮಚಂದರು ಹಿಂದಿ ಸಾಹಿತ್ಯಾಕಾಶದ ಧ್ರುವ ನಕ್ಷತ್ರವಾಗಿ ಬೆಳಗಿದರು.

ಶೈಲಿಯು ಪ್ರೇಮಚಂದರ ಸಣ್ಣಕತೆಗಳಲ್ಲಿ ಕ್ರಮಿಕ ವಿಕಾಸವನ್ನು ಪಡೆದಿದೆ. ಉರ್ದು ಸಣ್ಣಕತೆಗಳಿಂದ ಪ್ರಭಾವಿತರಾದ ಪ್ರೇಮಚಂದರು ತಮ್ಮ ಪ್ರಾರಂಭಿಕ ಕತೆಗಳನ್ನು ವರ್ಣನಾತ್ಮಕ ಶೈಲಿಯಲ್ಲಿ ರಚಿಸಿರುವುದರಿಂದ ಅವು ಸುದೀರ್ಘವಾಗಿವೆ. ‘ಬಡೆ ಘರ ಕಿ ಬೇಟಿ’ ‘ಪಂಚ ಪರಮೇಶ್ವರ’ದಂತಹ ಕೆಲವು ಕತೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ಸಣ್ಣಕತೆಯು ಸಫಲವಾಗಲು ಅದರಲ್ಲಿ ಅನಾವಶ್ಯಕ ವರ್ಣನೆಗಳ ವಿಸ್ತಾರ ಇರಕೂಡದು. ಅವರು ಮುಂದೆ ಈ ಬಗ್ಗೆ ಬಹಳ ಜಾಗರೂಕರಾದರು. ಅದಕ್ಕೆ ಕಾರಣವೂ ಇದೆ. ಸಣ್ಣಕತೆಯು ಒಂದೇ ಸಲಕ್ಕೆ ಓದಿ ಮುಗಿಸುವಂತಿರಬೇಕಾದ ಅಗತ್ಯವಿರುವುದರಿಂದ

ಅದರಲ್ಲಿ ಚಿಕ್ಕದಾದ ಒಂದೇ ಅಂಶವನ್ನು ಪ್ರಸ್ತುತಪಡಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಸಣ್ಣಕತೆಯಲ್ಲಿ ವರ್ಣನೆಗಳಿಗೆ, ಸಂಘಟನೆಗಳಿಗೆ, ವಿವರಣಾ ವ್ಯಾಖ್ಯಾನಗಳಿಗೆ ಮಿತಿಮೀರಿ ಆಸ್ಪದ ದೊರೆಯಲಾರದು. ‘ಕಫನ’ ‘ಗೃಹದಾಹ’ ‘ಪೂಸ ಕಿ ರಾತ್’ ಮುಂತಾದವು ಇಂತಹ ಕತೆಗಳು. ವಿಶ್ವದ ಉತ್ಕೃಷ್ಟ ಮಟ್ಟದ ಸಣ್ಣಕತೆಗಾರರ ಸಾಹಿತ್ಯಕೃತಿಗಳಿಗೆ ಯಾವ ವಿಧದಲ್ಲೂ ಕಡಿಮೆಯಿಲ್ಲದ ಅವರ ಇಂತಹ ಕೆಲವು ಕತೆಗಳ ಶೈಲಿ ಅತ್ಯಧಿಕ ಪ್ರಭಾವ ಪೂರ್ಣವಾಗಿದೆ. ವರ್ಣನೆಗಳು ಚಿಕ್ಕ ಹಾಗೂ ಸರಸವಾಗಿವೆ. ಸುಸ್ಪಷ್ಟವಾದ ಆರಂಭ, ವಿಕಾಸ, ಚರಮಸ್ಥಿತಿ ಅವರ ಶೈಲಿಯ ಯಶಸ್ಸಿಗೆ ಮುಖ್ಯ ಕಾರಣವಾಗಿವೆ. ಅವರು ತಮ್ಮ ಸಣ್ಣಕತೆಗಳ ಮೂಲಕ ಹಿಂದಿಯ ಗದ್ಯಶೈಲಿಯನ್ನು ಸಜೀವ, ಸಶಕ್ತ ಹಾಗೂ ಚುರುಕುಗೊಳಿಸಿದರು. ವ್ಯಂಗ್ಯ ಅವರ ಶೈಲಿಯ ಮುಖ್ಯ ಅಂಗಗಳಲ್ಲೊಂದು. ಈ ತಮ್ಮ ಶೈಲಿಗೆ ವಿವಿಧ ಭಾವ, ವಿಚಾರಗಳನ್ನು ಪ್ರಕಟಪಡಿಸುವ ಶಕ್ತಿಯನ್ನು ತಂದುಕೊಟ್ಟರು. ಅದು ಮಾರ್ಮಿಕ, ಸ್ವಾಭಾವಿಕ ಮನ ಮುಟ್ಟುವಂತಹದಾಗಿದೆ. ‘ಮುಕ್ತಿ ಮಾರ್ಗ’ ‘ಶತರಂಜ ಕೆ ಖಿಲಾಡಿ’ ಕತೆಗಳಲ್ಲಿ ಇಂತಹ ವ್ಯಂಗ್ಯವಿದೆ. ಮನೋರಂಜನೆ ನೀಡುವುದು, ಜೀವನದ ಸಮಸ್ಯೆಗಳ ಬಗ್ಗೆ ಓದುಗರಲ್ಲಿ ಪ್ರತಿಕ್ರಿಯೆ ಹುಟ್ಟಿಸುವುದು ಈ ವ್ಯಂಗ್ಯ ಶೈಲಿಯ ಉದ್ದೇಶವಾಗಿದೆ. ‘ಬಡೆ ಭಾಯಿ ಸಾಹಬ’ದಂತಹ ಕತೆಗಳಲ್ಲಿ ಮೃದು–ಗೂಢವಾದ ಹಾಸ್ಯ–ವ್ಯಂಗ್ಯಗಳ ಮೂಲಕ ಓದುಗರಿಗೆ ಮನೋರಂಜನೆಯಾಗುತ್ತದೆ. ಮಾನಸಿಕ ಪರಿಷ್ಕಾರವೂ

ಆಗುತ್ತದೆ. 'ಶಾಂತಿ'ಯಂತಹ ಕತೆಗಳ ಶೈಲಿಯಿಂದ ಓದುಗರ ಜಿಜ್ಞಾಸೆ, ಕುತೂಹಲ ಕೊನೆಯುವರೆಗೂ ಬೆಳೆದುಕೊಂಡು ಬರುತ್ತದೆ. ಅದರ ಸಮಗ್ರ ಚಿತ್ರಣವು ಸ್ವಾಭಾವಿಕ, ಸಂಕ್ಷಿಪ್ತ. ಸೂಕ್ಷ್ಮ ಸ್ಪಷ್ಟವಾಗಿ ಮೂಡಿದೆ.

ಐತಿಹಾಸಿಕ, ಸಂವಾದಾತ್ಮಕ, ಇತಿವೃತ್ತಾತ್ಮಕ, ಮನೋವಿಶ್ಲೇಷಣಾತ್ಮಕ, ಕಾವ್ಯಾತ್ಮಕ, ಡಾಯರಿ ಪ್ರಣಾಲಿ, ಪತ್ರಾತ್ಮಕ, ಆತ್ಮಕಥನಾತ್ಮಕ ಹೀಗೆ ಅವರ ಸಣ್ಣಕತೆಗಳ ಶೈಲಿ ವೈವಿಧ್ಯಪೂರ್ಣವಾಗಿದೆ. ಆಲಂಕಾರಿಕತೆ, ಪ್ರತೀಕಾತ್ಮಕತೆ, ರೋಚಕತೆ, ಭಾವಪೂರ್ಣತೆ, ಆಂಚಲಿಕತೆ, ಅವರ ಶೈಲಿಯ ವಿಶಿಷ್ಟ ಲಕ್ಷಣಗಳು. ಹೀಗೆ ವಸ್ತುಚಯನ, ಪಾತ್ರರಚನೆಗೆ ಅನುಗುಣವಾಗಿ ಶೈಲಿಯನ್ನು ಪ್ರಯೋಗಿಸಿ ತಮ್ಮ ಸಣ್ಣಕತೆಯ ಸಾಹಿತ್ಯವನ್ನು ಸುಸ್ಥಿರಗೊಳಿಸಿದ್ದಾರೆ.

ವಾತಾವರಣ ಪ್ರೇಮಚಂದರ ಸಣ್ಣಕತೆಗಳಲ್ಲಿ ಬಹುರೂಪಿಯಾಗಿದೆ. ಅದರಲ್ಲಿ ಸ್ಥಾನೀಯ ವೈಶಿಷ್ಟ್ಯ ಮತ್ತು ಆಂಚಲಿಕ ಚಿತ್ರ ಇದೆ. ವಾತಾವರಣದಲ್ಲಿ ಮುಖ್ಯವಾಗಿ ದೇಶ, ಕಾಲ ಒಳಪಟ್ಟಿವೆ. ಕತೆಗಾರನು ಸಂಕ್ಷಿಪ್ತತೆಯ ತಳಹದಿಯ ಮೇಲೆ ದೇಶ ಕಾಲವನ್ನು ಪ್ರಸ್ತುತ ಪಡಿಸುವಲ್ಲಿ ಯಶಸ್ವಿಯಾಗಿದ್ದಾನೆ. 'ಶತರಂಜ ಕೆ ಖಿಲಾಡಿ'ಯಲ್ಲಿ ದೇಶ, ಕಾಲದ ವಾಸ್ತವಿಕ ಚಿತ್ರಣವಿದೆ. 'ಉನ್ಮಾದ' ಕತೆಯಲ್ಲಿ ವಿದೇಶೀ ವಾತಾವರಣವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ. 'ದೊ ಕಬ್ರೆಂ' ಕತೆಯಲ್ಲಿ ಆಲಂಕಾರಿಕ ಮತ್ತು ಚಿತ್ರಾತ್ಮಕ ವಾತಾವರಣವಿದೆ. 'ಡಾಮುಲ

ಕಾ ಕೈದಿ' 'ರಿಯಾಸತ ಕಾ ದೀವಾನಾ' ದಂತಹ ಕತೆಗಳಲ್ಲಿ ಬೇರೆ ಬೇರೆ ಸ್ಥಿತ್ರೀಯ ವಾತಾವರಣವಿದೆ. 'ನಾಗಪೂಜಾ'ದಲ್ಲಿ ಪ್ರಾಕೃತಿಕ ವಾತಾವರಣವಿದೆ. ಐತಿಹಾಸಿಕ (ರಾಸಿಸಾರಂಧ್ರಾ), ಸಾಂಸ್ಕೃತಿಕ (ಶತರಂಜ ಕೆ ಖಿಲಾಡಿ), ಸಾಮಾಜಿಕ (ಉಪದೇಶ) ಗ್ರಾಮೀಣ ವಾತಾವರಣ (ಬಡೆ ಘರ ಕಿ ಬೇಟಿ) ಮುಂತಾದ ದೇಶ, ಕಾಲದ ವಿಭಿನ್ನ ಪ್ರಕಾರಗಳಿವೆ.

ಉದ್ದೇಶ ನಾನಾ ಪ್ರಕಾರವಾಗಿದೆ. ಅದರಲ್ಲೂ ಮನೋರಂಜನೆ ಮತ್ತು ಸಮಾಜ ಸುಧಾರಣೆಯನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಳ್ಳಲಾಗಿದೆ. ಜೀಸಾಯುಗಾರರ, ಕೂಲಿಕಾರರ ಶೋಷಣೆ, ಧನಿಗಳಿಂದ ಪಡೆದ ಸಾಲದ ಹೊರೆ ಹೊತ್ತುಕೊಂಡು ತೀರಿಸಲಾಗದೆ ಒದ್ದಾಡುವ ರೈತರ ನರಳುವಿಕೆ, ('ಪೂಸ ಕಿ ರಾತ'), ವರ್ಗಭಾವನೆಯ ದುಷ್ಪರಿಣಾಮಗಳು (ವಿಧ್ವಂಸ), ಅಂಧವಿಶ್ವಾಸ, ಕಂದಾಚಾರ, ಮಿಥ್ಯಾಡಂಬರಗಳಿಂದಾಗುವ ಅವ್ಯವಹಾರಗಳು (ಸವಾಸೇರ ಗೆಹೂ), ಹರಿಜನರ ಹೀನಸ್ಥಿತಿ (ಠಾಕುರ ಕಾ ಕುವಾ), ಶಿಕ್ಷಣ, ಸ್ವಾವಲಂಬನೆಯಿಲ್ಲದ ಭಾರತೀಯ ನಾರಿಯ ನೀರಸವಾದ ಬಾಳು (ದೊ ಸಖಿಯಾ), ಪಾರಿವಾರಿಕ, ಸಾಮಾಜಿಕ ಸಮಸ್ಯೆಗಳು (ವಜ್ರಪಾತ, ಅಮವಾಸ್ಯಾ ಕಿ ರಾತ), ಭಾರತದಲ್ಲಿ ಪಾಶ್ಚಾತ್ಯ ಸಭ್ಯತೆ–ಸಂಸ್ಕೃತಿಯ ನಿರುಪಯುಕ್ತತೆ, ಒಳ್ಳೆಯ ಶಿಕ್ಷಣದ ಅಭಾವ, ಆಡಂಬರ ಪ್ರಿಯತೆ, ಅಕರ್ಮಣ್ಯತೆ, ಅದೂರದರ್ಶಿತ್ವಗಳಿಂದಾಗಿ ಮಧ್ಯಮ ವರ್ಗದ ಜನತೆಯ ಹಿಂದುಳಿಯುವಿಕೆ, ನಿಮ್ನವರ್ಗದ ಸಮಸ್ಯೆಗಳು, ಭಾರತೀಯ ಜನಜೀವನದಲ್ಲಿ

ತ್ಯಾಗ, ಸೇವೆ, ಬಲಿದಾನ ಮುಂತಾದ ಪರಂಪರಾಗತ ಭಾರತೀಯ ಆದರ್ಶಗಳ ಸತ್ಪಾತ್ರ ಮುಂತಾದುವುಗಳ ಸತ್ಯಸ್ವರೂಪವನ್ನು ಚಿತ್ರಿಸಿ, ಅವುಗಳ ಸಾಧಕ, ಬಾಧಕಗಳನ್ನು ಗುರುತಿಸಿ ಈ ದಿಶೆಯಲ್ಲಿ ಸಾಮೂಹಿಕ ಕಲ್ಯಾಣವನ್ನುಂಟುಮಾಡಬಹುದಾದ ರಚನಾತ್ಮಕ ಯೋಜನೆಗಳನ್ನು ಮಾತ್ರ ಕಾರ್ಯಾಚರಣೆಯಲ್ಲಿ ತರಬೇಕಾದ ಅಗತ್ಯವನ್ನು ಒತ್ತಿ ಹೇಳುವವು ಪ್ರೇಮಚಂದರ ಸಣ್ಣ ಕತೆಗಳ ಹಿರಿದಾದ ಉದ್ದೇಶವು. ಇದಕ್ಕಾಗಿ ಅವರು ಪ್ರಥಮ ಹಾಗೂ ದ್ವಿತೀಯ ಜಾಗತಿಕ ಮಹಾಯುದ್ಧಗಳ ಮಧ್ಯಕಾಲದಲ್ಲಿಯ ಭಾರತೀಯ ವ್ಯಕ್ತಿ, ಸಮಾಜ, ರಾಷ್ಟ್ರ ಜೀವನವನ್ನು ತಮ್ಮ ಕಥಾಕೃತಿಯ ಆಧಾರ ಭೂಮಿಯನ್ನಾಗಿಟ್ಟುಕೊಂಡಿದ್ದಾರೆ.

ಈ ಪ್ರಕಾರವಾಗಿ ಭಾವ ಮತ್ತು ವಿಚಾರ ಪ್ರಧಾನ ಪ್ರವೃತ್ತಿಗಳಲ್ಲಿ ಅರ್ಥಾತ್ 'ಜೀವನ ದರ್ಶನ'ದಲ್ಲಿ ಬರುವ ಸಾಮಾಜಿಕ ರಾಜನೈತಿಕ, ಸಾಂಸ್ಕೃತಿಕ ಮುಂತಾದ ವಿವಿಧ ರಂಗಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ಅನೇಕ ಪ್ರಗತಿಪರವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಪ್ರೇಮಚಂದರ ಸಲಹೆಯು ಅವರೊಬ್ಬ ಸ್ಥಿತಪ್ರಜ್ಞ ಸಾಹಿತಿಗಳೆಂಬ ಮಾತನ್ನು ಸ್ಪಷ್ಟ ಪಡಿಸುತ್ತದೆ. ಸಾಮಾಜಿಕ ರಾಜನೈತಿಕ ವಿಷಯಗಳಿಗೆ ಸಂಬಂಧಿಸಿದ ಅನೇಕ ವಿಧಾಯಕ ತತ್ತ್ವಗಳನ್ನು ಬೆಳಕಿಗೆ ತರುವಲ್ಲಿ ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಕಾಂಗ್ರೆಸ್ಸು ಮುಂತಾದ ವ್ಯಕ್ತಿ ಮತ್ತು ಸಂಸ್ಥೆಗಳಿಂದ ನೆರವು ಪಡೆದುಕೊಂಡರು. ಧಾರ್ಮಿಕ, ಆಧ್ಯಾತ್ಮಿಕ

ವಿಷಯಗಳ ದೃಷ್ಟಿಯಿಂದ ಭಾರತೀಯ 'ಥಿಯಾಸಾಫಿಕಲ್ ಸೊಸಾಯಿಟಿ'ಯ ಥಿಯಾಸಾಫಿ ತತ್ವಗಳೂ, ಸಾಂಪ್ರದಾಯಿಕ ಸಾಂಸ್ಕೃತಿಕ ವಿಷಯಗಳ ದೃಷ್ಟಿಯಿಂದ ಆರ್ಯಸಮಾಜ, ವಿವೇಕಾನಂದರ ತತ್ವಗಳೂ, ಸ್ವರಾಜ್ಯ ಸ್ಥಾಪನೆ, ವರ್ಗ ಸಮನ್ವಯ, ಆರ್ಥಿಕ ಸುಧಾರಣೆ ಮುಂತಾದ ಪ್ರಗತಿಶೀಲ ಧೋರಣೆಗಳ ವಿಷಯದಲ್ಲಿ ರಶಿಯಾದೇಶದ ಬೋಲ್ಶೆವಿಕ್ ರಾಜ್ಯ ಪದ್ಧತಿಯ ತತ್ವಗಳೂ ಅವರಿಗೆ ಸಮಯೋಚಿತ ಉಪಾದೇಯಗಳಾಗಿ ತೋರಿತವು. ಸಣ್ಣಕತೆಗಳ ರಚನಾತತ್ವಗಳ ದೃಷ್ಟಿಯಿಂದ ಪ್ರೇಮಚಂದರ ಸಾಧನೆ ಚಿರಂತನ ಹಾಗೂ ಚಿರನೂತನವಾದುದು. ಅವರಿಂದ ಪ್ರಭಾವಿತರಾದ ಅನೇಕ ಸಣ್ಣಕತೆಗಾರರು ಅವರ ರಚನಾವಿಧಾನವನ್ನು ಅನುಸರಿಸಿದರು. ಚರಿತ್ರ ಚಿತ್ರಣ, ಪಾತ್ರಗಳ ಮನೋವಿಶ್ಲೇಷಣೆ, ಭಾಷೆ, ಶೈಲಿ ಮುಂತಾದುವುಗಳು ಸಣ್ಣಕತೆಗೆ ಪ್ರೇಮಚಂದರ ಅಮೂಲ್ಯ ಕೊಡುಗೆಗಳು. ಅವರ ರಚನಾ ತತ್ವಗಳಲ್ಲಿ ಕ್ರಮಿಕ ವಿಕಾಸ ಕಂಡುಬರುತ್ತದೆ. ದೇಶ, ಕಾಲ, ಪರಿಸ್ಥಿತಿ-ಪರಿಸರಕ್ಕನುಸಾರವಾಗಿ ಅವರ ಕಥನ ಕಲೆಯಲ್ಲಿ ಬದಲಾವಣೆಯಾಗುತ್ತ ನಡೆದಿದೆ. ಆರಂಭದ ಕತೆಗಳಲ್ಲಿ ಆದರ್ಶವಾದಿಗಳಾಗಿ ಕಾಣಿಸಿಕೊಂಡಿದ್ದಾರೆ ನಂತರದ ಕತೆಗಳಲ್ಲಿ ಯಥಾರ್ಥವಾದಿಗಳಾಗಿ ಶೋಭಿಸಿದ್ದಾರೆ. ಪ್ರೇಮಚಂದರ ಸಣ್ಣಕತೆಗಳ ಅಂಗಾಂಗಗಳ ಸವಿಸ್ತಾರವಾದ ಈ ವಿಶ್ಲೇಷಣೆಯಿಂದ ಭಾವಪಕ್ಷ, ಕಲಾಪಕ್ಷಗಳ ಹಿರಿಮೆ ಹೊರಹೊಮ್ಮಿದೆ.

ಕೊನೆಯ ಮಾತು

ಪ್ರೇಮಚಂದರು ಸಣ್ಣಕತೆಗಳ ಮೂಲಕ ಜಾಹಿರಪಡಿಸಿದ ವಿಧಾಯಕ ತತ್ವಗಳ ನೆರವಿನಿಂದ ಜನತೆ ಹಾಗೂ ರಾಷ್ಟ್ರವನ್ನು ಸ್ವಾತಂತ್ರ್ಯ ಮತ್ತು ಸ್ವರಾಜ್ಯದ ಹೊಸ ಬೆಳಕಿನತ್ತ ಕೊಂಡೊಯ್ಯಲು ಶ್ರಮಿಸಿದರು. ಭಾರತೀಯತ್ವದ ಘನತೆ, ಗೌರವಗಳನ್ನು ರಕ್ಷಿಸುವಂತಹ ಮೂಲಭೂತ ಶಕ್ತಿಗಳ ಶ್ರೇಷ್ಠತೆಯ ಬಗ್ಗೆ ಅವರಲ್ಲಿ ಅರಿವನ್ನುಂಟುಮಾಡಲು ಯತ್ನಿಸಿದರು. ಭಾರತೀಯರಲ್ಲಿ ಪ್ರಗತಿಶೀಲ ತತ್ವದ ವಿದ್ಯುತ್ ಸಂಚಾರ ಉಂಟಾಗಬೇಕೆಂಬುದು ಅವರ ಮಹದಿಚ್ಛೆಯಾಗಿತ್ತು. ಅನೇಕ ವ್ಯಾಧಿಗಳಿಂದ ಕ್ಷತಗೊಂಡ ವ್ಯಕ್ತಿಜೀವನವನ್ನು ಸ್ವಸ್ಥ, ಸುದೃಢಗೊಳಿಸುವಂತಹ ಏನೆಲ್ಲ ಉಪಾಯಗಳನ್ನು ತಮ್ಮ ಸಣ್ಣಕತೆಗಳ ಮೂಲಕ ಸೂಚಿಸಿದರು. ವ್ಯಕ್ತಿಗೆ, ರಾಷ್ಟ್ರಕ್ಕೆ ಗಂಡಾಂತರವನ್ನೊಡ್ಡುವ ಅನೇಕ ಸಮಸ್ಯೆಗಳ ಮೂಲ ಕಾರಣಗಳನ್ನು ಕಂಡು ಹಿಡಿದು ಅಷ್ಟೇ ಅಧಿಕಾರವಾಣಿಯಿಂದ ಅವುಗಳಿಗೆ ಪರಿಹಾರೋಪಾಯಗಳನ್ನು ಸೂಚಿಸಿದ ಪ್ರೇಮಚಂದರು ಒಬ್ಬ ಅನುಭವಿಕ ಸಮಾಜ ಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ರಾಜನೀತಿಜ್ಞ, ಶಿಕ್ಷಣತಜ್ಞ, ಧರ್ಮಜ್ಞಾನಿಯಾಗಿದ್ದರು. ಅರ್ಥಾತ್ ಸಾಹಿತ್ಯದೊಂದಿಗೆ ಇವೆಲ್ಲ ಶಾಸ್ತ್ರಗಳ ವ್ಯಾವಹಾರಿಕ ಜ್ಞಾನವೂ ಅವರಿಗೆ ಸಾಕಷ್ಟು ಇತ್ತು- ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೊದಲು ವ್ಯಷ್ಟಿಯ ಬಗ್ಗೆ ಚಿಂತನೆ ಮಾಡಿದರು. ಆನಂತರ ಪ್ರಜಾಸತ್ತಾತ್ಮಕ

ಸಮಾಜವಾದವು ಅವರನ್ನು ಸಮಷ್ಟಿಯ ಬಗ್ಗೆ ಯೋಚಿಸಲು ಪ್ರೇರೇಪಿಸಿತು. ಇದು ನಿಜವಾತ್ರದಲ್ಲಿ ಅವರ ಒಂದು ಅಭೂತ ಪೂರ್ವ ಸಾಧನೆಯೆಂದೇ ಹೇಳಬೇಕು.

ಅನೇಕರು ಅವರನ್ನು ಆದರ್ಶವಾದಿಗಳು, ಯಥಾರ್ಥ ವಾದಿಗಳು, ಆದರ್ಶೋನ್ಮುಖ ಯಥಾರ್ಥವಾದಿಗಳು, ಗಾಂಧೀ ವಾದಿಗಳು, ಮಾರ್ಕ್ಸವಾದಿಗಳೆಂದು ಬೇರೆ ಬೇರೆ ರೂಪಗಳಲ್ಲಿ ಕಾಣಲು ಯತ್ನಿಸಿದ್ದಾರೆ. ಏಕೆಂದರೆ, ಅವರು ವ್ಯಕ್ತಿಯ ಕಲ್ಯಾಣ, ಲೋಕ ಮಂಗಲಕ್ಕಾಗಿ ಕಾಲೋಚಿತವಾದ ಬೇರೆ ಬೇರೆ ವಿಚಾರ ಪ್ರಣಾಲಿಗಳನ್ನು ಅನುಸರಿಸುತ್ತಿದ್ದರೆಂಬುದು ನಿಸ್ಸಂಶಯ. ಇದು ಸಾಹಿತಿಗೆ ಅನಿವಾರ್ಯವೆನ್ನಬಹುದು. ಶೋಷಣರಹಿತ ಸಮಾಜ ನಿರ್ಮಾಣದ ಸಮರ್ಥಕರಾದುದರಿಂದ ಪ್ರಗತಿವಾದಿಗಳೆಂದು ಕರೆಯಲ್ಪಟ್ಟರು. ಒಂದು ರೀತಿಯಲ್ಲಿ ವರ್ಗರಹಿತ ಶೋಷಣಹೀನ ಸಮಾಜ ನಿರ್ಮಾಣ ಗಾಂಧೀ ವಾದದಂತೆ ಮಾರ್ಕ್ಸವಾದದ ಧ್ಯೇಯವೂ ಆಗಿತ್ತು. ಆ ಸಂದರ್ಭದಲ್ಲಿ ಪ್ರೇಮಚಂದರು ಗಾಂಧೀವಾದದ ಹೃದಯ ಪರಿವರ್ತನೆಯ ಸಿದ್ಧಾಂತದಲ್ಲಿ ವಿಶ್ವಾಸವಿಟ್ಟು ತಮ್ಮ ಗುರಿ ಸಾಧನೆಗಾಗಿ ಯತ್ನಿಸಿದರು. ಇದನ್ನು ಸರಿಯಾಗಿ ಅರ್ಥೈಸಿ ಕೊಳ್ಳದ ಕೆಲವರು ಅವರು ಮಾರ್ಕ್ಸವಾದಿಗಳೆಂದೂ ವಾದಿಸ ಲಾರಂಭಿಸಿದರು. ಹಾಗೆ ನೋಡಿದರೆ ಅವರು ಯಾವ ವಾದಕ್ಕೂ ಅಂಟಿಕೊಂಡವರಲ್ಲ. ನಿಜಾರ್ಥದಲ್ಲಿ ಅವರೊಬ್ಬ ಮಾನವತಾವಾದಿ ಸಾಹಿತಿಗಳು.

ವಿಚಕ್ಷಣರಾದ ಪ್ರೇಮಚಂದರು ತಮ್ಮ ಸಣ್ಣಕತೆಗಳ
ಅಂದಿನ ಯುಗವನ್ನು ಚನ್ನಾಗಿ ಸಮೀಕ್ಷಿಸಿದರು. ಅದು ಬ
ಲಾವಣೆ ಹೊಂದುತ್ತ ನಡೆದಂತೆ ತಮ್ಮ ಚಿಂತನ ಪಕ್ಷದಲ್ಲಿಯ
ಬದಲಾವಣೆ ಮಾಡಿಕೊಂಡರು. ಯುಗದ ಸಮಸ್ಯೆಗಳನ್ನು
ಆವಶ್ಯಕತೆಗಳನ್ನು, ಬೇಡಿಕೆಗಳನ್ನು ಚನ್ನಾಗಿ ಅರಿತುಕೊಂಡ
ಅವುಗಳ ಪರಿಹಾರಕ್ಕಾಗಿ ಸೂಕ್ತ ಸಲಹೆಗಳನ್ನು ಕೊಟ್ಟರು
ಸಾಂಪ್ರದಾಯಿಕ ಮೂಢನಂಬಿಕೆ, ಕಂದಾಚಾರ, ಮಿಥ್ಯಾಡ
ಬರಗಳನ್ನು ನಿರ್ಮೂಲಗೊಳಿಸಿ ಇಂದಿನ ಯುಗದ ಜಾ
ಮಾನಕ್ಕೆ ಒಪ್ಪುವಂತಹ ಹೊಸ ವಿಚಾರ ಸರಣಿಯ ಬೆಳಕಿನ
ಜನತೆ ಮುನ್ನಡೆಯಬೇಕೆಂದು ಬಯಸಿದರು. ಮಾನವೀ
ಮೌಲ್ಯಗಳನ್ನೇ ಕಿತ್ತುಹಾಕುವದರಲ್ಲಿದ್ದ ಅಂದಿನ ಸಮಾ
ನೀತಿಯನ್ನು ಭಾರತೀಯ ಸಂಸ್ಕೃತಿಯ ಪುನರುತ್ಥಾನದಿಂ
ಮಾತ್ರ ನಿಯಂತ್ರಿಸಲು ಸಾಧ್ಯವೆಂದು ಜನರಿಗೆ ಮನಗಾಣಿ
ಕೊಡಲು ಯತ್ನಿಸಿದರು. ಅವರ ಚಿಂತನಪಕ್ಷಕ್ಕೆ ಮೂ
ಮುಖಗಳುಂಟು: ಸುಧಾರಣವಾದ, ಗಾಂಧೀವಾದ, ಪ್ರಜ
ಸತ್ತಾತ್ಮಕ ಸಮಾಜವಾದ. ಯುಗಾನುರೂಪವಾದ ತಮ
ಸಾಹಿತ್ಯ ಸಂವೇದನೆ ಹಾಗೂ ನೂತನ ಕಲಾತ್ಮಕ ಪ್ರತಿ
ಯಿಂದ ಪ್ರೇಮಚಂದರು ಅಂತರ್ರಾಷ್ಟ್ರೀಯ ಲಬ್ಧಪ್ರತಿ
ಸಣ್ಣಕತೆಗಾರರಲ್ಲಿ ಒಬ್ಬರೆಂದು ಪರಿಗಣಿಸ್ಪಟ್ಟಿದ್ದಾರೆ. ಇಂತ
ಶ್ರೇಷ್ಠ ಸಾಹಿತಿಗಳು ಭಾರತದ ಪುಣ್ಯ ಭೂಮಿಯ ಮೇ
ಮತ್ತೆ ಮತ್ತೆ ಅವತರಿಸಿ ತಮ್ಮ ಅಮರ ಸಂದೇಶಗಳ ಮೂಲ
ಭಾರತದ ಸರ್ವತೋಮುಖ ಅಭಿವೃದ್ಧಿಗೆ, ವಿಶ್ವಕಲ್ಯಾಣ
ಮಾರ್ಗ ಮಾಡಿಕೊಡಲೆಂದು ಹಾರೈಸೋಣ.

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಹರಿಶ್ಚಂದ್ರ ಕಾವ್ಯದಲ್ಲಿಯ ರಸಸ್ಥಾನಗಳು —ಸಿ. ಎಲ್. ಹೆರಕಲ್ಲ
೨. ಕಾರವಾರ ಜಿಲ್ಲೆಯ ಶಾಸನಗಳು —ಆರ್. ಎನ್. ಗುರವ
೩. ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ —ವೀರಣ್ಣ ರಾಜೂರ
೪. ಮಾನಸಿಕ ರೋಗಗಳು —ಎಂ. ಬಿ. ರೇಣುಕಾರ್ಯ
೫. ಕನ್ನಡದಲ್ಲಿ ಕಾದಂಬರಿ ಸಾಹಿತ್ಯ —ದು. ನಿಂ. ಬೆಳಗಲಿ
೬. ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ —ದೇವೇಂದ್ರಕುಮಾರ ಹಕಾರಿ
೭. ಮಾನವ ಮತ್ತು ಶಾಕಾಹಾರ —ಎ. ಎಸ್. ಧರಣೇಂದ್ರಯ್ಯ
೮. ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ —ಎಸ್. ಎ. ಪಾಟೀಲ
೯. ಜಾನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ —ಲೀಲಾ ತೋರಣಗಟ್ಟಿ
೧೦. ಜನಪದದಲ್ಲಿ ಮಕ್ಕಳ ಸಾಹಿತ್ಯ —ಸಂಗಮೇಶ ಎಂ. ಬಿರಾದಾರ

ವ್ಯಾಸಂಗವಿಸ್ತರಣ—ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ